**ಸಂಪುಟ: 05 ಸಂಚಿಕೆ: 75 ಪುಟಗಳು: 08 ಗುರುವಾರ 29 ಮೇ 2025**

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಧರ್ಮದ ಮಾರ್ಗ ನಮ್ಮ ಭಾವನೆಗೂ ಮೀರಿದ್ದು, ಆದರೆ ವಾತ್ಸಲ್ಯ, ತಿರಸ್ಕಾರ, ಆಸೆಯು ಭಾವನಾತ್ಮಕವಾದುದ್ದಾಗಿದೆ.

## ಮುಸ್ಲಿಂ ಮೀಸಲಾತಿ ಮಸೂದೆ: ನಿರ್ಧಾರ ಮರುಪರಿಶೀಲಿಸಲು ರಾಜ್ಯಪಾಲ ಗೆಹ್ಲೋಟ್ ನಕಾರ



• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕರ್ನಾಟಕ ಪಾರದರ್ಶಕತೆ (ತಿದ್ದುಪಡಿ) ಮಸೂದೆ, 2025ನ್ನು ಭಾರತದ ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸುವ ನಿರ್ಧಾರವನ್ನು ಮರುಪರಿಶೀಲಿಸಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ನಿರಾಕರಿಸಿದ್ದಾರೆ. ಸರ್ಕಾರಿ ಒಪ್ಪಂದಗಳಲ್ಲಿ ಮುಸ್ಲಿಮರಿಗೆ ನಾಲ್ಕು ಪ್ರತಿಶತ ಮೀಸಲಾತಿ ನೀಡುವ ಅವಕಾಶವನ್ನು ಮಸೂದೆ ಹೊಂದಿದೆ.

ಏಪ್ರಿಲ್ 16 ರಂದು ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಾಯ್ದಿರಿಸಿದ್ದಾರೆ. ಕರ್ನಾಟಕ ಸರ್ಕಾರ ಇತ್ತೀಚೆಗೆ ಗೆಹ್ಲೋಟ್ ಅವರ ಒಪ್ಪಿಗೆಯನ್ನು ಪಡೆಯಲು ಹೊಸ ಪ್ರಯತ್ನವನ್ನು ಮಾಡಿತು, ಆದರೆ ಅದನ್ನು ರಾಜ್ಯಪಾಲರು ತಿರಸ್ಕರಿಸಿದ್ದರು. ರಾಜ್ಯ ಸರ್ಕಾರ 2023ರಲ್ಲಿ ತಮಿಳುನಾಡು ರಾಜ್ಯಪಾಲರು ವಿರುದ್ಧ ತಮಿಳುನಾಡು ರಾಜ್ಯಪಾಲರ ನಡುವಿನ ಸುಪ್ರೀಂ ಕೋರ್ಟ್‌ನ ವಿಚಾರಣೆಯನ್ನು ಉಲ್ಲೇಖಿಸಿ ಕೆಟಿಪಿಪಿ (ತಿದ್ದುಪಡಿ) ಮಸೂದೆ, 2025 ನ್ನು ಮತ್ತೆ ಸಲ್ಲಿಸಿದೆ, ಇದು ನನ್ನ ಒಪ್ಪಿಗೆಯನ್ನು ಕೋರಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯಪಾಲರು ಮಸೂದೆಗಳ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಅವಲೋಕನಗಳನ್ನು ರಾಜ್ಯ ಸರ್ಕಾರ ಉಲ್ಲೇಖಿಸಿದೆ ಎಂದು ಗೆಹ್ಲೋಟ್ ಹೇಳಿದರು.

**ಧರ್ಮದ ಆಧಾರದ ಮೇಲೆ ಮೀಸಲಾತಿ**

ಇತ್ತೀಚಿನ ನ್ಯಾಯಾಧೀಶರನ್ನು ಉಲ್ಲೇಖಿಸಿರುವ ಗೆಹ್ಲೋಟ್, ಸುಪ್ರೀಂ ಕೋರ್ಟ್ 15 ಮತ್ತು 16 ನೇ ವಿಧಿಗಳು ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ನಿಷೇಧಿಸುತ್ತವೆ ಮತ್ತು ಯಾವುದೇ ಸಕಾರಾತ್ಮಕ ಕ್ರಮವು ಸಾಮಾಜಿಕ-ಆರ್ಥಿಕ ಅಂಶಗಳನ್ನು ಆಧರಿಸಿರಬೇಕು ಎಂದು ಒತ್ತಿ ಹೇಳಿದೆ ಎಂದು ಹೇಳಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆ, 2025 ರ ಮೀಸಲಾತಿಯ ನಿರ್ಧಾರವನ್ನು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳ ದಯೆಯಿಂದ ಪರಿಗಣಿಸಲು ನಾನು ಮರುಪರಿಶೀಲಿಸಬಾರದು.

15-04-2025 ರಂದು ನಿರ್ದೇಶಿಸಿದಂತೆ ಮುಂದಿನ ಅಗತ್ಯ ಕ್ರಮಕ್ಕಾಗಿ ಸರ್ಕಾರಿ ಕಡತವನ್ನು ಹಿಂತಿರುಗಿಸಿ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ವಿಜಯೇಂದ್ರಗೆ ಶಹಬ್ಬಾಸ್ ಗಿರಿ ನೀಡಿದ ರಾಜ್ಯ ಬಿಜೆಪಿ ಉಸ್ತುವಾರಿ!

• ಉದಯವಾಹಿನಿ, ಬೆಂಗಳೂರು

ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರಿಗೆ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರ್ವಾಲ್ ಅವರು ಶಹಬ್ಬಾಸ್ ಗಿರಿ ನೀಡಿದ್ದಾರೆ. ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲೇ ಬಹಿರಂಗವಾಗಿ ವಿಜಯೇಂದ್ರ ಅವರ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದರು. ರಾಜ್ಯ ಬಿಜೆಪಿಯಲ್ಲಿ ಸಂಘಟನೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮೂರು ದಿನಗಳಲ್ಲಿ ಸರಣಿ ಸಭೆಗಳನ್ನು ನಡೆಸುವ ನಿಟ್ಟಿನಲ್ಲಿ ಅಗರ್ವಾಲ್ ಅವರು ಬೆಂಗಳೂರಿಗೆ ಆಗಮಿಸಿದ್ದಾರೆ. ಮಂಗಳವಾರ ರಾಜ್ಯ ಬಿಜೆಪಿ ಮುಖಂಡರ ಜೊತೆಗೆ ಸಭೆ ನಡೆಸಿದ್ದರು. ಬುಧವಾರ ಬಿಜೆಪಿಯ ಎಲ್ಲಾ ಶಾಸಕರ ಜೊತೆಗೆ ಪ್ರತ್ಯೇಕವಾದ ಸಭೆಯನ್ನು ನಡೆಸಿ ಸಲಹೆ ಸೂಚನೆಗಳನ್ನು ನೀಡಿದರು.

ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ಮುಂದೆ ಬಹಿರಂಗವಾಗಿ ನಾನು ಅದನ್ನು ಹೇಗೆ ಹೇಳಲಿ. ಹಾಗಿದ್ದರೂ ರಾಜ್ಯಾಧ್ಯಕ್ಷರ ಕೆಲಸ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ'' ಎಂದ ಅವರು, ಇದೇ ಸಂದರ್ಭದಲ್ಲಿ ರಾಜ್ಯ ರಾಜಕೀಯದ ಕುರಿತಾದ ಸಮೀಕ್ಷೆಯ ಬಗ್ಗೆ ಮಾತನಾಡಿದ ಅವರು, ರಾಜ್ಯದಲ್ಲಿ ಇಂದು ಚುನಾವಣೆ ನಡೆದರೆ ಬಿಜೆಪಿ ಜಯಗಳಿಸಲಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಲಿದೆ'' ಎಂದು ಭವಿಷ್ಯ ನುಡಿದರು.

## 15,441 ಕೋಟಿ ರೂ. ಬಂಡವಾಳ ಹೂಡಿಕೆಗೆ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ 15,441.17 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ 6 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಂದಾಗಿ ರಾಜ್ಯದಲ್ಲಿ 5,277 ಜನರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಕೈಗಾರಿಕಾ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ. ಹೆಚ್ಚುವರಿಯಾಗಿ ಕೆಲವು ಯೋಜನೆಗಳ ಅನುಷ್ಠಾನಕ್ಕೆ ಸಮಯ ವಿಸ್ತರಣೆ ಮತ್ತು ಭೂಮಿ ಸ್ವಾಧೀನಕ್ಕೆ ಅನುಮತಿ ನೀಡಲಾಗಿದೆ. ಶ್ರೀ ಸಿಮೆಂಟ್ ಲಿಮಿಟೆಡ್ ಸಂಸ್ಥೆಯ 2406 ಕೋಟಿ ರೂ.ಗಳ ಹೊಸ ಬಂಡವಾಳ ಹೂಡಿಕೆಯ ಯೋಜನೆಯಿಂದ 300 ಉದ್ಯೋಗ, ದಾಲ್ಮಿಯಾ ಸಿಮೆಂಟ್ (ಭಾರತ್) ಲಿ.ನ 3,000 ಕೋಟಿ ರೂ.ಹೂಡಿಕೆಯಿಂದ 570 ಉದ್ಯೋಗ, ದಾಲ್ಮಿಯಾ(ಭಾರತ್) ಲಿ. ಸಂಸ್ಥೆಯ 3020 ಕೋಟಿ ರೂ. ಹೂಡಿಕೆಯಿಂದ 570 ಉದ್ಯೋಗ ಸೃಷ್ಟಿಯಾಗಲಿವೆ. ಇನ್ನು ಎಂವೀ ಎನರ್ಜಿ ಪ್ರೈ.ಲಿ ಸಂಸ್ಥೆಯ 5495 ಕೋಟಿ ರೂ. ಹೂಡಿಕೆಯಿಂದ 2508 ಉದ್ಯೋಗ ಸೃಷ್ಟಿಯಾಗಲಿವೆ. ಒಟ್ಟಾರೆ 13,921 ಕೋಟಿ ಮೊತ್ತದ ಹೊಸ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳಿಂದ ರಾಜ್ಯದಲ್ಲಿ ಒಟ್ಟಾರೆ 3,948 ಹೊಸ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ.

## ಮುಂದಿನ ತಿಂಗಳಿನಿಂದ ಅನರ್ಹರಿಗೆ ಗ್ಯಾರಂಟಿ ಯೋಜನೆ ಸಿಗಲ್ವಾ?

• ಉದಯವಾಹಿನಿ, ಬೆಂಗಳೂರು

ಪಂಚ ಗ್ಯಾರಂಟಿಗಳನ್ನ ಐದು ವರ್ಷವೂ ನೀಡುತ್ತೇವೆ ಎನ್ನುವ ವಾಗ್ದಾನದೊಂದಿಗೆ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಇದೀಗ ಅದೇ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ವಿಚಾರ ಸಚಿವರು, ಶಾಸಕರ ನೀಡುತ್ತಿರುವ ಹೇಳಿಕೆಗಳು ಗೊಂದಲವನ್ನ ಸೃಷ್ಟಿಸುತ್ತಿವೆ. ಫಲಾನುಭವಿಗಳಿಗೂ ಈ ರೀತಿಯ ಹೇಳಿಕೆಯಿಂದ ಆತಂಕ ಹೆಚ್ಚಾಗಿದೆ. ಅನರ್ಹರಿಗೆ ಕಡಿವಾಣ ಹಾಕಿ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆ ಮುಂದುವರಿಸುತ್ತೇವೆ ಎಂಬ ಶಾಸಕರು, ಸಚಿವರ ಗೊಂದಲದ ಹೇಳಿಕೆಗಳು ಇದೇ ಹೊಸದೇನಲ್ಲ. ಆದರೆ ಸಿಎಂ ಸಿದ್ದರಾಮಯ್ಯ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರೇ ಈ ರೀತಿಯ ಸ್ಫೋಟಕ ಹೇಳಿಕೆಯನ್ನ ನೀಡಿದ್ದಾರೆ. ಮಂಗಳವಾರ ಯಲಬುರ್ಗಾ ತಾಲ್ಲೂಕಿನ ಕುಕನೂರು ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿರುವ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಗ್ಯಾರಂಟಿಗಳಲ್ಲಿ ಅನರ್ಹ ಫಲಾನುಭವಿಗಳಿಗೂ ಯೋಜನೆಯ ಲಾಭ ಹೋಗುತ್ತಿದೆ. ಈ ಕುರಿತು ರಾಜ್ಯಾದ್ಯಂತ ತನಿಖೆ ಮಾಡಿಸಿ ಜುಲೈನಿಂದ ಅನರ್ಹರಿಗೆ ಗ್ಯಾರಂಟಿ ಲಾಭ ತಲುಪದಂತೆ ಕಡಿವಾಣ ಹಾಕಲಾಗುವುದು ಎಂದಿದ್ದಾರೆ. ಇದು ಇದೀಗ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ವಿಪಕ್ಷಗಳಿಗೆ ಅಸ್ತ್ರವಾಗಿದೆ. ಒಂದು ವಿಧಾನಸಭಾ ಕ್ಷೇತ್ರಕ್ಕೆ ವರ್ಷಕ್ಕೆ ಗ್ಯಾರಂಟಿ ಯೋಜನೆಯಡಿ ಅಂದಾಜು 250 ಕೋಟಿ ಹಣ ನೀಡುತ್ತಿದ್ದು, ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಿವೆ. ಆದರೆ ಅನರ್ಹ ಫಲಾನುಭವಿಗಳಿಗೆ ಕಡಿವಾಣ ಹಾಕಬೇಕು ಎನ್ನುವ ವಿಚಾರ ರಾಜಕೀಯ ವಲಯದಲ್ಲೂ ಸಂಚಲನ ಮೂಡಿಸಿದೆ.



# ಮೊಂಡುವಾದದ ಕಮಲ್ ಬಹಿಷ್ಕಾರದ ದಂಗಲ್

**ಕಮಲ ಹಾಸನ್ ಅವರಿಗೆ ಕನ್ನಡದ ಸುದೀರ್ಘ ಇತಿಹಾಸ ಗೊತ್ತಿಲ್ಲ ಸಿದ್ದರಾಮಯ್ಯ ತಿರುಗೇಟು**

**ಕನ್ನಡಿಗರಿಂದ ತೀವ್ರ ಆಕ್ರೋಶ ವ್ಯಕ್ತ**

**ಕಮಲ್ ಹಾಸನ್ ಹೇಳಿಕೆ ಉದ್ಧಟತನ, ದುರಹಂಕಾರದ ಪರಮಾವಧಿ**

## ನಟ ಶಿವರಾಜ್ ಕುಮಾರ್ ಎದುರೇ ಕಮಲ್ ಹಾಸನ್ ಕನ್ನಡಕ್ಕೆ ಅವಮಾನ

• ಉದಯವಾಹಿನಿ, ಬೆಂಗಳೂರು

ಕನ್ನಡ ಭಾಷೆಗೆ ಸುದೀರ್ಘ ಇತಿಹಾಸ ಇದೆ. ಆದರೆ ನಟ ಕಮಲ್ ಹಾಸನ್‌ಗೆ ಕನ್ನಡದ ಇತಿಹಾಸ ಗೊತ್ತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು. ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು, ತಮಿಳು ಭಾಷೆಯಿಂದ ಕನ್ನಡ ಹುಟ್ಟಿದೆ ಎಂಬ ಕಮಲ್ ಹಾಸನ್ ಹೇಳಿಕೆಯನ್ನು ವಿರೋಧಿಸಿದರು.

ನಟ ಕಮಲ್ ಹಾಸನ್ ಅವರು ತಮ್ಮ ನಟನೆಯ ಥಗ್ ಲೈಫ್ ಸಿನಿಮಾ ಪ್ರಚಾರ ಮಾಡುವ ವೇಳೆ ಕನ್ನಡಿಗರು ಕೆರಳಿಸುವಂಥ ಹೇಳಿಕೆ ನೀಡಿದ್ದರು. ಇತ್ತೀಚೆಗೆ ನಡೆದಿದ್ದ ಥಗ್ಸ್ ಲೈಫ್ ಸಿನಿಮಾದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ಅವರು ಸಮಾರಂಭದಲ್ಲಿ ಭಾಗವಹಿಸಿದ್ದ ಕನ್ನಡದ ನಟ ಶಿವರಾಜ್ ಕುಮಾರ್ ಅವರನ್ನು ಉದ್ದೇಶಿಸಿ ಮಾತನಾಡಿದ್ದರು.

ತಮಿಳು ಭಾಷೆ ನನ್ನ ಕುಟುಂಬ ಹಾಗೂ ನನ್ನ ಜೀವನ. ಅಲ್ಲಿ ಕರ್ನಾಟಕದಲ್ಲಿರುವ ಡಾ. ರಾಜ್ ಕುಟುಂಬವೂ ನನ್ನ ಕುಟುಂಬವೇ. ಹಾಗಾಗಿಯೇ ಶಿವರಾಜ್ ಕುಮಾರ್ ಅವರು ನಮ್ಮ ಈ ಸಮಾರಂಭಕ್ಕೆ ಬಂದಿದ್ದಾರೆ. ಒಂದರ್ಥದಲ್ಲಿ ತಮಿಳು ಸರ್ವವ್ಯಾಪ್ತಿಯಾಗಿದೆ. ಅದು ಹೇಗೆಂದರೆ, ಕನ್ನಡ ಹುಟ್ಟಿದ್ದೇ ತಮಿಳಿನಿಂದ. ಹಾಗಾಗಿ, ಕನ್ನಡಿಗರೂ ತಮಿಳು ಕುಟುಂಬದ ಒಂದು ಭಾಗವೇ ಆಗಿದ್ದಾರೆ ಎಂದು ಹೇಳಿದ್ದರು. ಇದಕ್ಕೆ ಕನ್ನಡಿಗರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಇದೇ ವಿಚಾರವಾಗಿ ಮಾತನಾಡಿದ್ದ ಎಂಬಿ ಪಾಟೀಲ್, ಕಮಲ್ ಹಾಸನ್ ಕನ್ನಡದ ಬಗ್ಗೆ ಎಲ್ಲಿ ಸಂಶೋಧನೆ ಮಾಡಿದ್ರಂತೆ ಕನ್ನಡ ಹುಟ್ಟಿದ್ದು ಹೇಗೆ ಅನ್ನೋದು ತಿಳಿದುಕೊಳ್ಳಬೇಕು ಚಾಲುಕ್ಯ, ಹೊಯ್ಸಳ, ಬಸವಾದಿ ಶರಣರು ಕಾಲದಲ್ಲಿ ಯಾವ ರೀತಿ ಚಳುವಳಿ ಆಯ್ತು ಕಮಲ್ ಹಾಸನ್ ಅವರಿಗೆ ತಪ್ಪು ಗ್ರಹಿಕೆ ಇರಬೇಕು. ಅತೀ ಬುದ್ದಿವಂತಿಕೆ ಆದರೆ ಹೀಗೇ ಆಗೋದು ಎಂದು ತಿರುಗೇಟು ನೀಡಿದ್ದಾರೆ.


**ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ:** ಇನ್ನು ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ''ಕನ್ನಡವು ತಮಿಳಿನಿಂದ ಹುಟ್ಟಿದ್ದು ಎಂದು ಹೇಳಿರುವುದು ನಿಜಕ್ಕೂ ಅವಿವೇಕದ ಹೇಳಿಕೆ ಎಂದು ಹೇಳಿದ್ದಾರೆ. ಕಲಾವಿದರಾದವರು, ಎಲ್ಲಾ ಭಾಷೆಗಳನ್ನೂ ಗೌರವಿಸುವ ಗುಣವನ್ನು ಹೊಂದಿರಬೇಕು. ತಮ್ಮ ಭಾಷೆಯೇ ಹೆಚ್ಚು ಎಂಬರ್ಥದಲ್ಲಿ ಸುಳ್ಳುಗಳನ್ನು ಹೇಳುವ ಮೂಲಕ ಅನ್ಯ ಭಾಷಿಗರ ಮನಸ್ಸಿಗೆ ನೋವುಂಟು ಮಾಡಬಾರದು ಎಂದು ಹೇಳಿದ್ದಾರೆ.

**ನಟ ಜಗ್ಗೇಶ್, ಚೇತನ್ ಬಿಟ್ಟು ಉಳಿದವರೇಕೆ ಮೌನ:** ನಟ ಕಮಲ್ ಹಾಸನ್, ತಮಿಳಿನಿಂದ ಕನ್ನಡ ಹುಟ್ಟಿತು ಎಂದು ಹೇಳಿ, ಕನ್ನಡಿಗರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ನಟ ಹಾಗೂ ಲೋಕಸಭಾ ಸದಸ್ಯ ಜಗ್ಗೇಶ್ ಹಾಗೂ ನಟ ಚೇತನ್ (ಆ ದಿನಗಳು ಖ್ಯಾತಿ) ಅವರು ಕಮಲ್ ಹಾಸನ್ ಹೇಳಿಕೆಯನ್ನು ವಿರೋಧಿಸಿದ್ದಾರೆ. ಕನ್ನಡಕ್ಕೆ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿದೆ ಎಂದು ವಾದಿಸಿದ್ದಾರೆ. ಉಳಿದ ಕಲಾವಿದರು ಈ ಬಗ್ಗೆ ಮೌನವಾಗಿರುವುದು ಬೇಸರ ಮೂಡಿಸಿದೆ.

### ರಾಜ್ಯಸಭೆಗೆ ಕಮಲ ಹಾಸನ್

ತಮಿಳುನಾಡಿನ ಡಿಎಂಕೆ ಪಕ್ಷವು ಹಿರಿಯ ನಟ ಕಮಲ್ ಹಾಸನ್ ಅವರನ್ನು ರಾಜ್ಯಸಭೆಗೆ ಕಳುಹಿಸಲು ನಿರ್ಧರಿಸಿದೆ. ಇದೇ ಜೂ. 19ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಯಲ್ಲಿ ಐವರು ಅಭ್ಯರ್ಥಿಗಳನ್ನು ಡಿಎಂಕೆ ಕಣಕ್ಕಿಳಿಸಲಿದ್ದು ಅವರಲ್ಲೊಬ್ಬರು ಕಮಲ ಹಾಸನ್ ಆಗಿದ್ದಾರೆ. ಈ ಕುರಿತಂತೆ ಮೇ 28ರಂದು ಡಿಎಂಕೆ ಪ್ರಕಟಣೆ ನೀಡಿದೆ. ರಾಜ್ಯಸಭೆಯಲ್ಲಿ ಡಿಎಂಕೆಯ 10 ಸದಸ್ಯರಿದ್ದಾರೆ. ಅವರಲ್ಲಿ ಐವರ ಅಧಿಕಾರಾವಧಿ ಜುಲೈ 25ಕ್ಕೆ ಮುಕ್ತಾಯವಾಗಲಿದೆ. ಆ ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಡಿಎಂಕೆ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ.

### ಕಮಲ್ ಹಾಸನ್ ಮಾತು ಒಪ್ಪಲ್ಲ




ಕಲೆಗೆ ಜಾತಿ ಇಲ್ಲ. ಎಲ್ಲಾ ಭಾಷೆಯ ಕಲಾವಿದರು ಶಾರದಾಸುತರು ಒಪ್ಪುತ್ತೇವೆ. ಆ ನಿಟ್ಟಿನಲ್ಲಿ ಕಮಲ್ ಹಾಸನ್ ಅವರನ್ನು ಮೆಚ್ಚಿದ್ದೇವೆ. ಹಾಗಂತ ಕನ್ನಡ ತಮಿಳಿಂದ ಹುಟ್ಟಿದೆ ಎಂದ ಅವರ ಮಾತು ಒಪ್ಪಲ್ಲ. ಕನ್ನಡಕ್ಕೆ ಎರಡೂವರೆ ಸಾವಿರ ವರ್ಷದ ಇತಿಹಾಸವಿದೆ. ಅಷ್ಟೇಕೆ ಹನುಮದೇವರು ಕನ್ನಡ ಕಲಿಪುಂಗವ ಅವನ ಕಾಲ ರಾಮಾಯಣ ಇಷ್ಟು ಅರ್ಥವಾದರೆ ಸಾಕಲ್ಲವೆ ಸಾರ್ ಎಂದು ಜಗ್ಗೇಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಕಮಲ್ ಹಾಸನ್ ಒಬ್ಬ ಹುಚ್ಚ




ಕರುನಾಡಿಗೆ ಬರಲು ಅವಕಾಶ ನೀಡಬಾರದು' ಕಮಲ್ ಹಾಸನ್ ಒಬ್ಬ ಹುಚ್ಚ. ಕನ್ನಡ ಸಿನಿಮಾದಲ್ಲಿ ಆತನಿಗೆ ಅವಕಾಶ ಸಿಕ್ಕಿತ್ತು. ಕನ್ನಡವನ್ನು ಅವಹೇಳನ ಮಾಡುವುದನ್ನು ನೋಡಿದರೆ ಆತನೊಬ್ಬ ನಗರ ನಕ್ಸಲ ಎಂಬುದು ಸ್ಪಷ್ಟವಾಗಿದೆ. ಎಲ್ಲಾ ಕನ್ನಡಿಗರು ಕಮಲ್ ಹಾಸನ್‌ಗೆ ಬಹಿಷ್ಕಾರ ಹಾಕಬೇಕು. ರಾಜ್ಯದೊಳಗೆ ಬರಲು ಕೂಡ ಅವಕಾಶ ನೀಡಬಾರದು. ಕನ್ನಡಕ್ಕೆ ದ್ರೋಹ ಬಗೆದ ಈತನ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಬಾರದು. ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಹೇಳಿದರು.

### ಮುಖಕ್ಕೆ ಕಪ್ಪು ಮಸಿ ಬಳಿಯಲು ಸ್ಥಳಕ್ಕೆ ತೆರಳಿತ್ತು




ನೀವು ಕರ್ನಾಟಕದಲ್ಲಿ ವ್ಯವಹಾರ ಮಾಡಲು ಮತ್ತು ನಿಮ್ಮ ಸಿನಿಮಾಗಳನ್ನು ಪ್ರದರ್ಶಿಸಲು ಬಯಸುತ್ತಿರುವುದೇ ಆದರೆ, ಕನ್ನಡ ಮತ್ತು ಕನ್ನಡಿಗರನ್ನು ಅವಮಾನಿಸುವುದನ್ನು ನಿಲ್ಲಿಸಿ. ನಿಮ್ಮ ಸಿನಿಮಾ ಪ್ರಚಾರ ಮಾಡಲು ಇಲ್ಲಿಗೆ ಬಂದಿದ್ದಿರಿ. ವಿವಾದಾತ್ಮಕ ಹೇಳಿಕೆ ಬಳಿಕ ಕರ್ನಾಟಕ ರಕ್ಷಣಾ ವೇದಿಕೆ ಅವರ ಮುಖಕ್ಕೆ ಕಪ್ಪು ಮಸಿ ಬಳಿಯಲು ಸ್ಥಳಕ್ಕೆ ತೆರಳಿತ್ತು. ಆದರೆ, ಅಷ್ಟರಲ್ಲಾಗಲೇ ಅವರು ಸ್ಥಳದಿಂದ ನಿರ್ಗಮಿಸಿದ್ದರು ಎಂದು ಕನ್ನಡಪರ ಹೋರಾಟಗಾರ ಪ್ರವೀಣ್ ಶೆಟ್ಟಿ ತಿಳಿಸಿದ್ದಾರೆ.

### ನಿಷೇಧ ಮಾಡಬೇಕು



ಕನ್ನಡದ ಬಗ್ಗೆ ಹಗುರವಾಗಿ ಮಾತಾಡೋದು ಬಿಟ್ಟು ಕ್ಷಮೆ ಕೇಳಬೇಕು. ಹೀಗೆ ಮಾತಾಡಿ ಗಾಯಕ ಸೋನು ನಿಗಮ್ ಕ್ಷಮೆ ಕೇಳಿದ್ದಾರೆ. ಅದರಂತೆ ಕಮಲ್ ಹಾಸನ್ ಕ್ಷಮೆ ಕೇಳಬೇಕು. ಅವರು ಕ್ಷಮೆ ಕೇಳದೇ ಹೋದರೇ ಅವರನ್ನ ಬ್ಯಾನ್ ಮಾಡಬೇಕು. ಕಮಲ್ ಹಾಸನ್ ಮಾತ್ರವಲ್ಲ, ಯಾರೇ ಹೀಗೆ ಕನ್ನಡದ ಬಗ್ಗೆ ಮಾತನಾಡಿದರೂ ಅವರನ್ನು ನಿಷೇಧ ಮಾಡಬೇಕು ಎಂದು ಚಲನಚಿತ್ರ ವಾಣಿಜ್ಯ ಮಂಡಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಒತ್ತಾಯ ಮಾಡಿದರು. ಕಮಲ್ ಹಾಸನ್ ಮಾತನಾಡುವಾಗ ನಟ ಶಿವರಾಜ್ ಕುಮಾರ್ ಅಲ್ಲೇ ಇದ್ದರೂ ಅದನ್ನ ವಿರೋಧ ಮಾಡಲಿಲ್ಲ. ಶಿವರಾಜ್ ಕುಮಾರ್ ಈಗಲಾದರೂ ಖಂಡಿಸಲಿ. ರಾಜ್‌ಕುಮಾರ್ ಮಗನಾಗಿ ಕಮಲ್ ಹಾಸನ್ ಹೇಳಿಕೆ ಖಂಡಿಸಬೇಕು. ಹೇಳಿಕೆ ಹೇಳಿದ ಕೂಡಲೇ ಖಂಡಿಸಬೇಕಿತ್ತು. ಈಗಲಾದರೂ ಶಿವರಾಜ್ ಕುಮಾರ್ ಕಮಲ್ ಹಾಸನ್ ಹೇಳಿಕೆ ಖಂಡಿಸಲಿ ಎಂದು ಅಸಮಾಧಾನ ಹೊರಹಾಕಿದರು.

### ವಾಟಾಳ್ ಖಂಡನೆ



ಕಮಲ್ ಹಾಸನ್ ಈ ಕೂಡಲೇ ಕ್ಷಮೆಯಾಚಿಸಬೇಕು, ಅವರ ಹೇಳಿಕೆ ಖಂಡನೀಯ . ಅಲ್ಲದೆ, ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಬರೀ ಕ್ಷಮಾಪಣೆ ಕೇಳಿದ್ರೆ ಸಾಲಲ್ಲ, ರಾಜ್ಯಕ್ಕೆ ಪ್ರವೇಶಿಸದಂತೆ ಬಹಿಷ್ಕಾರ ಹಾಕಬೇಕು. ಕರ್ನಾಟಕದಲ್ಲಿ ನಟ 'ಕಮಲ್ ಹಾಸನ್ 'ಚಿತ್ರಗಳನ್ನು ಬಹಿಷ್ಕಾರ ಹಾಕಬೇಕಾಗುತ್ತದೆ ಎಂದು ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದ್ದಾರೆ.

ಮಾತೃಭಾಷೆಯನ್ನು ಪ್ರೀತಿಸಬೇಕು, ಆದರೆ, ಅದರ ಹೆಸರಿನಲ್ಲಿ ದುರಭಿಮಾನ ಮೆರೆಯುವುದು ಸಂಸ್ಕೃತಿ ಹೀನ ನಡವಳಿಕೆಯಾಗುತ್ತದೆ. ಅದರಲ್ಲೂ ಕಲಾವಿದರಿಗೆ ಪ್ರತಿಯೊಂದು ಭಾಷೆಯನ್ನೂ ಗೌರವಿಸುವ ಸಂಸ್ಕಾರ ಇರಬೇಕು. ಕನ್ನಡವೂ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ನಟಿಸಿರುವ ನಟ ಕಮಲ್ ಹಾಸನ್ ತಮ್ಮ ತಮಿಳು ಭಾಷೆಯನ್ನು ವೈಭವೀಕರಿಸುವ ಮತ್ತಿನಲ್ಲಿ ನಟ ಶಿವರಾಜ್ ಕುಮಾರ್ ಅವರನ್ನೂ ಕುಳ್ಳಿರಿಸಿಕೊಂಡು ಕನ್ನಡವನ್ನು ಅವಮಾನಿಸಿರುವುದು ಉದ್ಧಟತನ ಹಾಗೂ ದುರಹಂಕಾರದ ಪರಮಾವಧಿ

-ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

### ಮತ್ತೆ ಕಮಲ್ ಮೊಂಡಾಟ ಕ್ಷಮೆ ಕೇಳಲ್ಲ ಎಂದ ನಟ

ಕನ್ನಡ ತಮಿಳಿನಿಂದ ಹುಟ್ಟಿದೆ ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದ ಕಮಲ್ ಹಾಸನ್ ವಿರುದ್ಧ ಆಕ್ರೋಶ ಹೆಚ್ಚಾದ ಬೆನ್ನಲ್ಲೇ ನಟ ಮತ್ತೆ ಮೊಂಡಾಟವಾಡಿದ್ದಾರೆ. ನಾನು ಹೇಳಿದ್ದು ನನ್ನ ಪ್ರಕಾರ ಸರಿ, ನಾನು ಕ್ಷಮೆ ಕೇಳಲ್ಲ ಎಂದು ಉದ್ಧಟತನ ಮೆರೆದಿದ್ದಾರೆ. ಕೇರಳದಲ್ಲಿ ನಡೆದ ಸಿನಿಮಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾಷೆ ಬಗ್ಗೆ ಮಾತಾಡಲು ರಾಜಕಾರಣಿಗಳಿಗೆ ಅರ್ಹತೆ ಇಲ್ಲ. ಅನೇಕ ಇತಿಹಾಸಕಾರರು ನನಗೆ ಭಾಷಾ ಇತಿಹಾಸವನ್ನು ಕಲಿಸಿದ್ದಾರೆ. ತಮಿಳುನಾಡು ಒಂದು ವಿಶಾಲ ಹೃದಯ ರಾಜ್ಯ. ಮಲಯಾಳಂನ ಮೆನನ್, ತೆಲುಗಿನ ರೆಡ್ಡಿ, ಕನ್ನಡದ ಐಯ್ಯಂಗಾರ್ ತಮಿಳುನಾಡು ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಭಾಷೆ ಬಗ್ಗೆ ಆಳವಾದ ಚರ್ಚೆಗಳು ನಡೆಯಲಿ. ಇದನ್ನು ಇತಿಹಾಸಕಾರರು, ಪುರಾತತ್ವ ಶಾಸ್ತ್ರಜ್ಞರು ಮತ್ತು ಭಾಷಾ ತಜ್ಞರಿಗೆ ಬಿಡೋಣ ಎಂದು ಸ್ಪಷ್ಟನೆ ನೀಡಿದರು. ನಾನು ಪ್ರೀತಿಯಿಂದಲೇ ಹೇಳಿದ್ದು, ನಾನು ಸಮಸ್ಯೆಗೆ ಸಿಲುಕಿದಾಗ ನನಗೆ ಬೆಂಬಲವಾಗಿ ಕನ್ನಡಿಗರು ನಿಂತಿದ್ರು. ಚೆನ್ನೈನಲ್ಲಿ ಸಮಸ್ಯೆ ಆದಾಗ ಕನ್ನಡಿಗರು ಸಪೋರ್ಟ್ ಮಾಡಿದ್ರು. ನನ್ನ ಸಿನಿಮಾಗಳನ್ನ ಅಭಿಮಾನಿಗಳು ನೋಡ್ತಾರೆ, ರಾಜಕಾರಣಿಗಳಿಗೆ ಭಾಷಾ ಜ್ಞಾನ ಇಲ್ಲ. ನನ್ನ ಪ್ರಕಾರ ನನ್ನ ಹೇಳಿಕೆ ಸರಿ ಇದೆ ಎಂದು ಸಮರ್ಥನೆ ಮಾಡಿಕೊಂಡರು.

## ಬಿಜೆಪಿಯಲ್ಲಿ ಇನ್ನೂ 10-12 ಖಾಲಿಯಾಗುತ್ತೆ : ಎಸ್.ಟಿ.ಸೋಮಶೇಖರ್

**● ಅಮಿತ್ ಶಾ ಅವರು ದೂರವಾಣಿ ಕರೆಯನ್ನು ಮಾಡಿದ್ದರು, ಅವರಿಗೆ ನನ್ನ ಎಲ್ಲಾ ಸಮಸ್ಯೆಗಳನ್ನು ಹೇಳಿದ್ದೆ**

• ಉದಯವಾಹಿನಿ, ಬೆಂಗಳೂರು

ಬಿಜೆಪಿಯ ರಾಜ್ಯಾಧ್ಯಕ್ಷರಾಗಲಿ ಅಥವಾ ವಿರೋಧ ಪಕ್ಷದ ನಾಯಕರು ನನ್ನನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲಿಲ್ಲ. ಒಂದು ವೇಳೆ ಅವರು ಪ್ರಯತ್ನವನ್ನು ಮಾಡಿದ್ದರೆ, ಇಂದು ನಾನು ಬಿಜೆಪಿಯಿಂದ ಉಚ್ಚಾಟನೆಗೊಳ್ಳುತ್ತಿರಲಿಲ್ಲ ಎಂದು ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

ಬಿಜೆಪಿಯ ಪ್ರಾಥಮಿಕ ಸದಸ್ಯತ್ವದಿಂದ ಸೋಮಶೇಖರ್ ಮತ್ತು ಯಲ್ಲಾಪುರದ ಶಾಸಕ ಶಿವರಾಂ ಹೆಬ್ಬಾರ್ ಅವರನ್ನು ಬಿಜೆಪಿಯ ಶಿಸ್ತು ಸಮಿತಿ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಿತ್ತು. ಇದು ನಿರೀಕ್ಷಿತವಾಗಿದ್ದರೂ, ಈ ನಿರ್ಧಾರ ತೆಗೆದುಕೊಳ್ಳಲು ಬಿಜೆಪಿಯ ಹೈಕಮಾಂಡ್ ಎರಡು ವರ್ಷಗಳ ಸಮಯವನ್ನು ಯಾಕೆ ತೆಗೆದುಕೊಂಡಿತು ಎನ್ನುವುದು ಪ್ರಶ್ನೆಯಾಗಿತ್ತು.

**ಆರು ವರ್ಷಗಳ ಕಾಲ ಉಚ್ಚಾಟನೆ**

ನನ್ನ ಮತ್ತು ಹೆಬ್ಬಾರ್ ಅವರ ಉಚ್ಚಾಟನೆಯ ನಂತರ ಬಿಜೆಪಿಯ ಸಂಖ್ಯೆ 62ಕ್ಕೆ ಇಳಿದಿದೆ, ಇದು ಬರ್ತಾ ಬರ್ತಾ ಇನ್ನೂ ಇಳಿಯುತ್ತೆ. 10 - 12 ಶಾಸಕರು ಅಲ್ಲಿಂದ ಹೊರಬರಲಿದ್ದಾರೆ. ಮುಂದಿನ ದಿನಗಳಲ್ಲಿ ನಿಮಗೂ ಇದು ಗೊತ್ತಾಗಲಿದೆ. ಅವರು ಯಾರೆಲ್ಲಾ ಎನ್ನುವ ಮಾಹಿತಿಯನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ ಎಂದು ಸೋಮಶೇಖರ್ ಹೇಳಿದ್ದಾರೆ.

ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ವೇಳೆ, ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿದ್ದ ಹದಿನಾರು ಶಾಸಕರು ರಾಜೀನಾಮೆಯನ್ನು ನೀಡಿದ್ದರು. ಇದರಿಂದಾಗಿ, ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರು. ಆ ಪೈಕಿ, ಸೋಮಶೇಖರ್ ಕೂಡಾ ಒಬ್ಬರು. ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದ ಸೋಮಶೇಖರ್, ಅಮಿತ್ ಶಾ ಅವರು ದೂರವಾಣಿ ಕರೆಯನ್ನು ಮಾಡಿದ್ದರು, ಅವರಿಗೆ ನನ್ನ ಎಲ್ಲಾ ಸಮಸ್ಯೆಗಳನ್ನು ಹೇಳಿದ್ದೆ. ಕ್ಷೇತ್ರದಲ್ಲಿ ಯಾವ ರೀತಿ ತೊಂದರೆಯಾಗುತ್ತಿದೆ ಎನ್ನುವುದನ್ನು ವಿವರಿಸಿದ್ದೆ. ಎಲ್ಲವನ್ನೂ ಸರಿ ಪಡಿಸುತ್ತೇವೆ ಎಂದು ಹೇಳಿದ್ದರು. ಆದರೆ, ರಾಜ್ಯದ ನಾಯಕರು ಸಹಕಾರವನ್ನು ನೀಡಲಿಲ್ಲ ಎಂದು ಅವರು ವಿವರಣೆಯನ್ನು ನೀಡಿದ್ದಾರೆ.

ಮತ್ತೊಬ್ಬ ಒಕ್ಕಲಿಗ ಸಮುದಾಯದ ನಾಯಕ, ಬಿಜೆಪಿಯಲ್ಲಿ ಬೆಳೆಯಬಾರದು ಎನ್ನುವ ಉದ್ದೇಶವನ್ನು ವಿರೋಧ ಪಕ್ಷದ ನಾಯಕರು ಇಟ್ಟುಕೊಂಡಿರಬೇಕು. ಅದಕ್ಕಾಗಿಯೇ, ನನ್ನನ್ನು ಪಕ್ಷದಲ್ಲಿ ಉಳಿಸಿಕೊಳ್ಳಲು ಪ್ರಯತ್ನವನ್ನು ಮಾಡದೇ ಇದ್ದಿರಬಹುದು ಎಂದು, ವಿಪಕ್ಷದ ನಾಯಕ ಆರ್. ಅಶೋಕ್ ವಿರುದ್ದ ಸೋಮಶೇಖರ್ ಕಿಡಿಕಾರಿದರು. ಅವರು ಪ್ರಯತ್ನ ಮಾಡದೇ ಇರುವುದಕ್ಕೆ ನನಗೂ ಸಂತೋಷವಿದೆ, ನಾನು ಒಂದು ವರ್ಷದಿಂದ ಅಂತರ ಕಾಯ್ದುಕೊಂಡಿದ್ದೆ. ಯಾವುದೇ ಸಮಯದಲ್ಲಿ ನಾನು ಉಚ್ಚಾಟನೆಗೊಂಡು, ಸ್ವತಂತ್ರಗೊಳ್ಳಬಹುದು ಎಂದು ನಾನು ಕೂಡಾ ನಿರೀಕ್ಷಿಸಿದ್ದೆ ಎಂದು ಸೋಮಶೇಖರ್, ಬಿಜೆಪಿ ಶಿಸ್ತು ಸಮಿತಿಯ ನಿರ್ಧಾರವನ್ನು ಸ್ವಾಗತಿಸಿದ್ದಾರೆ.

### ಕಾರ್ಯಕರ್ತರ ಜೊತೆ ಮಾತುಕತೆ ನಡೆಸಬೇಕಿದೆ



ಬಿಜೆಪಿಯಲ್ಲಿ ಒಂದು ಹೆಜ್ಜೆ, ಕಾಂಗ್ರೆಸ್ಸಿನಲ್ಲಿ ಒಂದು ಹೆಜ್ಜೆ ಎಂದು ಕ್ಷೇತ್ರದ ಜನತೆ ಮಾತನಾಡಿಕೊಳ್ಳುತ್ತಿದ್ದರು. ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಸರ್ಕಾರೀ ಕಾರ್ಯಕ್ರಮಗಳಿದ್ದರೆ, ಬಿಜೆಪಿ ನಾಯಕ ಸೋಮಶೇಖರ್, ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಎಂದು ಸುದ್ದಿಯಾಗಿತ್ತು. ಇನ್ನು ಆ ಸಮಸ್ಯೆಯಿಲ್ಲ, ನನಗೆ ಈ ವಿದ್ಯಮಾನ ರಾಜಕೀಯವಾಗಿ ಹಿನ್ನಡೆ ಆಗುತ್ತೋ ಎನ್ನುವುದರ ಬಗ್ಗೆ ಆಲೋಚನೆ ಮಾಡಲು ನಾನು ಹೋಗಿಲ್ಲ ಎಂದು ಸೋಮಶೇಖರ್ ಅಭಿಪ್ರಾಯ ಪಟ್ಟಿದ್ದಾರೆ. 2028ರ ಚುನಾವಣೆಗೆ ಇನ್ನೂ ಮೂರು ವರ್ಷವಿದೆ, ಕ್ಷೇತ್ರದ ಮುಖಂಡರು/ಕಾರ್ಯಕರ್ತರ ಜೊತೆ ಮಾತುಕತೆ ನಡೆಸಬೇಕಿದೆ. ಇನ್ನು ಕೆಲವು ದಿನಗಳಲ್ಲಿ ಎಲ್ಲಾರ ಅಭಿಪ್ರಾಯ ತೆಗೆದುಕೊಳ್ಳುವ ಕೆಲಸ ಶುರು ಮಾಡಲಿದ್ದೇನೆ ಎಂದು ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,748/Gram24ct ₹8,935/Gram22ct ಬೆಳ್ಳಿ: ₹100.00/Gram

## ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ಕಾರ್ಯ ಪರಿಶೀಲಿಸಿದ ಕೆ.ಹೆಚ್.ಮುನಿಯಪ್ಪ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ಕಾರ್ಯವನ್ನು ಆಹಾರ ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಪರಿಶೀಲಿಸಿದರು. ಬೆಂಗಳೂರು ನಗರದ ಗೆದ್ದಲಹಳ್ಳಿ, ಸಂಜಯನಗರ ಸೇರಿದಂತೆ ಇತರೆ ಸ್ಥಳಗಳಲ್ಲಿ ಮನೆಗಳಿಗೆ ಭೇಟಿ ನೀಡಿ, ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆಯ ಕಾರ್ಯವಿಧಾನಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ನಾಗರಿಕರೊಂದಿಗೆ ಮಾತನಾಡಿದ ಸಚಿವರು, ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆಯ ಸಂದರ್ಭದಲ್ಲಿ, ತಮ್ಮ ಮೂಲ ಜಾತಿಯನ್ನು ನೋಂದಣಿ ಮಾಡಲು ತಿಳಿಸಿದರು.

## ಬಿಎಂಟಿಸಿಯಿಂದ ದಿವ್ಯ ದರ್ಶನ ವೀಕೆಂಡ್ ಟೂರ್ ಪ್ಯಾಕೇಜ್ ಅವಕಾಶ

• ಉದಯವಾಹಿನಿ, ಬೆಂಗಳೂರು

ನಗರದ ಪ್ರಸಿದ್ಧ ದೇವಾಲಯಗಳ ದರ್ಶನಕ್ಕಾಗಿ ಸಾರ್ವಜನಿಕರಿಗೆ ಬಿಎಂಟಿಸಿ ಹೊಸ ವೀಕೆಂಡ್ ಟೂರ್ ಪ್ಯಾಕೇಜ್‌ನ್ನು ಘೋಷಣೆ ಮಾಡಿ, ಚಾಲನೆ ನೀಡಿದೆ. 8 ಪ್ರಸಿದ್ಧ ದೇವಾಲಯಗಳ ವೀಕ್ಷಣೆಯ ಒನ್ ಡೇ ಟೆಂಪಲ್ ಟೂರ್ ಯೋಜನೆಗೆ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಚಾಲನೆ ನೀಡಿದರು. ದಿವ್ಯ ದರ್ಶನ ಹೆಸರಿನಲ್ಲಿ ಬೆಂಗಳೂರಿನ ಗಾಳಿ ಆಂಜನೇಯ ಸ್ವಾಮಿ, ರಾಜರಾಜೇಶ್ವರಿ ದೇವಸ್ಥಾನ, ಶೃಂಗಗಿರಿ ಷಣ್ಮುಖ ದೇವಾಸ್ಥಾನ, ಕುರುಮಾರಿಅಮ್ಮ ದೇವಾಲಯ, ಓಂಕಾರ ಹಿಲ್ಸ್, ಇಸ್ಕಾನ್ ವೈಕುಂಠ ದೇವಾಲಯ, ಆರ್ಟ್ ಆಫ್ ಲಿವಿಂಗ್, ಬನಶಂಕರಿ ದೇವಾಲಯ ದರ್ಶನ ಮಾಡಿಸಲಾಗುತ್ತದೆ. ವಾರಾಂತ್ಯದಲ್ಲಿ ಬೆಳಿಗ್ಗೆ 6:30ಕ್ಕೆ ಮೆಜೆಸ್ಟಿಕ್‌ನಿಂದ ಎಸಿ ಬಸ್‌ನಲ್ಲಿ ಹೊರಟು ಸಂಜೆ 6:30ಕ್ಕೆ ಮತ್ತೆ ಮೆಜೆಸ್ಟಿಕ್‌ಗೆ ವಾಪಸ್ ಬಂದು ಸೇರಲಿದೆ. ವಯಸ್ಕರಿಗೆ 450 ರೂ., ಮಕ್ಕಳಿಗೆ 350 ರೂ. ದರ ನಿಗದಿ ಮಾಡಲಾಗಿದ್ದು, ಇದೇ ವಾರಾಂತ್ಯದಿಂದ ಪ್ಯಾಕೇಜ್ ಸೌಲಭ್ಯಗಳು ಸಿಗಲಿವೆ

## ಪಾದಚಾರಿ ಮಾರ್ಗ ಒತ್ತುವರಿ ತೆರವು

• ಉದಯವಾಹಿನಿ, ಪೀಣ್ಯ ದಾಸರಹಳ್ಳಿ

ಹೆಸರುಘಟ್ಟ ಮುಖ್ಯರಸ್ತೆಯಲ್ಲಿರುವ ಆತ್ಮೀಯ ಗೆಳೆಯರ ಬಳಗ ಬಡಾವಣೆಯಲ್ಲಿ ಬಿಬಿಎಂಪಿ ಸಿಬ್ಬಂದಿ, ಪೊಲೀಸ್ ಬಂದೋಬಸ್ತ್‌ನಲ್ಲಿ ರಸ್ತೆ ಬದಿಯ ಅಂಗಡಿ ಹಾಗೂ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಿದರು.ದಾಸರಹಳ್ಳಿ ವಲಯ ಆಯುಕ್ತ ನವೀನ್ ಕುಮಾರ್ ಅವರ ಆದೇಶದ ಮೇರೆಗೆ ಸಹಾಯಕ ಇಂಜಿನಿಯರ್ ಮಂಜೇಗೌಡ ನೇತೃತ್ವದಲ್ಲಿ ಬಿಬಿಎಂಪಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ತೆರವುಗೊಳಿಸಿದ ರಸ್ತೆ ಬದಿಯ ಅಂಗಡಿಗಳು, ನಾಮಫಲಕ ಇತ್ಯಾದಿಗಳನ್ನು ಬಿಬಿಎಂಪಿ ಸಿಬ್ಬಂದಿ ಐದಾರು ಟ್ರ್ಯಾಕ್ಟರ್‌ಗಳಲ್ಲಿ ತುಂಬಿಕೊಂಡರು. ಪಾದಚಾರಿ ಮಾರ್ಗದಲ್ಲಿದ್ದ ಗೋಡೆಗಳನ್ನು ತೆರವುಗೊಳಿಸಿದರು. ಮೊದಲೇ ಹೇಳಿದ್ದರೆ ನಾವೇ ತೆಗೆಯುತ್ತಿದ್ದೆವು. ಸಾಲ ಮಾಡಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದೇವೆ. ನಮ್ಮ ಹೊಟ್ಟೆ ಮೇಲೆ ಹೊಡೆಯುವ ಕೆಲಸವನ್ನು ಬಿಬಿಎಂಪಿ ಮಾಡಿದೆ ಎಂದು ಅಂಗಡಿಯವರು ಆಕ್ರೋಶ ವ್ಯಕ್ತಪಡಿಸಿದರು. ಚಿಕ್ಕಬಾಣಾವರ ಸಂಚಾರ ಪೊಲೀಸ್ ಇನ್‌ಸ್ಪೆಕ್ಟರ್ ಕೇಶವಮೂರ್ತಿ ಎನ್.ಎನ್, ಪಿಎಸ್‌ಐ ಅಶ್ವತ್ಥಯ್ಯ, ಎಎಸ್‌ಐ ವೆಂಕಟೇಶ ಮೂರ್ತಿ, ಮಂಜುನಾಥ್, ಸಂಜೀವ್, ಸೋಲದೇವನಹಳ್ಳಿ ಪೊಲೀಸ್ ಠಾಣೆಯ ಧನಂಜಯ್, ವಿಜಯ್ ಕುಮಾರ್, ಮಾಳಪ್ಪ ಕಾರ್ಯಾಚರಣೆ ವೇಳೆ ಬಂದೋಬಸ್ತ್‌ನಲ್ಲಿದ್ದರು. ಬಿಬಿಎಂಪಿ ಅಧಿಕಾರಿಗಳಾದ ಮಂಜೇಗೌಡ, ತನಯ್ ಕುಮಾರ್, ಜೆ.ಎಚ್.ಐ ಸುರೇಶ್, ರಘುನಾಥ್ ಕಾರ್ಯಾಚರಣೆಯ ನೇತೃತ್ವವಹಿಸಿದ್ದರು.

## ಅಧಿಕಾರಿ, ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಹಲ್ಗಾಮ್‌ನಲ್ಲಿ ರಾಜ್ಯೋತ್ಸವ ಅಚರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಪಹಲ್ಗಾಮ್

ಇಪ್ಪತ್ತಾರು ಹಿಂದೂಗಳ ನರಮೇಧ ನಡೆದ ಕಾಶ್ಮೀರದ ಪಹಲ್ಗಾಮ್‌ನಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ನಡೆಸಲು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ತೀರ್ಮಾನಿಸಿದೆ. ಈಗಾಗಲೇ ದೇಶದ ಹಲವಾರು ಪ್ರದೇಶಗಳಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಚರಿಸಿ ಕನ್ನಡದ ಕಂಪನ್ನು ನಾಡಿನ ಹಲವೆಡೆ ಹರಡಿಸಿರುವ ಸಂಘ ಈ ಬಾರಿ ಪಹಲ್ಗಾಮ್‌ನಲ್ಲಿ ರಾಜ್ಯೋತ್ಸವ ಆಚರಿಸಲು ನಿರ್ಧರಿಸಿದೆ. ನ.22 ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಚರಿಸಲಾಗು ತ್ತಿರುವ – ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವದಲ್ಲಿ ಕನ್ನಡ – ನಾಡು–ನುಡಿಗೆ ದುಡಿದ ಹಲವಾರು ಗಣ್ಯರನ್ನು ಸನ್ಮಾನಿಸಲಾಗುತ್ತಿದೆ. ಹೀಗಾಗಿ ಸಂಘದ ವತಿಯಿಂದ ಕಾರ್ಯಕ್ರಮದ – ಪೂರ್ವಭಾವಿ ಸಿದ್ಧತೆಗಳನ್ನು ಆರಂಭಿಸಲಾಗಿದ್ದು, – ಸಂಘದ ಅಧ್ಯಕ್ಷ ಅಮೃತ್ ರಾಜ್ ಅವರು ಇತರ – ಕೆಲವ ಪದಾಧಿಕಾರಿ ಗಳೊಂದಿಗೆ ಪಹಲ್ಗಾಮ್ ತೆರಳಿ ಕಾರ್ಯಕ್ರಮ ಆಯೋಜನೆ ಕುರಿತಂತೆ ಪರಿಶೀಲನೆ – ನಡೆಸುತ್ತಿದ್ದಾರೆ.

# ಮಾಜಿ ಯೋಧರಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಲು ಚಿಂತನೆ

### ಕಾಂಗ್ರೇಸ್ ಪಕ್ಷದ ಸೈನಿಕರ ವಿಭಾಗದ ಅಧ್ಯಕ್ಷರಾದ ಮಲ್ಲಿಕಾರ್ಜುನ ಅವರ ಸಲಹೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿರುವ ಎಲ್ಲಾ ಮಾಜಿ ಯೋಧರಿಗೆ ನೆರವಾಗಲು ಪ್ರತ್ಯೇಕ ನಿಗಮ (ಕಾರ್ಪೊರೇಷನ್) ಸ್ಥಾಪಿಸಲು ಚಿಂತನೆ ನಡೆಸಲಾಗಿದ್ದು, ಈ ವಿಚಾರವನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಅವರು ತಿಳಿಸಿದರು. ನಗರದ ಟೌನ್ ಹಾಲ್‌ನಲ್ಲಿ ಬುಧವಾರ ನಡೆದ ಜೈ ಹಿಂದ್ ಸಭಾ ಕಾರ್ಯಕ್ರಮದಲ್ಲಿ ದೇಶಕ್ಕೆ ಸೇವೆ ಸಲ್ಲಿಸಿದ ಹಿರಿಯ ಸೇನಾಧಿಕಾರಿಗಳು ಹಾಗೂ ಮಾಜಿ ಯೋಧರು, ಹುತಾತ್ಮರಾದ ಯೋಧರ ಕುಟುಂಬ ಸದಸ್ಯರನ್ನು ಸನ್ಮಾನಿಸಿದ ನಂತರ ಶಿವಕುಮಾರ್ ಅವರು ಮಾತನಾಡಿದರು. ಕಾಂಗ್ರೇಸ್ ಪಕ್ಷದ ಸೈನಿಕರ ವಿಭಾಗದ ಅಧ್ಯಕ್ಷರಾದ ಮಲ್ಲಿಕಾರ್ಜುನ ಅವರ ಸಲಹೆ ಮೇರೆಗೆ ಕಾರ್ಪೊರೇಷನ್ ರಚಿಸಲು ಆಲೋಚಿಸುತ್ತಿದ್ದೇವೆ. ನಮ್ಮ ದೇಶಕ್ಕೆ ಸೇವೆ ಸಲ್ಲಿಸಿರುವ ಯೋಧರ ರಕ್ಷಣೆಗೆ ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಸೇನೆಯಲ್ಲಿ ಸೇವೆ


ಉದಯವಾಹಿನಿ ಚಿತ್ರ

ಸಲ್ಲಿಸಿರುವ ಹಿರಿಯ ಸೇನಾಧಿಕರಿಗಳು, ಮಾಜಿ ಯೋಧರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಇನ್ನು ದೇಶ ಸೇವೆಯಲ್ಲಿ ಹುತಾತ್ಮರಾದ ವೀರ ಯೋಧರ ಕುಟುಂಬ ಸದಸ್ಯರಿಗೆ ಸನ್ಮಾನ ಸಲ್ಲಿಸಿದರು.ಅಶೋಕ ಚಕ್ರ ಪ್ರಶಸ್ತಿ ಪುರಸ್ಕೃತ ದಿವಂಗತ ಮೇಜರ್ ಸಂದೀಪ್ ಉನ್ನಿಕೃಷ್ಣನ್,

> ಇಂತಹ ಅತ್ಯಂತ ಮಹತ್ವದ ಕಾರ್ಯಕ್ರಮದ ಭಾಗವಾಗಿರುವುದು ಹೆಮ್ಮೆಯ ವಿಚಾರ. ದೇಶಕ್ಕೆ ಶಕ್ತಿ ತುಂಬಿರುವ ನಿಮ್ಮೆಲ್ಲರಿಗೆ ದೇಶ ಹಾಗೂ ಕಾಂಗ್ರೇಸ್ ಪಕ್ಷದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಾಂಗ್ರೇಸ್ ಪಕ್ಷ ಸದಾ ದೇಶ ಹಾಗೂ ನಮ್ಮ ಸಶಸ್ತ್ರ ಪಡೆಗಳ ಪರವಾಗಿ ನಿಲ್ಲಲಿದೆ. ನಿಮ್ಮ ಕೊಡುಗೆಯನ್ನು ಸದಾ ಸ್ಮರಿಸಲಿದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

**ವೀರ ಯೋಧರ ಕುಟುಂಬ ಸದಸ್ಯರಿಗೆ ಸನ್ಮಾನ**

ಅಶೋಕ ಚಕ್ರ ಪ್ರಶಸ್ತಿ ಪುರಸ್ಕೃತ ಕರ್ನಲ್ ಜೋಜನ್ ಥಾಮಸ್, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಎಂ.ಸಿ ಮುತ್ತಣ್ಣ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಗಣೇಶ್ ಮದ್ದಪ್ಪ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಎಂ.ಸಿ ಮುತ್ತಣ್ಣ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಕ್ಯಾಪ್ಟನ್ ಎಂ.ವಿ ಪಂಜಲ್, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಮೋಹನ್ ಗಂಗಾಧರನ್, ಮೇಜರ್ ಶಫೀಕ್ ಮೊಹಮದ್ ಖಾನ್, ಸೇನಾ ಪದಕ ಪುರಸ್ಕೃತ ಕರ್ನಲ್ ರಾಮಮೂರ್ತಿ ಕುಟುಂಬ ಸದಸ್ಯರನ್ನು ಸನ್ಮಾನಿಸಲಾಯಿತು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೇಸ್ ನಿರ್ದೇಶನದ ಮೇರೆಗೆ ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೇಸ್ ಸಮಿತಿಯು ಈ ಜೈ ಹಿಂದ್ ಸಭಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಸೇನೆಯ ಹಿರಿಯ ಅಧಿಕಾರಿಗಳು, ಮಾಜಿ ಯೋಧರು ಭಾಗವಹಿಸಿದ್ದರು. ದೇಶಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿರುವ ಭಾರತೀಯ ಯೋಧರಿಗೆ ನಮನ ಸಲ್ಲಿಸಬೇಕು, ಅವರ ಬೆನ್ನಿಗೆ ನಿಲ್ಲಬೇಕು ಎಂಬ ಉದ್ದೇಶದಿಂದ ಎಐಸಿಸಿಯು ದೇಶದಾದ್ಯಂತ ಈ ಕಾರ್ಯಕ್ರಮ ಆಯೋಜಿಸಲು ನಿರ್ದೇಶನ ನೀಡಿದೆ.

## ಸಿಎಂ ಸಿದ್ದರಾಮಯ್ಯಗೆ ಬರೆದ ಪತ್ರದಲ್ಲಿ ಸೋಮಣ್ಣ ಮನವಿ

• ಉದಯವಾಹಿನಿ, ಬೆಂಗಳೂರು



ಕರ್ನಾಟಕದಲ್ಲಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ಮುಚ್ಚಬಾರದು ಎಂದು ಒತ್ತಾಯಿಸಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಈ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಔಷಧಿಗಳು ಹಾಗೂ ಸರ್ಜಿಕಲ್ ಐಟಂಗಳು ರೋಗಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ದೊರಕುತ್ತಿತ್ತು. ಖಾಸಗಿಯವರ ಒತ್ತಡಕ್ಕೆ ಮಣಿದು ಈ ಕೇಂದ್ರಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎಂದು ಅವರು ದೂರಿದ್ದಾರೆ.

ಸಿದ್ದರಾಮಯ್ಯ ದೀರ್ಘಕಾಲದ ರಾಜಕೀಯ ಅನುಭವ ಹೊಂದಿದ್ದಾರೆ. ಆದರೆ, ಅವರು ಬಡವರು, ತಳವರ್ಗದ ಜನರ ಹಿತ ಕಾಯುತ್ತಿಲ್ಲ. ಸರ್ಕಾರದ ನಿರ್ಧಾರವನ್ನು ಕೂಡಲೇ ಮರುಪರಿಶೀಲನೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಇದು ಬಡವರ ವಿರೋಧಿ ಕ್ರಮವಾಗಿದ್ದು, ಇದು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ನೋವುಂಟು ಮಾಡುತ್ತದೆ ಎಂದಿದ್ದಾರೆ. ಜನೌಷಧಿ ಕೇಂದ್ರಗಳಿಗೆ ಹೊಸ ಅರ್ಜಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸುವುದಲ್ಲದೆ, ಅಸ್ತಿತ್ವದಲ್ಲಿರುವ ಕೇಂದ್ರಗಳಿಗೆ ಪರವಾನಗಿಗಳನ್ನು ನವೀಕರಿಸಲು ನಿರಾಕರಿಸುವ ರಾಜ್ಯದ ನಿರ್ಧಾರದಿಂದ ನಾನು ತೀವ್ರವಾಗಿ ನಿರಾಶೆಗೊಂಡಿದ್ದೇನೆ ಎಂದಿದ್ದಾರೆ. ಜನೌಷಧಿ ಯೋಜನೆಯು 15 ವರ್ಷಗಳಿಗೂ ಹೆಚ್ಚು ಕಾಲ ಚಾಲನೆಯಲ್ಲಿದೆ. ಈ ಕೇಂದ್ರಗಳನ್ನು ಮುಚ್ಚುವುದರಿಂದ ಬಡವರಿಗೆ ಜೇಬಿಗೆ ಹೊರೆಯಾಗುತ್ತದೆ. ಯಾವ ರೀತಿಯ ಸಲಹೆ ಅಥವಾ ಪರಿಸ್ಥಿತಿ ಅಂತಹ ಕ್ರಮಕ್ಕೆ ಕಾರಣವಾಯಿತು ಎಂದು ನನಗೆ ಅರ್ಥವಾಗುತ್ತಿಲ್ಲ ಎಂದು ಅವರು ಹೇಳಿದರು,

> ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ 180 ಜನೌಷಧಿ ಕೇಂದ್ರಗಳನ್ನು ಮಾತ್ರ ಸ್ಥಗಿತಗೊಳಿಸಲಾಗಿದೆ ಮತ್ತು ಸರ್ಕಾರಿ ಆಸ್ಪತ್ರೆಗಳ ಹೊರಗೆ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳು ಕಾರ್ಯನಿರ್ವಹಿಸುತ್ತಲೇ ಇರುತ್ತವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದರು. ಎಲ್ಲಾ ಆಸ್ಪತ್ರೆಗಳು ಉಚಿತವಾಗಿ ಔಷಧಿಗಳನ್ನು ಒದಗಿಸಬೇಕು ಮತ್ತು ಆಸ್ಪತ್ರೆ ಆವರಣದಲ್ಲಿ ನಡೆಯುತ್ತಿರುವ ಎಲ್ಲಾ ಕೇಂದ್ರಗಳನ್ನು ಹಂತಹಂತವಾಗಿ ರದ್ದುಗೊಳಿಸುವ ಕ್ರಮವು ಅದನ್ನೇ ಖಚಿತಪಡಿಸುತ್ತದೆ ಎಂದು ಸಚಿವರು ಹೇಳಿದರು.

## ಹೆಚ್‌ಎಎಲ್ ಸ್ಥಾಪಿಸಿದ್ದು ನೆಹರೂ ಅಲ್ಲ, ಅದು ಮೈಸೂರು ಅರಸರ ಬಳುವಳಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನೆಹರೂ ಅವರು ಹೆಚ್‌ಎಎಲ್ ಸ್ಥಾಪಿಸಿದ್ದಾರೆಂದು ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ. ಅವರ ಹೇಳಿಕೆ ಸತ್ಯಕ್ಕೆ ದೂರವಾದದ್ದು. ನೆಹರೂ ಅವರಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸಂಸದ ಯದವೀರ್ ಒಡೆಯರ್ ಅವರು ಬುಧವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, ಡಿಕೆ. ಶಿವಕುಮಾರ್ ಅವರ ವಿರುದ್ಧ ಕಿಡಿಕಾರಿದ್ದಾರೆ. ಇಂಟರ್–ಕಾಂಟಿನೆಂಟ್ ಕಾರ್ಪ್‌ನ ಅಧ್ಯಕ್ಷರಾದ ವಿಲಿಯಂ ಡಿ. ಪಾವ್ಲಿ, 1933 ರಲ್ಲಿ ಚೀನಾದ ರಾಷ್ಟ್ರೀಯತಾವಾದಿ ಸರ್ಕಾರದೊಂದಿಗೆ ಜಂಟಿಯಾಗಿ ಅಂಆಔ ಅನ್ನು ಪ್ರಾರಂಭಿಸಿದರು – ಹಾಕ್ 75 ಮತ್ತು ಆಫ–21 ಯುದ್ಧವಿಮಾನಗಳನ್ನು ಜೋಡಿಸಿದರು. ನಂತರ ಅವರು ಭಾರತದ ವಿಮಾನ ಉದ್ಯಮವನ್ನು ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. 1943 ರಲ್ಲಿ, ಯುಎಸ್ ಆರ್ಮಿ ಏರ್‌ಫೋರ್ಸ್ ಕಾರ್ಖಾನೆಯನ್ನು ಸ್ವಾಧೀನಪಡಿಸಿಕೊಂಡಿತು, ಹಿಂದೂಸ್ತಾನ್ ಏರ್ ಕ್ರಾಫ್ಟ್ ನಿರ್ವಹಣೆಯನ್ನು ಉಳಿಸಿಕೊಂಡಿತು. ಇದು 84 ನೇ ಏರ್ ಡಿಪೋ ಆಯಿತು – ಮಿತ್ರರಾಷ್ಟ್ರಗಳ ವಿಮಾನಗಳನ್ನು ದುರಸ್ತಿ ಮಾಡುವ ಕೇಂದ್ರವಾಗಿ ಹೊರಹೊಮ್ಮಿತು. ಕಾರ್ಖಾನೆಯು ಪಿಬಿವೈ ಕ್ಯಾಟಲಿನಾಸ್‌ನಿಂದ ಭಾರತ ಮತ್ತು ಬರ್ಮಾದಲ್ಲಿ ಹಾರಿಸಲಾದ ಎಲ್ಲಾ ರೀತಿಯ ಕೂಲಂಕುಷ ಪರೀಕ್ಷೆಗಳನ್ನು ನಡೆಸಿತು. ಯುದ್ಧದ ಅಂತ್ಯದ ವೇಳೆಗೆ, ಇದು ಏಷ್ಯಾದ ಅತಿದೊಡ್ಡ ಕೂಲಂಕುಷ ಪರೀಕ್ಷೆ ಸೌಲಭ್ಯಗಳಲ್ಲಿ ಒಂದಾಗಿತ್ತು. ಊಂಐ ಸ್ಥಾಪನೆಗೂ ನೆಹರೂ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದಾರೆ.


ಮೈಸೂರಿನ ಪ್ರಮುಖ ಪಾತ್ರದ ಹೊರತಾಗಿಯೂ, ಎಚ್‌ಎಎಲ್ ಮತ್ತು ಕರ್ನಾಟಕ ಸರ್ಕಾರವು ಈ ಸಂಸ್ಥೆಯ ಸ್ಥಾಪನೆಯಲ್ಲಿ ಮಹಾರಾಜರ ಪಾತ್ರವನ್ನು ಒಪ್ಪಿಕೊಳ್ಳುವುದಿಲ್ಲ. ಇದರ ವೆಬ್‌ಸೈಟ್‌ನಲ್ಲಿ ವಾಲ್ ಚಂದ್ ಅವರ ಫೋಟೋ ಮಾತ್ರ ಇದೆ. ಇದು ಭಾರತೀಯ ವಾಯುಯಾನಕ್ಕೆ ಮರೆತುಹೋದ ರಾಜಮನೆತನದ ಕೊಡುಗೆಯಾಗಿದೆ. ಸತ್ಯಗಳನ್ನು ತಪ್ಪಾಗಿ ನಿರೂಪಿಸುವ ಮತ್ತು ನೆಹರು/ಗಾಂಧಿ ಕುಟುಂಬವನ್ನು ವೈಭವೀಕರಿಸುವ ಬದಲು, ವಿಶೇಷವಾಗಿ ಸುಳ್ಳು ಹೇಳಿಕೆಗಳೊಂದಿಗೆ ಸರ್ಕಾರ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಎಚ್ ಎಎಲ್ ಅನ್ನು ಬಲಪಡಿಸಬೇಕು ಮತ್ತು ಅದರ ವಲಯದಲ್ಲಿ ಈ ಸಂಸ್ಥೆ ಮುಂಚೂಣಿಯಲ್ಲಿರಲು ಅಗತ್ಯವಿರುವ ಪ್ರಚೋದನೆಯನ್ನು ನೀಡಬೇಕು. ಈ ಸಂಸ್ಥೆಯು ಮೈಸೂರು ಅರಸರ ಬಳುವಳಿಯಾಗಿದ್ದು ಕರ್ನಾಟಕದವರು ನಿರ್ಮಿಸಿದ್ದಾರೆ ಮತ್ತು ಇದು ಭಾರತದ ಪ್ರಗತಿಗೆ ರಾಜ್ಯದ ಕೊಡುಗೆಯ ಸಂಕೇತವಾಗಿ ಉಳಿದಿದೆ ಎಂದು ತಿಳಿದುಕೊಳ್ಳುವಲ್ಲಿ ಅವರು ಹೆಮ್ಮೆಪಡಬೇಕು ಎಂದು ತಿಳಿಸಿದ್ದಾರೆ.

## ಪಾಲಿಕೆ ವ್ಯಾಪ್ತಿಯಲ್ಲಿ ಸಮೀಕ್ಷಾ ಕಾರ್ಯ ಕುಂಠಿತ, ಕ್ರಮ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಸಮುದಾಯದಲ್ಲಿ ಒಳಮೀಸಲಾತಿ ನೀಡುವ ಸಂಬಂಧ ನಡೆಯುತ್ತಿರುವ ಸಮೀಕ್ಷೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿ ಹೊರತುಪಡಿಸಿ ರಾಜ್ಯದಾದ್ಯಂತ ಉತ್ತಮವಾಗಿ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಕ್ರಮಕ್ಕೆ ಬಿಬಿಎಂಪಿ ಮುಂದಾಗಿದೆ.

ಈ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಅಧಿಕಾರಿಗಳೊಂದಿಗೆ ಮಂಗಳವಾರ ಪರಿಶೀಲನಾ ಸಭೆ ನಡೆಸಿದರು. ಮೇ ತಿಂಗಳಿನಿಂದ ಸಮೀಕ್ಷೆ ಪ್ರಾರಂಭವಾಗಿದ್ದು, ಅಂದಿನಿಂದ 8,215 ಗಣತಿದಾರರು 1,31,730 ಎಸ್‌ಸಿ ಮನೆಗಳಿಗೆ ಭೇಟಿ ನೀಡಿದ್ದಾರೆ. ಪರಿಶಿಷ್ಟ ಜಾತಿಗಳು ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರದೇಶಗಳಲ್ಲಿ, ವಿಶೇಷವಾಗಿ ಪೂರ್ವ ವಲಯದಲ್ಲಿ ಹೆಚ್ಚುವರಿ ಗಣತಿದಾರರನ್ನು ನಿಯೋಜಿಸಿ, ಸಮೀಕ್ಷೆ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ



ಉದಯವಾಹಿನಿ ಚಿತ್ರ

ನೀಡಿದರು. ಇದಕ್ಕೂ ಮುನ್ನ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಅಧ್ಯಕ್ಷೆಯೂ ಆಗಿರುವ ಉಮಾ ಮಹಾದೇವನ್ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಪರಿಶಿಷ್ಟ ಜಾತಿ (ಎಸ್ಸಿ) ಸಮುದಾಯಗಳ ನಾಯಕರು ಮತ್ತು ಪದಾಧಿಕಾರಿಗಳು ಸಂಪೂರ್ಣ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ನಗರದಲ್ಲಿ ಸಮೀಕ್ಷಾ ಕಾರ್ಯ ತಡವಾಗಿದೆ. ಮನೆ–ಮನೆ, ಶಿಬಿರ ಆನ್ ಲೈನ್ ಮೂಲಕ ಸ್ವಯಂ ಘೋಷಣೆ ಹೀಗೆ ಮೂರು ಹಂತಗಳಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ.

> ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳು ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರದೇಶಗಳಲ್ಲಿ ಪ್ರಮುಖವಾಗಿ ಪೂರ್ವ ವಲಯದಲ್ಲಿ ಸಮುದಾಯದ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸಂಪರ್ಕದಲ್ಲಿರಲು ಗಣತಿದಾರರಿಗೆ ತಿಳಿಸಲಾಗಿದೆ. ಜೊತೆಗೆ ಸಮೀಕ್ಷೆ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ನಗರದಲ್ಲಿ ಸಮೀಕ್ಷಾ ಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳುವ ನಿಟ್ಟಿನಲ್ಲಿ ಜಾಗೃತಿ ಸಹ ನಡೆಸಲಾಗುತ್ತಿದ್ದು, ಯಶಸ್ವಿಯಾಗಲು ಸಮುದಾಯದ ಮುಖಂಡರ ಸಹಕಾರ ಅಗತ್ಯವಾಗಿದೆ. ಸಮೀಕ್ಷಾ ಕಾರ್ಯದಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

## ಅಪಾರ್ಟ್‌ಮೆಂಟ್‌ಗಳಿಗೂ ಸಂಚಾರಿ ಕಾವೇರಿ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ಸಂಚಾರಿ ಕಾವೇರಿ ಯೋಜನೆಯಡಿ ನಿಗದಿತ ದರದಲ್ಲಿ ಟ್ಯಾಂಕರ್‌ನಲ್ಲಿ ನೀರು ಪೂರೈಕೆ ಮಾಡುತ್ತಿರುವ ಬೆಂಗಳೂರು ಜಲಮಂಡಳಿ, ಮುಂದುವರಿದು ಅಪಾರ್ಟ್‌ಮೆಂಟ್‌ಗಳಿಗೂ ಬಲ್ಕ್ ವಾಟರ್ ಬುಕ್ಕಿಂಗ್ ಸೇವೆ ಆರಂಭಿಸಲು ನಿರ್ಧರಿಸಿದೆ.

ಬೆಂಗಳೂರು ಜಲಮಂಡಳಿಯ ಕಚೇರಿಯಲ್ಲಿ ಮಂಡಳಿಯ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ನೇತೃತ್ವದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಬಲ್ಕ್ ವಾಟರ್ ಬುಕ್ಕಿಂಗ್ ಸೇವೆ ನೀಡಲು ನಿರ್ಧರಿಸಲಾಗಿದೆ.

ಬೆಂಗಳೂರು ನಗರದ ಹೊರವಲಯದಲ್ಲಿರುವ ಬಹುತೇಕ ಅಪಾರ್ಟ್‌ಮೆಂಟ್‌ಗಳು ಅಂತರ್ಜಲದ ಮೇಲೆಯೇ ಹೆಚ್ಚು ಅವಲಂಬಿತವಾಗಿವೆ. ಈ ಅಪಾರ್ಟ್‌ಮೆಂಟ್‌ಗಳು ಬೇಸಿಗೆಯಲ್ಲಿ



ಉದಯವಾಹಿನಿ ಚಿತ್ರ

ಬೋರ್‌ವೆಲ್ ಬತ್ತಿದಾಗ ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿಸುತ್ತವೆ. ಹಾಗಾಗಿ, ಅಂತರ್ಜಲದ ಮೇಲಿನ ಅವಲಂಬನೆ ಕಡಿಮೆ ಮಾಡುವುದು ಮತ್ತು ಅವರಿಗೂ ಶುದ್ಧ ನೀರು ಪೂರೈಕೆ ಮಾಡುವುದು ನಮ್ಮ ಉದ್ದೇಶವಾಗಿದೆ. ಹೀಗಾಗಿ ಅವರಿಗೂ ಬಿಐಎಸ್ ಪ್ರಮಾಣೀಕೃತ ಶುದ್ಧ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ಬಲ್ಕ್ ವಾಟರ್ ಬುಕ್ಕಿಂಗ್ ವ್ಯವಸ್ಥೆ ಸೇವೆ ಆರಂಭಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಡಾ. ರಾಮ್ ಪ್ರಸಾತ್ ಮನೋಹರ್ ಅವರು ಹೇಳಿದ್ದಾರೆ.

ಮೊದಲು ಬಂದವರಿಗೆ ಮೊದಲು ಅವಕಾಶ ಆಧಾರಿತ ಬುಕ್ಕಿಂಗ್, ಕನಿಷ್ಠ ಒಂದು ತಿಂಗಳ ಮುಂಗಡ ಪಾವತಿ ಅವಶ್ಯಕವಾಗಿದೆ. ಬಲ್ಕ್ ಬುಕ್ಕಿಂಗ್ ಮೂಲಕ ನಿರಂತರ ಸರಬರಾಜು ಖಚಿತಪಡಿಸಿಕೊಳ್ಳಬಹುದು. ಒಂದು ವರ್ಷದ ಅವಧಿಗೆ ಬುಕ್ಕಿಂಗ್ ಮಾಡುವ ವ್ಯವಸ್ಥೆಯೂ ಲಭ್ಯವಿದೆ.

ಸಂಚಾರಿ ಕಾವೇರಿ ಯೋಜನೆಯು ಭಾರತದ ಮೊದಲ ತಾಂತ್ರಿಕ ವ್ಯವಸ್ಥೆಯ ಟ್ಯಾಂಕರ್ ಯೋಜನೆಯಾಗಿದ್ದು, ಜಿಪಿಎಸ್ ನಿಯಂತ್ರಣ, ಪೂರೈಕೆ ಶ್ರೇಣೀಕರಣ ಮತ್ತು ಪೂರೈಕೆ ನಿಯಂತ್ರಣ ಕೇಂದ್ರಗಳ ಮೂಲಕ ಬೆಂಗಳೂರು ನಗರದಲ್ಲಿ ಅವಶ್ಯಕ ನೀರು ಲಭ್ಯವಾಗುವಂತೆ ಮಾಡಲಾಗುತ್ತಿದೆ.

> ಬುಕ್ಕಿಂಗ್ ಮಾಡುವ ಮೂಲಕ ಟ್ಯಾಂಕರ್ ನೀರು ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಂಚಾರಿ ಕಾವೇರಿ ಮೊಬೈಲ್ ಆ್ಯಪ್ ಹಾಗೂ ವೆಬ್‌ಸೈಟ್ ಮುಖಾಂತರ ನೀರಿನ ಬುಕ್ಕಿಂಗ್ ಮಾಡಬಹುದಾಗಿದೆ. ಬಿಡಬ್ಲ್ಯೂಎಸ್‌ಎಸ್‌ಬಿ ಜನರ ಜಲ ಮಂಡಳಿಯಾಗಿ ರೂಪಾಂತರಗೊಳ್ಳುತ್ತಿದೆ. ಮುಂದಿನ ಪೀಳಿಗೆಗೆ ಸುರಕ್ಷಿತ ನೀರಿನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ನಾವು ಹೊಂದಿದ್ದೇವೆ. ಅಂತರ್ಜಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಈ ಯೋಜನೆಯನ್ನು ಅಪಾರ್ಟ್‌ಮೆಂಟ್‌ಗಳಿಗೂ ವಿಸ್ತರಿಸಲಾಗಿದೆ ಎಂದು ತಿಳಿಸಿದ್ದಾರೆ.

# ಅಶೋಕ್ ಖೇಮ್ಕಾರವರು ರಾಬರ್ಟ್ ವಾದ್ರಾ ವಿರುದ್ಧ ಆರೋಪ

### ಸರ್ಕಾರೀ ಜಮೀನುಗಳಲ್ಲಿ ವ್ಯವಸಾಯ ಮಾಡುವ ಬಗ್ಗೆ ಸಾಗುವಳಿ ಚೀಟಿ

• ಉದಯವಾಹಿನಿ, ಬೆಂಗಳೂರು

ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯು 10,000 ಕೋಟಿ ರೂಪಾಯಿ ಬೆಲೆಬಾಳುವ 1,100 ಎಕರೆ ಸರ್ಕಾರೀ ಸ್ವತ್ತುಗಳನ್ನು ಕಬಳಿಸಿರುವ ಬೃಹತ್ ಭೂ ಹಗರಣ ಇದಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಮತ್ತು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕರಾಗಿರುವ ರಮೇಶ್ ಎನ್.ಆರ್ ಆರೋಪಿಸಿದ್ದಾರೆ.

ಈಗಾಗಲೇ ಬೆಂಗಳೂರು ಉತ್ತರ ಭಾಗದಲ್ಲೊಂದು ಮತ್ತು ದಕ್ಷಿಣ ಭಾಗದಲ್ಲೊಂದು ಬೃಹತ್ ಭೂ ಕಬಳಿಕೆ ಹಗರಣದಲ್ಲಿ ಭಾಗಿಯಾಗಿರುವ ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯ ವಿರುದ್ಧ ಹಲವು ಪ್ರಕರಣಗಳು ದೂರುಗಳು ದಾಖಲಾಗಿದೆ.

ಎರಡೂ ಹಗರಣಗಳನ್ನು ಮೀರಿಸುವಂತೆ ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯು ಬೆಂಗಳೂರು ನಗರದ ಪಶ್ಚಿಮ ಭಾಗದಲ್ಲಿ ರಾಜ್ಯದ ಇತಿಹಾಸದಲ್ಲಿಯೇ ಅತಿ ದೊಡ್ಡದಾದ ಬೃಹತ್ ಸರ್ಕಾರಿ ಭೂ ಕಬಳಿಕೆಯನ್ನು ಮಾಡಿರುವುದು ದಾಖಲೆಗಳಿಂದ ದೃಢಪಟ್ಟಿದೆ ಎನ್ನುವ ಗುರುತರ ಆರೋಪವನ್ನು ರಮೇಶ್ ಮಾಡಿದ್ದಾರೆ. 2004ಕ್ಕೂ ಮೊದಲು ಸಣ್ಣ ಪ್ರಮಾಣದ ಲೋಹದ ವಸ್ತುಗಳ ವ್ಯಾಪಾರಿಯಾಗಿದ್ದ ರಾಬರ್ಟ್ ವಾದ್ರಾ, 2004 ರಲ್ಲಿ ಕೇಂದ್ರದಲ್ಲಿ ಕಾಂಗ್ರೇಸ್ (ಐ) ಪಕ್ಷದ ನೇತೃತ್ವದ UPA ಸರ್ಕಾರ ಅಧಿಕಾರಕ್ಕೆ


ಉದಯವಾಹಿನಿ ಚಿತ್ರ

ಬರುತ್ತಿದ್ದಂತೆಯೇ ಪ್ರಭಾವವನ್ನು ಬಳಸಿಕೊಂಡು Real Estate ಉದ್ದಿಮೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಲ್ಲದೇ, ಸುಮಾರು 14 ಬೇರೆ ಬೇರೆ ಹೆಸರುಗಳ ಸಂಸ್ಥೆಗಳಲ್ಲಿ ತಮ್ಮ ಪಾಲುದಾರಿಕೆಯನ್ನು ಸೃಷ್ಟಿಸಿಕೊಂಡರು ಎಂದು ರಮೇಶ್ ಎನ್.ಆರ್. ಆರೋಪಿಸಿದ್ದಾರೆ.

ಹರಿಯಾಣದ ಹಿರಿಯ ಐಎಎಸ್ ಅಧಿಕಾರಿ ಅಶೋಕ್ ಖೇಮ್ಕಾರವರು DLF ಮತ್ತು ಇನ್ನಿತರ ಬೇನಾಮಿ ಸಂಸ್ಥೆಗಳ ಹೆಸರಿನಲ್ಲಿ ನಡೆಸಿರುವ ಸರ್ಕಾರಿ ಭೂ ಕಬಳಿಕೆ ಹಗರಣಗಳನ್ನು ಒಂದೊಂದಾಗಿ ಬಯಲು ಮಾಡಿದ್ದರು. ಇದಾದ ನಂತರ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಚನೆಯಾದ Justice S.N. Dhingra ನೇತೃತ್ವದ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯ ಆಧಾರದಲ್ಲಿ, ಜಾರಿ ನಿರ್ದೇಶನಾಲಯವು Enforcement Directorate ರಾಬರ್ಟ್ ವಾದ್ರಾ ಸೇರಿದಂತೆ DLF ಸಂಸ್ಥೆಯ ಹಲವರ ವಿರುದ್ಧ 13 ಕ್ಕೂ ಹೆಚ್ಚು ಈಖಖ ಗಳನ್ನು ದಾಖಲಿಸಿ ತನಿಖೆಯನ್ನು ನಡೆಸುತ್ತಿದೆ ಎಂದು ರಮೇಶ್ ಟೀಕಿಸಿದ್ದಾರೆ. DLF ಸಂಸ್ಥೆಯ ಹೆಸರಿನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ, ವರ್ತೂರು ನರಸೀಪುರ ಮತ್ತು ಪೆದ್ದನಪಾಳ್ಯ ಗ್ರಾಮಗಳಲ್ಲಿರುವ ಸುಮಾರು 10,000 ಕೋಟಿಗಳಿಗೂ ಹೆಚ್ಚು ಮೌಲ್ಯದ 1,100 ಎಕರೆಗಳಷ್ಟು ವಿಸ್ತೀರ್ಣದ ಸರ್ಕಾರೀ ಸ್ವತ್ತುಗಳಿಗೆ ಮತ್ತು ದಾಖಲೆಗಳೇ ಇಲ್ಲದ ಸ್ವತ್ತುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಯಶಸ್ವಿ ಆಗಿದ್ದಾರೆ ಎನ್ನುವ ಆರೋಪವನ್ನು ರಮೇಶ್ ಮಾಡಿದ್ದಾರೆ. ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ ಗ್ರಾಮದ ಸರ್ವೇ ನಂಬರ್ 01 ರಿಂದ 99, ವರ್ತೂರು ಗ್ರಾಮದ ಸರ್ವೇ ನಂಬರ್ 07, 08, 09, 10, ವರ್ತೂರು ನರಸೀಪುರ ಗ್ರಾಮದ ಸರ್ವೇ ನಂಬರ್ 01 ರಿಂದ 35 ಮತ್ತು ಪೆದ್ದನಪಾಳ್ಯ ಗ್ರಾಮದ ಸರ್ವೇ ನಂಬರ್ 17, 18, 19, 20 ರಲ್ಲಿರುವ ಸುಮಾರು 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳಿಗೆ ಆಐಈ ಸಂಸ್ಥೆಯು ಬೇಲಿ ಹಾಕಿದೆ ಎಂದು ಬಿಜೆಪಿ ನಾಯಕ ರಮೇಶ್ ಹೇಳಿದ್ದಾರೆ. ಈ ಪ್ರದೇಶಗಳಲ್ಲಿನ ನೆಲದ ಬೆಲೆ ಚ.ಅಡಿಯೊಂದಕ್ಕೆ ಕೇವಲ 2,100/– ಎಂದೇ ಲೆಕ್ಕ ಹಾಕಿದರೂ ಸಹ ಎಕರೆಯೊಂದಕ್ಕೆ 9,14,76,000/– ಗಳಂತೆ ಒಟ್ಟು 1,110 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ಸುಮಾರು ರೂ.10,153,83,60,000/– ಗಳಾಷ್ಟಾಗುತ್ತದೆ ಎನ್ನುವ ಲೆಕ್ಕವನ್ನು ರಮೇಶ್ ಎನ್.ಆರ್. ರಮೇಶ್ ಬಿಡುಗಡೆ ಮಾಡಿದ್ದಾರೆ.

> DLF ಸಂಸ್ಥೆಯು ಕಬಳಿಸಿರುವ 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳ ಪೈಕಿ ಶೇ. 90% ರಷ್ಟು ಸ್ವತ್ತುಗಳು ಸರ್ಕಾರೀ ಸ್ವತ್ತುಗಳಾಗಿವೆಯಲ್ಲದೇ, ಇನ್ನುಳಿದ ಶೇ.10% ರಷ್ಟು ಸ್ವತ್ತುಗಳಿಗೆ ಯಾವುದೇ ದಾಖಲೆಗಳು ಇಲ್ಲವೆಂಬುದು ಅತ್ಯಂತ ಸ್ಪಷ್ಟವಾಗಿದೆ. ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಸೇರಿಕೊಳ್ಳುವ ಅರ್ಕಾವತಿ ನದಿಯು ಹರಿಯುತ್ತಿರುವ ಸಮೃದ್ಧ ಪ್ರದೇಶಗಳಾಗಿರುವ ಗಂಗೇನಹಳ್ಳಿ, ವರ್ತೂರು, ವರ್ತೂರು ನರಸೀಪುರ ಮತ್ತು ಪೆದ್ದನಪಾಳ್ಯ ಗ್ರಾಮಗಳ ವ್ಯಾಪ್ತಿಯ ಪ್ರದೇಶಗಳಿಗೆ ಮಾರುಕಟ್ಟೆಯಲ್ಲಿ ದೊಡ್ಡಮಟ್ಟದ ಬೆಲೆಯಿದೆ ಎಂದು ರಮೇಶ್ ಹೇಳಿದರು.

## ವಿದೇಶಕ್ಕೆ ಹಾರಲು ದರ್ಶನ್ ರೆಡಿ ಯುರೋಪ್‌ಗೆ ತೆರಳಲು ಅರ್ಜಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ಡೆವಿಲ್ ಸಿನಿಮಾ ಶೂಟಿಂಗಾಗಿ ದುಬೈ ಮತ್ತು ಯೂರೋಪ್‌ಗೆ ತೆರಳಲು ಅನುಮತಿ ಕೋರಿ ದರ್ಶನ್ ಅರ್ಜಿ ಸಲ್ಲಿಸಿದ್ದಾರೆ. ಜೂನ್ 1 ರಿಂದ 25 ರವರೆಗೆ 25 ದಿನಗಳ ಕಾಲ ವಿದೇಶಕ್ಕೆ ತೆರಳಲು ಅನುಮತಿ ಕೋರಿ ಸಿಆರ್‌ಪಿಸಿ ಸೆಕ್ಷನ್ 439(1) ಅಡಿ 57 ನೇ ಸಿಸಿಹೆಚ್ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾರೆ.

ಕೊಲೆ ಕೇಸ್‌ನ ಎರಡನೇ ಆರೋಪಿ ದರ್ಶನ್ ಅವರು ಜಾಮೀನಿನ ಮೇಲೆ



ಹೊರಗಿದ್ದಾರೆ. ಜಾಮೀನು ನೀಡುವಾಗ ವಿದೇಶಕ್ಕೆ ತೆರಳುವಂತಿಲ್ಲ ಎಂಬ ಷರತ್ತನ್ನು ಕೋರ್ಟ್ ವಿಧಿಸಿತ್ತು. ಹೀಗೆ ತೆರಳಬೇಕು ಎಂದರೆ ಕೋರ್ಟ್ ಅನುಮತಿ ಕಡ್ಡಾಯ ಎಂಬ ಷರತ್ತನ್ನು ನ್ಯಾಯಾಲಯ ವಿಧಿಸಿತ್ತು. ಈಗ ದರ್ಶನ್ ಅವರು ವಿದೇಶಕ್ಕೆ ತೆರಳಲು ಅನುಮತಿ ಕೋರಿ 57ನೇ ಸಿಸಿಹೆಚ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆ ಮಾಡಿದ್ದಾರೆ.

ಕೋರ್ಟ್ ಇದರಲ್ಲಿ ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ದರ್ಶನ್ ಬೆಂಗಳೂರು ಬಿಟ್ಟು ತೆರಳುವಂತಿಲ್ಲ ಎನ್ನುವ ಸೂಚನೆಯನ್ನು ನ್ಯಾಯಾಲಯವು ನೀಡಿತ್ತು. ಆದರೆ, ಹೈಕೋರ್ಟ್‌ನಿಂದ ದೇಶ ಸುತ್ತಾಟ ಮಾಡಲು ದರ್ಶನ್ ಅನುಮತಿ ಪಡೆದರು. ರಾಜಸ್ಥಾನ ಮೊದಲಾದ ಕಡೆಗಳಲ್ಲಿ 'ಡೆವಿಲ್ ಸಿನಿಮಾ ಶೂಟ್ ಮುಗಿಸಿ ದರ್ಶನ್ ಮರಳಿದ್ದರು. ಈಗ ವಿದೇಶಕ್ಕೆ ಹಾರಲು ಆರೋಪಿ ದರ್ಶನ್ ಸಿದ್ಧತೆ ಮಾಡಿಕೊಂಡಿದ್ದಾರೆ. ದರ್ಶನ್ ಅವರು ಮಿಲನ ಪ್ರಕಾಶ್ ನಿರ್ದೇಶನದ 'ಡೆವಿಲ್ ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇದ್ದಾರೆ. ಈ ಚಿತ್ರದ ಹಾಡಿನ ಶೂಟ್‌ಗಾಗಿ ವಿದೇಶಕ್ಕೆ ತೆರಳಬೇಕಿದೆ. ಹೀಗಾಗಿ, ಸಿನಿಮಾ ಶೂಟಿಂಗ್‌ಗಾಗಿ ದುಬೈ ಮತ್ತು ಯೂರೋಪ್‌ಗೆ ತೆರಳಲು ಅವಕಾಶ ಕೋರಿ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆ ಆಗಿದೆ.

# ಸ್ವಾಮೀಜಿಯವರ 83ನೇ ವಾರ್ಷಿಕೋತ್ಸವ ಕಾರ್ಯಕ್ರಮ

## ಧರ್ಮವನ್ನು ಪಾಲಿಸುವ ಕೆಲಸ ಮಾಡಿದರೆ ಇಡೀ ದೇಶದಲ್ಲಿ ಶಾಂತಿ ಲಭ್ಯ, ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ

• ಉದಯವಾಹಿನಿ, ಮೈಸೂರು

ನಾವೆಲ್ಲರೂ ಧರ್ಮವನ್ನು ಪಾಲಿಸುವ ಕೆಲಸ ಮಾಡಿದರೆ ಇಡೀ ದೇಶದಲ್ಲಿ ಶಾಂತಿ ಲಭಿಸಲಿದೆ ಎಂದು ಸುತ್ತೂರು ಪೀಠಾಧೀಶ್ವರರಾದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ನುಡಿದರು.

ನಾದಮಂಟಪದ 27 ನೆ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸುತ್ತೂರು ಶ್ರೀಗಳು ಮಾತನಾಡಿದರು. ಪಹಲ್ಗಾಮ್ ದಾಳಿ ಖಂಡಿಸಿ ಇತ್ತೀಚಿಗೆ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ತಿರಂಗಾ ಯಾತ್ರೆಯಲ್ಲಿ ಕಾಲು ನೋವಿನಲ್ಲೂ ಸ್ವತಹ ಗಣಪತಿ ಶ್ರೀಗಳು ಭಾಗವಹಿಸಿದರು. ಇಂತಹ ಆಕ್ರಮಣ ನಡೆಸಿರುವುದನ್ನು ತೀವ್ರವಾಗಿ ಖಂಡಿಸಿದರು. ಅಂದಿನ ದಾಳಿಯಿಂದ ನಮ್ಮ ದೇಶದ ಅದೆಷ್ಟೋ ಕುಟುಂಬಗಳು ನೋವು ಅನುಭವಿಸುತ್ತಿವೆ ಎಂದು ಸುತ್ತೂರು ಶ್ರೀಗಲಕು ವಿಷಾದಿಸಿದರು. ನಮ್ಮನ್ನೆಲ್ಲ ರಕ್ಷಿಸಲು ಹೋರಾಟ ಮಾಡುತ್ತಿರುವ ಸೈನಿಕರಿಗೆ ಮತ್ತು ದೇಶ ರಕ್ಷಣೆಗೆ ಸದಾ ಶ್ರಮಿಸುತ್ತಿರುವ ನಮ್ಮ ಯೋಧರನ್ನು ಗೌರವಿಸೋಣ ಪ್ರಾಣದ ಹಂಗು ತೊರೆದು ದೇಶ ಕಾಯುತ್ತಿರುವವರಿಗಾಗಿ ನಾವೆಲ್ಲ ಪ್ರಾರ್ಥಿಸೋಣ ಎಂದು ಸುತ್ತೂರು ಶ್ರೀಗಳು ಕರೆ ನೀಡಿದರು.


ಉದಯವಾಹಿನಿ ಚಿತ್ರ

ಅವಧೂತ ದತ್ತಪೀಠ ಮತ್ತು ಗಣಪತಿ ಸಚ್ಚಿದಾನಂದ ಆಶ್ರಮ ಆಸುಪಾಸಿನಲ್ಲೇ ಇವೆ. ಅವಧೂತ ದತ್ತಪೀಠ, ಸಚ್ಚಿದಾನಂದ ಮೂಲ ಆಶ್ರಮ ಮೈಸೂರಿನಲ್ಲಿ ಇರುವುದು ಮೈಸೂರಿಗರ ಹೆಮ್ಮೆ.

ಇಂತಹ ಅತ್ಯುತ್ತಮ ತಾಣವನ್ನು ಪೂಜ್ಯರು ಕೊಡುಗೆಯಾಗಿ ಕೊಟ್ಟಿರುವುದು ಪುಣ್ಯ ಎಂದು ಬಣ್ಣಿಸಿದರು.

ಗಣಪತಿ ಸಚ್ಚಿದಾನಂದ ಆಶ್ರಮ ಮತ್ತು ಸುತ್ತೂರು ಮಠಗಳು ಮಾನಸಿಕವಾದಂತಹ ನಿಕಟ ಸಂಬಂಧ ಹೊಂದಿವೆ ಈ ಎರಡೂ ಆಶ್ರಮಗಳು ಮಧುರ ಬಾಂಧವ್ಯದ ಸಂಕೇತವಾಗಿವೆ.

ನಾನು ಇಂದು ಒಂದು ಕುಟುಂಬದ ಸಮಾರಂಭದಲ್ಲಿ ಸದಸ್ಯನಾಗಿ ಪಾಲ್ಗೊಂಡಂತಹ ಅನುಭವ ಆಗಿದೆ ಇದು ನನಗೆ ಅತ್ಯಂತ ಸಂತಸ ತಂದಿದೆ ಶ್ರೀಗಳು ಇನ್ನೂ ಆರೋಗ್ಯವಂತರಾಗಿ ಶತಮಾನದ ಕಡೆಗೆ ನಡೆಯಲಿ ಎಂದು ಪ್ರಾರ್ಥಿಸಿದರು. ಗಣಪತಿ ಸ್ವಾಮೀಜಿಯವರು ಭಕ್ತರಿಗೆ ಅನುಗ್ರಹಿಸುತ್ತಾರೆ ಆದರೆ ಅದೇ ಭಕ್ತ ವೃಂದವು ಸ್ವಾಮೀಜಿಗಳ ಆರೋಗ್ಯ ಮತ್ತು ಆಯುಷ್ ವೃದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿದರೆ ಅವನು ಕರುಣಿಸುತ್ತಾನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಗತ್ತಿನಾದ್ಯಂತ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆಗಳು ಇವೆ. ಅವುಗಳ ಮೂಲಕ ಆಯಾ ಭಾಗದ ಜನರಿಗೆ ಶ್ರೀಗಳು ಅನುಗ್ರಹಿಸುತ್ತಾ ಬಂದಿದ್ದಾರೆ ಎಂದು ಶಿವರಾತ್ರಿ ಮಹಾ ಸ್ವಾಮೀಜಿ ನುಡಿದರು.

ಇಡೀ ಜಗತ್ತಿನಲ್ಲಿ ಶಾಂತಿ ನೆಮ್ಮದಿ ಪ್ರೀತಿ ಉಂಟು ಮಾಡಬೇಕು ಎಂಬ ಮಹಾದಾಸೆಯನ್ನು ಗಣಪತಿ ಶ್ರೀಗಳು ಇಟ್ಟುಕೊಂಡಿದ್ದಾರೆ. ಆದರೆ ನಮ್ಮ ದೇಶದ ಮೇಲೆ ದಾಳಿಗಳು ನಡೆಯುತ್ತಿವೆ ಜಗತ್ತಿನಲ್ಲಿ ಆಗುತ್ತಿರುವ ಪ್ರಕ್ಷುಬ್ದ ವಾತಾವರಣಕ್ಕೆ ಶ್ರೀಗಳು ಇದೇ ವೇಳೆ ಬೇಸರ ವ್ಯಕ್ತಪಡಿಸಿದರು. ಶ್ರೀಗಳ ವಿಶ್ವ ಶಾಂತಿ ಪ್ರೀತಿಯನ್ನು ಧರ್ಮವನ್ನು ಪಾಲಿಸುವ ಮೂಲಕ ನಾವೆಲ್ಲರೂ ಅನುಸರಿಸಬೇಕು ಎಂದು ಕರೆ ನೀಡಿದರು.

**ನಮ್ಮ ದೇಶ ಆಧ್ಯಾತ್ಮಿಕವಾಗಿ ಸಂಪತ್ ಭರಿತವಾದ ದೇಶ. ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಜಗತ್ತಿಗೆ ನಮ್ಮ ಋಷಿಮುನಿಗಳು ತಪಸ್ ಶಕ್ತಿಯಿಂದ ಮತ್ತು ಅವರ ಅನುಷ್ಠಾನದಿಂದ ಕೊಟ್ಟ ಕೊಡುಗೆ ಅಪಾರ. ಜಗತ್ತಿನಲ್ಲಿ ಈಗ ಆಗುತ್ತಿರುವ ಎಷ್ಟೋ ಸಂಶೋಧನೆಗಳನ್ನೆಲ್ಲ ಭಾರತೀಯರು ಬಹಳ ಹಿಂದೆಯೇ ಕೊಟ್ಟಿದ್ದರು ಎಂದು ಸುತ್ತೂರು ಶ್ರೀ ವಿವರಿಸಿದರು. ಅವರ ದರ್ಶನ ಮಾಡಿದರೆ ಎಷ್ಟೋ ಸಂತೃಪ್ತಿ ಸಿಗುತ್ತದೆ ಎಂದು ಭಕ್ತರು ಹೇಳುತ್ತಾರೆ, ಆಶೀರ್ವಾದ ಸಿಕ್ಕರೆ ಸಾಕು ಎಂದು ಕಾಯುವವರು ಇದ್ದಾರೆ ಎಂದು ಹೇಳಿದರು.**

ಈ ವೇಳೆ ಸುತ್ತೂರು ಶ್ರೀಗಳು ಗಣಪತಿ ಶ್ರೀಗಳಿಗೆ ಗೌರವ ಸಮರ್ಪಿಸಿದರು ಮತ್ತು ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯನಂದ ತೀರ್ಥ ಸ್ವಾಮೀಜಿಯವರಿಗೂ ಗೌರವಿಸಿದರು.

# ಪರಿಹಾರ ತಾರತಮ್ಯ ಸರಿಪಡಿಸಲು ಆಗ್ರಹ

• ಉದಯವಾಹಿನಿ, ತುಮಕೂರು

ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಈಚೆಗೆ ಕಾರ್ಖಾನೆಯ ಸಂಪ್ ಸ್ವಚ್ಚಗೊಳಿಸುವಾಗ ಮೃತಪಟ್ಟ ಪ್ರತಾಪ್ (25) ಕುಟುಂಬಕ್ಕೆ ಪರಿಹಾರ ನೀಡುವಲ್ಲಿ ಅನ್ಯಾಯವಾಗಿದ್ದು, ನ್ಯಾಯ ಒದಗಿಸುವಂತೆ ಮೃತರ ಪತ್ನಿ ಎಲ್.ಕಾವ್ಯಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಶಿರಾ ತಾಲ್ಲೂಕು ಮಾಗೋಡು ಗ್ರಾಮದ ಪ್ರತಾಪ್, ಮಧುಗಿರಿ ತಾಲ್ಲೂಕು ಬಡವನಹಳ್ಳಿಯ ಕಾವ್ಯಾ ಪ್ರೀತಿಸಿ ಅಂತರ್ಜಾತಿ ಮದುವೆಯಾಗಿದ್ದರು. ಇದಕ್ಕೆ ಪ್ರತಾಪ್ ಮನೆಯವರು ಒಪ್ಪಿರಲಿಲ್ಲ. ಮದುವೆ ನಂತರ ಇಬ್ಬರು ಬಡವನಹಳ್ಳಿಯಲ್ಲಿ ವಾಸವಿದ್ದರು. ಕೈಗಾರಿಕಾ ಪ್ರದೇಶದಲ್ಲಿ ಇಬ್ಬರು ಕೆಲಸಕ್ಕೆ ಹೋಗುತ್ತಿದ್ದರು. ಮೇ 21ರಂದು ಲಾರಸ್ ಬಯೋ ಎಂಬ ಕೈಗಾರಿಕೆಯಲ್ಲಿ ಸಂಭವಿಸಿದ ಅವಘಡದಲ್ಲಿ ಪ್ರತಾಪ್ ಉಸಿರುಗಟ್ಟಿ ಮೃತಪಟ್ಟಿದ್ದರು.

ಘಟನೆಯ ನಂತರ ಕೈಗಾರಿಕಾ ಸಂಸ್ಥೆಯಿಂದ ಪ್ರತಾಪ್ ತಂದೆ, ತಾಯಿಗೆ 25 ಲಕ್ಷದ ಪರಿಹಾರ ಚೆಕ್ ವಿತರಿಸಲಾಗಿದೆ. ಇದರಲ್ಲಿ ನನಗೆ ಯಾವುದೇ ಹಣ ಕೊಟ್ಟಿಲ್ಲ. ಮೂವರು ಮಕ್ಕಳಿದ್ದು, ಕುಟುಂಬ ನಿರ್ವಹಣೆ ಕಷ್ಟವಾಗುತ್ತಿದೆ. ಪತಿ ಮಾಡಿದ ಸಾಲ ತೀರಿಸಲು ಪರದಾಡುವಂತಾಗಿದೆ. ಪರಿಹಾರ ಕೊಡಿಸಬೇಕು ಎಂದು ಕೋರಿದ್ದಾರೆ.


ಉದಯವಾಹಿನಿ ಚಿತ್ರ

**ಮಾಗೋಡಿನಲ್ಲಿ ನಡೆದ ಅಂತ್ಯಕ್ರಿಯೆಗೆ ಹೋಗಿದ್ದ ಸಮಯದಲ್ಲಿ ಗಂಡನ ಸಂಬಂಧಿಕರು ಗಲಾಟೆ ಮಾಡಿ ಅಲ್ಲಿಂದ ಕಳುಹಿಸಿದರು. ನಿನಗೆ ಪರಿಹಾರದ ಹಣ ಬೇಕಾದರೆ 50 ಸಾವಿರ ಕೊಡುತ್ತೇವೆ. ನಮ್ಮ ಸುದ್ದಿಗೆ ಬರಬೇಡ ಎಂದು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.**

# ಯುಜಿಡಿ ಸಂಪರ್ಕ ಸಮರ್ಪಕವಾಗಿಲ್ಲ ಎಂಬ ಆರೋಪ

• ಉದಯವಾಹಿನಿ, ತುಮಕೂರು

ಮಹಾನಗರ ಪಾಲಿಕೆಯ 32ನೇ ವಾರ್ಡ್ ವ್ಯಾಪ್ತಿಯ ರಸ್ತೆಗಳಿಗೆ ಮಲ್ಲಿಗೆ, ಸಂಪಿಗೆ, ಗೋದಾವರಿ, ಗೋಕುಲ, ಕೃಷ್ಣ ಎಂದು ಸೊಗಸಾದ ಹೆಸರು ನಾಮಕರಣ ಮಾಡಲಾಗಿದೆ. ಹೆಸರಿನಲ್ಲಿ ಮಾತ್ರ ಕಂಗೊಳಿಸುತ್ತಿದ್ದು, ರಸ್ತೆಯ ಮೇಲೆ ಸಂಚರಿಸಲಾಗದಷ್ಟು ಗುಂಡಿಗಳು ತುಂಬಿಕೊಂಡಿವೆ. ಬಡ್ಡಿಹಳ್ಳಿ, ಮಂಜುನಾಥ ನಗರ, ಗೋಕುಲ ಬಡಾವಣೆಯ 1ರಿಂದ 3ನೇ ಹಂತ, ಗಿರಿನಗರ, ಕೃಷ್ಣನಗರ, ಚೆನ್ನಿಂಗಯ್ಯನಪಾಳ್ಯ ಪ್ರದೇಶಗಳು ವಾರ್ಡ್ ವ್ಯಾಪ್ತಿಗೆ ಸೇರುತ್ತವೆ.

ಮುಖ್ಯರಸ್ತೆ ಬಿಟ್ಟರೆ ಇತರೆ ಯಾವುದೇ ರಸ್ತೆಗಳು ಅಭಿವೃದ್ಧಿ ಕಂಡಿಲ್ಲ. ಗೋಕುಲ ಬಡಾವಣೆಯಲ್ಲಿ ಚರಂಡಿ, ಯುಜಿಡಿ ಸಂಪರ್ಕ ಸಮರ್ಪಕವಾಗಿಲ್ಲ ಎಂಬ ಆರೋಪ ಸಾಮಾನ್ಯವಾಗಿವೆ.

ನಗರದ ಇತರೆ ವಾರ್ಡ್‌ಗಳಿಗೆ ಹೋಲಿಸಿದರೆ 32ನೇ ವಾರ್ಡ್‌ನಲ್ಲಿ ಅತಿ ಹೆಚ್ಚು ಪಾರ್ಕ್‌ಗಳಿವೆ. ಅಂದಾಜಿನ ಪ್ರಕಾರ 100ಕ್ಕೂ ಹೆಚ್ಚು ಉದ್ಯಾನಗಳು ಈ ಭಾಗದಲ್ಲಿವೆ. ಇದರಲ್ಲಿ ಅಭಿವೃದ್ಧಿ ಆಗಿರುವುದು ಕೇವಲ 15. ಉಳಿದ ಉದ್ಯಾನಗಳ ಸ್ಥಿತಿ ಯಾರಿಗೂ ಬೇಡ ಎನ್ನುವಂತಿದೆ. ತಂತಿ ಬೇಲಿ ಅಳವಡಿಸಿ ಜಾಗ ರಕ್ಷಣೆ ಮಾಡಿಕೊಳ್ಳಲೂ ಸಾಧ್ಯವಾಗಿಲ್ಲ.


ಉದಯವಾಹಿನಿ ಚಿತ್ರ

ಸ್ಮಾರ್ಟ್ ಸಿಟಿ, ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆಯಿಂದ ಅಭಿವೃದ್ಧಿಪಡಿಸಿದ ಪಾರ್ಕ್‌ಗಳು ನಿರ್ವಹಣೆಯ ಕೊರತೆ ಎದುರಿಸುತ್ತಿವೆ. ಯಾವೊಂದು ಪಾರ್ಕ್ ಕೂಡ ಸ್ವಚ್ಛವಾಗಿಲ್ಲ.

ಎಲ್ಲಾ ಕಡೆಗಳಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ. ಇಲ್ಲಿಯೇ ಕಸ ರಾಶಿ ಮಾಡಲಾಗಿದೆ. ವಾರ್ಡ್ ವ್ಯಾಪ್ತಿಯಲ್ಲಿ ಯುಜಿಡಿ ಸೋರಿಕೆ ಸಮಸ್ಯೆ ಅತಿಯಾಗಿದೆ. ಬಹುತೇಕ ಪ್ರದೇಶಗಳು ನಗರದ ಹೊರವಲಯದಲ್ಲಿವೆ. ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಭಾಗದಲ್ಲಿ ರಸ್ತೆಯೇ ಸರಿಯಾಗಿ ಆಗಿಲ್ಲ. ಇಂದಿಗೂ ಮಣ್ಣಿನ ರಸ್ತೆಯಲ್ಲೇ ಜನರು ಸಂಚರಿಸುತ್ತಿದ್ದಾರೆ. ಸಣ್ಣಗೆ ಮಳೆ ಹನಿ ಉದುರಿದರೂ ರಸ್ತೆಯಲ್ಲಿ ವಾಹನಗಳ ಓಡಾಟ ಕಷ್ಟವಾಗುತ್ತದೆ. ಅಷ್ಟರ ಮಟ್ಟಿಗೆ ಹಾಳಾಗಿವೆ ಇಲ್ಲಿನ ರಸ್ತೆಗಳು. ಪಾಲಿಕೆ ಸದಸ್ಯರ ಅಧಿಕಾರಾವಧಿ ಮುಗಿದ ನಂತರವಂತೂ ಜನರ ಸಮಸ್ಯೆ ಕೇಳುವವರು ಇಲ್ಲ. ರಸ್ತೆಯಲ್ಲಿ ಗುಂಡಿ ಬಿದ್ದರೂ ಅದನ್ನು ಮುಚ್ಚಿಸುವಂತೆ ಪಾಲಿಕೆಗೆ ಮನವಿ ಸಲ್ಲಿಸಬೇಕಾದ ಪರಿಸ್ಥಿತಿ ಉದ್ಭವಿಸಿದೆ. ಇದೇ ವಾರ್ಡ್‌ನಿಂದ ಸದಸ್ಯರಾಗಿ ಆಯ್ಕೆಯಾದ ಬಿ.ಜಿ.ಕೃಷ್ಣಪ್ಪ ಪಾಲಿಕೆ ಚುಕ್ಕಾಣಿಹಿಡಿದಿದ್ದರು. ಒಂದು ಅವಧಿಗೆ ಮೇಯರ್ ಆಗಿ ಅಧಿಕಾರ ಚಲಾಯಿಸಿದರು. ವಾರ್ಡ್ ಅಭಿವೃದ್ಧಿ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂಬುದು ವಾರ್ಡ್ ಜನರ ಆರೋಪ. ಮಾಜಿ ಸದಸ್ಯರು ಜನರ ಕಷ್ಟ ಕೇಳಿದ್ದೇ ಕಡಿಮೆ. ನಾವು ಸಮಸ್ಯೆ ಹೇಳಿದರೆ ಸರಿ ಯಾಗಿ ಸ್ಪಂದಿಸುತ್ತಿರಲಿಲ್ಲ. ನಾವು ಈ ಬಡಾವಣೆ ಸೇರಿ ನಲವತ್ತು ವರ್ಷ ಆಗಿದೆ. ಇದುವರೆಗೆ ಒಂದು ಚರಂಡಿ ಸರಿ ಮಾಡಲು ಆಗಿಲ್ಲ ಎಂದು ಕೃಷ್ಣನಗರದ ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

# ಕೆಆರ್‌ಎಸ್: ಒಂದೇ ದಿನದಲ್ಲಿ 4 ಅಡಿ ನೀರು

• ಉದಯವಾಹಿನಿ, ಶ್ರೀರಂಗಪಟ್ಟಣ

ಕಾವೇರಿ ಕೊಳ್ಳದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು ತಾಲ್ಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಒಂದೇ ದಿನದಲ್ಲಿ 4 ಅಡಿಗಳಷ್ಟು ನೀರು ಹರಿದು ಬಂದಿದೆ. ಅಣೆಕಟ್ಟೆಗೆ ಸಂಜೆಯಿಂದ 20 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರು ಹರಿದು ಬರುತ್ತಿದ್ದು, ಒಳ ಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



ಸೋಮವಾರ ಜಲಾಶಯದಲ್ಲಿ 89.32 ಅಡಿ ಇದ್ದ ನೀರಿನ ಮಟ್ಟ ಮಂಗಳವಾರ 93 ಅಡಿಗೆ ತಲುಪಿದೆ. ಅಣೆಕಟ್ಟೆಯಿಂದ 364 ಕ್ಯುಸೆಕ್ ನೀರನ್ನು ಕುಡಿಯುವ ಉದ್ದೇಶಕ್ಕೆ ಹೊರ ಬಿಡಲಾಗುತ್ತಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 83.2 ಅಡಿ ನೀರಿತ್ತು. 2893 ಕ್ಯೂಸೆಕ್ ಒಳ ಹರಿವು ಹಾಗೂ 537 ಕ್ಯುಸೆಕ್ ಹೊರ ಹರಿವು ದಾಖಲಾಗಿತ್ತು.

# ಪೌರನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಒತ್ತಾಯ

• ಉದಯವಾಹಿನಿ, ಮಂಡ್ಯ

ಪೌರನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಕಾರ್ಯಕರ್ತರು ಮತ್ತು ನಗರಸಭೆ ಪೌರ ಸೇವಾ ನೌಕರರು ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರಸಭೆ ಎದುರು ಜಮಾವಣೆಗೊಂಡು ಕಾರ್ಯಕರ್ತರು ಹಾಗೂ ಕಚೇರಿ ಬಾಗಿಲಿಗೆ ಬೀಗ ಜಡಿದ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿ ಘೋಷಣೆ ಕೂಗಿದರು. ಸಂಜೆವರೆಗೂ ಯಾವುದೇ ನಗರಸಭೆ ಕೆಲಸ ಕಾರ್ಯಗಳನ್ನು ಮಾಡಲಿಲ್ಲ. ಸಾರ್ವಜನಿಕರು ಬಂದು ಬಾಗಿಲು ಹಾಕಿರುವುದನ್ನು ನೋಡಿ ವಾಪಸ್ ಹೋಗುತ್ತಿದ್ದರು.

ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಪೌರ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪೌರ ನೌಕರರ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಹಲವು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನಿರ್ಣಯಗಳನ್ನು ಕೈಗೊಂಡು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಮನವಿ ಸಲ್ಲಿಸಿ 45 ದಿನಗಳಾದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ ಕಾರಣ ಪ್ರತಿಭಟನೆ ಅನಿವಾರ್ಯವಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಹೊರ ಗುತ್ತಿಗೆ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ.ನಾಗಣ್ಣ, ಪೌರ ಕಾರ್ಮಿಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜು, ಅರ್ಚನಾ, ಪೌರ ನೌಕರರಾದ ಗಿರೀಶ್ ಎಲೆಚಾಕನಹಳ್ಳಿ, ದಿನೇಶ್, ಮುಖಂಡರಾದ ಮುತ್ತಾಲಯ್ಯ, ಮಹದೇವು, ನಾಗೇಶ್, ರಾಜೇಗೌಡ, ಹೊನ್ನಯ್ಯ, ಬೊಮ್ಮಯ್ಯ, ಅಮ್ಮಯ್ಯಮ್ಮ, ಮಹದೇವು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

**ವಾಹನ ಚಾಲಕರು, ನೀರು ಪೂರೈಕೆ ನೌಕರರು ನೇರ ಪಾವತಿ ಪೌರ ಕಾರ್ಮಿಕರನ್ನು ಕಾಯಂಗೊಳಿಸಬೇಕು. ನೌಕರರಿಗೆ ಎಸ್‌ಎಫ್‌ಸಿ ಮುಕ್ತ ನಿಧಿಯಿಂದ ವೇತನ ನೀಡಬೇಕು. ಸರ್ಕಾರವು ನಮ್ಮ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಇಲ್ಲವಾದರೆ ನಿರಂತರ ಧರಣಿ ಮಾಡುವ ಮೂಲಕ ಕಚೇರಿಗಾಗಲೀ ಅಥವಾ ಸ್ವಚ್ಛತೆಗಾಗಲಿ ಹೋಗುವುದಿಲ್ಲ ಎಂದು ಎಚ್ಚರಿಕೆ ನೀಡಿದರು.**

# ಇದು ಮಿಮ್ಸ್ ಆಸ್ಪತ್ರೆಯೋ ಯಮಲೋಕವೋ

• ಉದಯವಾಹಿನಿ, ಮಂಡ್ಯ

ಗಬ್ಬು ನಾರುವ ಶೌಚಾಲಯ, ಹರಿದು ಹೋಗಿರುವ ಹಾಸಿಗೆಗಳು, ಅವಧಿ ಮೀರಿದ ಔಷಧಗಳು, ಬೂಸ್ಟ್ ಬಂದಿರುವ ಬ್ರೆಡ್, ಕೆಟ್ಟುನಿಂತ ವಾಟರ್ ಫಿಲ್ಟರ್ ಮುಂತಾದ ಸಮಸ್ಯೆಗಳನ್ನು ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ಕಣ್ಣಾರೆ ಕಂಡ ಉಪಲೋಕಾಯುಕ್ತ ಬಿ.ವೀರಪ್ಪ ಅವರು ಇದು ಆಸ್ಪತ್ರೆಯೋ ಯಮಲೋಕವೋ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು. ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಆಸ್ಪತ್ರೆಗೆ ಲೋಕಾಯುಕ್ತ ಪೊಲೀಸರ ತಂಡದೊಂದಿಗೆ ಭೇಟಿ ನೀಡಿದ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು 3 ಗಂಟೆಗೂ ಹೆಚ್ಚು ಕಾಲ ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ, ವ್ಯವಸ್ಥೆಯನ್ನು ಪರಿಶೀಲಿಸಿದರು ಮತ್ತು ರೋಗಿಗಳ ಸಮಸ್ಯೆಗಳನ್ನು ಆಲಿಸಿದರು. ಮೂಳೆ ಮತ್ತು ಕೀಲು ವಿಭಾಗದ ಗಂಡಸರ ವಾರ್ಡ್‌ಗೆ ಭೇಟಿ ನೀಡಿ, ಅಲ್ಲಿ ಹರಿದು ಹೋಗಿದ್ದ ಹಾಸಿಗೆಗಳು ಮತ್ತು ಗಬ್ಬು ನಾರುತ್ತಿದ್ದ ಶೌಚಾಲಯವನ್ನು ನೋಡಿ ಸಿಡಿಮಿಡಿಗೊಂಡರು. ಹೊಸ ಬೆಡ್ ಖರೀದಿಸಲು ನಿಮ್ಮ ಬಳಿ ಹಣವಿಲ್ಲವೇ ಇಂಥ ಬೆಡ್‌ಗಳಲ್ಲಿ ರೋಗಿಗಳು ಮಲಗುವುದು ಹೇಗೆ ಎಂದು ವೈದ್ಯಕೀಯ ಅಧೀಕ್ಷಕ ಶಿವಕುಮಾರ್ ಅವರನ್ನು ಪ್ರಶ್ನಿಸಿದರು. ವಾಟರ್ ಫಿಲ್ಟರ್ ಕೆಟ್ಟು ಎರಡು ತಿಂಗಳಾದರೂ ಸರಿಮಾಡಿಸಿಲ್ಲ. ಹೀಗಾಗಿ ಕುಡಿಯುವ ನೀರು ಸಿಗುತ್ತಿಲ್ಲ ಎಂದು ರೋಗಿಗಳ ಸಂಬಂದಿಕರು ದೂರಿದರು. ಆಗ, ವಾಟರ್ ಫಿಲ್ಟರ್ ಸರಿಮಾಡಿಸಲು ನಿಮಗಿರುವ ಸಮಸ್ಯೆ ಏನು ನೀರು ಸಿಗದೆ ರೋಗಿಗಳು ಪರದಾಡುವುದು ನಿಮ್ಮ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಉಪ ಲೋಕಾಯುಕ್ತರು ಗರಂ ಆದರು.

**ನಿಂತುಕೊಳ್ಳುವ ಶಿಕ್ಷೆ:** ರೋಗಿಗಳ ಸಂಬಂಧಿಕರು ಆಸ್ಪತ್ರೆಯಲ್ಲಿ ಗಂಟೆಗಟ್ಟಲೆ ನಿಂತುಕೊಂಡಿದ್ದನ್ನು ಗಮನಿಸಿದ ಉಪ ಲೋಕಾಯುಕ್ತರು, ಇವರಿಗೆ ನಿಂತು ಕೊಳ್ಳುವ ಶಿಕ್ಷೆ ಏಕೆ ಕೊಟ್ಟಿದ್ದೀರಿ. ಕೂಡಲೇ ಆಸನ ವ್ಯವಸ್ಥೆ ಮಾಡಬೇಕು. ರೋಗಿಗಳ ಆರೈಕೆದಾರರನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

**ಪ್ರಕರಣ ದಾಖಲಿಸಲು ಸೂಚನೆ**

**ಮಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಇಲ್ಲಿನ ವೈದ್ಯಾಧಿಕಾರಿಗಳು ವಿಫಲರಾಗಿದ್ದಾರೆ. ಅದ್ದರಿಂದ ಪ್ರಕರಣ ದಾಖಲಿಸಿ, ಶಿಸ್ತುಕ್ರಮ ಜರುಗಿಸಲು ಅಗತ್ಯ ಕ್ರಮ ಕೈಗೊಳ್ಳುತ್ತೇನೆ. ಎರಡು ತಿಂಗಳ ನಂತರ ಮತ್ತೆ ಬಂದು, ವ್ಯವಸ್ಥೆ ಪರಿಶೀಲಿಸುತ್ತೇನೆ. ಸುಧಾರಣೆಯಾಗಿರದಿದ್ದರೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುತ್ತೇನೆ ಎಂದು ಉಪಲೋಕಾಯುಕ್ತರು ಗುಡುಗಿದರು.**

**2 ಉಪಲೋಕಾಯುಕ್ತ ಬಿ.ವೀರಪ್ಪ ಬೇಸರ**

**ಆಂಬುಲೆನ್ಸ್ ಸೇವೆಗೆ ದುಪ್ಪಟ್ಟು ದರ:** ಆಸ್ಪತ್ರೆಯಿಂದ 2 ಕಿ.ಮೀ. ದೂರದಲ್ಲಿರುವ ಕಲ್ಲಹಳ್ಳಿ ಬಡಾವಣೆಗೆ ರೋಗಿಗಳಿಂದ 4 ಸಾವಿರ ವಸೂಲಿ ಮಾಡಿದ್ದಾರೆ ಎಂದು ಸಾರ್ವಜನಿಕರು ಸಮಸ್ಯೆ ತೋಡಿಕೊಂಡರು. ಆಗ ಉಪಲೋಕಾಯುಕ್ತರು, ಅಂಬುಲೆನ್ಸ್ ಚಾಲಕನನ್ನು ಕರೆಸಿ, ನಿಗದಿತ ದರ ಮಾತ್ರ ತೆಗೆದುಕೊಳ್ಳಬೇಕು. ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟರೆ ಕೆಲಸದಿಂದ ವಜಾ ಮಾಡಿಸುತ್ತೇನೆ ಎಂದು ಕಿಡಿಕಾರಿದರು.

## ಮಿನಿ ನ್ಯೂಸ್

### ಪುಷ್ಪಮಂಜರಿ ಮೇ ಮಾಸದ ಸುಂದರಿ

• ಉದಯವಾಹಿನಿ, ಯಳಂದೂರು

ಮೇ ಮಾಸದ ಮಳೆ. ವೈಭವ ತರುಲತೆಗಳಿಗೆ ಜೀವ ತುಂಬಿದೆ. ಮಳೆಗಾಲದ ಹೊತ್ತಿನಲ್ಲಿ ಅರಳುವ ಮೇ ಫ್ಲವರ್ ಮುಂಗಾರು ಋತುವಿನ ಮುನ್ಸೂಚನೆ ನೀಡುವ ವಿಸ್ಮಯ ಪುಷ್ಪವಾಗಿದ್ದು ಕಣ್ಮನ ಸೆಳೆಯುತ್ತಿದೆ. ಜಿಲ್ಲೆಗೆ ಮುಂಗಾರು ಪ್ರವೇಶವಾಗಿದ್ದು, ನಾಡು ಕಾಡುಗಳಲ್ಲಿ ತಂಪು ತುಂಬಿಕೊಂಡಿದೆ. ಈ ತಿಂಗಳಲ್ಲಿ ನೂರಾರು ಪುಷ್ಪ ಪ್ರಭೇದಗಳು ಬಣ್ಣ ತೊಟ್ಟು ನಳನಳಿಸುತ್ತಿವೆ. ಇವುಗಳಲ್ಲಿ ವಿಶಿಷ್ಟ ವಿನ್ಯಾಸ, ಬಣ್ಣದಿಂದ ಎಲ್ಲರನ್ನು ತನ್ನತ್ತ ಸೆಳೆಯುತ್ತಿರುವುದು ಮೇ ಫ್ಲವರ್. ಭೂಮಿಯ ಒಳಗೆ ಹುದುಗಿಕೊಂಡು ಹತ್ತಾರು ವರ್ಷಗಳ ನಂತರ ಹೂ ಬಿಡುವ ಸಸ್ಯವರ್ಗಗಳು ಇಂದಿಗೂ ಗಿರಿ ಕಣಿವೆಗಳಲ್ಲಿ ಉಳಿದುಕೊಂಡಿವೆ. ಕೆಲವು ಗೆಡ್ಡೆ ಗಿಡಗಳು ಮಳೆಗಾಲದಲ್ಲಿ ಮಾತ್ರ ಹೂ ಬಿಡುವ ಮೂಲಕ ಅಚ್ಚರಿ ಉಂಟುಮಾಡುತ್ತವೆ. ಮೇ ಮಾಸದಲ್ಲಿ 15 ಸೆಂಟಿ ಮೀಟರ್ ಉದ್ದದ ಎಲೆಗಳ ನಡುವೆ ಒಂದು ದಂಟು ಹೊರಡಿಸಿ ಅದರ ತುದಿಯಲ್ಲಿ ಮೊಗ್ಗು ಬಿರಿದು ನಿಧಾನವಾಗಿ ಅರಳುವ ಮೇ ಫ್ಲವರ್ ಎಲ್ಲರ ಚಿತ್ತ ಸೆಳೆಯುತ್ತದೆ. ಕೆಂಪು, ಕೇಸರಿಯ ಬೆಂಕಿ ಚೆಂಡಿನಂತೆ ವಿನ್ಯಾಸ ಹೊಂದಿರುವ ಈ ಹೂ ಪರಿಸರ ಪ್ರಿಯರಿಗೆ ಅಚ್ಚುಮೆಚ್ಚು. ಈ ಹೂವು ಉಷ್ಣವಲಯದ ಸಸ್ಯವರ್ಗವಾಗಿದ್ದು, ದಕ್ಷಿಣ ಆಫ್ರಿಕಾ ಮೂಲದ ಕಾಡುಗಿಡ. ಮನೆ ಅಂಗಳದ ಅಂದ ಹೆಚ್ಚಿಸುವುದರ ಜೊತೆಗೆ ಮನದ ಒತ್ತಡ ನಿವಾರಿಸುವ ದೈವಿಕ ಗುಣವೂ ಈ ಸಸ್ಯಕ್ಕೆ ಇದೆ ಎನ್ನಲಾಗುತ್ತದೆ. ಉದರ ಶೂಲೆ ಔಷಧಗಳ ತಯಾರಿಕೆಯಲ್ಲಿ ಈ ಸಸ್ಯದ ಬಳಕೆ ಮಾಡಲಾಗುತ್ತದೆ.

### ಮೊದಲ ಬಾರಿಗೆ ಕುರಿ- ಮೇಕೆ ಮೇಳ

• ಉದಯವಾಹಿನಿ, ಶಿರಾ

ನಗರದ ಹಜರತ್ ಮಲ್ಲಿಕ್ ರೆಹಾನ್ ಪಾಷ ದರ್ಗಾ ಬಳಿ ಮೇ 31 ಮತ್ತು ಜೂನ್ 1ರಂದು ಮೊದಲ ಬಾರಿಗೆ ಕುರಿ–ಮೇಕೆ ಮೇಳ ಏರ್ಪಡಿಸಲಾಗಿದೆ. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ತುಮಕೂರು, ಶಿರಾ . ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸಹಯೋಗದೊಂದಿಗೆ ಬಕ್ರೀದ್ ಪ್ರಯುಕ್ತ ಮೇಳ ನಡೆಯಲಿದೆ. ಜಿಲ್ಲೆಯಲ್ಲಿ ಕುರಿ ಸಾಕಾಣಿಕೆ ಮುಖ್ಯ ಕಸುಬಾಗಿದ್ದು, ಶಿರಾ ಕುರಿ ಮಾಂಸ ಉತ್ಕೃಷ್ಟವಾಗಿದ್ದು, ಅಧಿಕ ಬೇಡಿಕೆ ಹೊಂದಿದೆ.

ಇತ್ತೀಚಿನ ದಿನಗಳಲ್ಲಿ ರೈತರು ಬಕ್ರೀದ್ ಸಂದರ್ಭದಲ್ಲಿ ಮಾರಾಟ ಮಾಡಲು ಟಗರು ಮತ್ತು ಹೋತ ಮರಿಗಳನ್ನು ವಿಶೇಷ ಆಸಕ್ತಿ ವಹಿಸಿ ಸಾಕಾಣಿಕೆ ಮಾಡಿ ನಗರಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. ಕುರಿ–ಮೇಕೆ ಮಾರಾಟಗಾರರು ಮತ್ತು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ.

### ಡಿಸಿಸಿ ಬ್ಯಾಂಕ್, ಮಾಜಿ ಅಧ್ಯಕ್ಷ ನಿವಾಸದಲ್ಲಿ ಲೋಕಾ ಶೋಧ

• ಉದಯವಾಹಿನಿ, ಕೋಲಾರ

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಡಿಸಿಸಿ) ಆಡಳಿತ ಮಂಡಳಿ ಚುನಾವಣೆಯ ಹಿಂದಿನ ದಿನವಾದ ಡಿಸಿಸಿ ಬ್ಯಾಂಕ್‌ನ ಮುಖ್ಯ ಕಚೇರಿ, ಚಿಂತಾಮಣಿ ಶಾಖೆ ಹಾಗೂ ಮಾಜಿ ಅಧ್ಯಕ್ಷ ಬ್ಯಾಲಹಳ್ಳಿ ಎಂ.ಗೋವಿಂದಗೌಡ ನಿವಾಸ ಸೇರಿದಂತೆ ಒಂಬತ್ತು ಕಡೆ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದಾರೆ. ಹಲವಾರು ಕಡತ, ದಾಖಲೆ ಪತ್ರಗಳನ್ನು ವಶಕ್ಕೆ ಪಡೆದಿದ್ದಾರೆ



ಬುಧವಾರ (ಮೇ 28) ಕೋಲಾರ ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ 12 ನಿರ್ದೇಶಕರ ಸ್ಥಾನಗಳಿಗೆ ಮತದಾನ ನಡೆಯಲಿದ್ದು, ಗೋವಿಂದಗೌಡ ಕೂಡ ಇತರೆ ಸಹಕಾರ ಸಂಘಗಳ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಅವರು ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಶಾಖೆಯಲ್ಲಿ ರಾಜ್ಯ ಸರ್ಕಾರದ ಸಾಲಮನ್ನಾದ ಸುಮಾರು 11 ಕೋಟಿ ದುರ್ಬಳಕೆ ಸಂಬಂಧಿಸಿದಂತೆ ದಾಖಲಾಗಿದ್ದ ಪ್ರಕರಣ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಈ ಕ್ರಮ ವಹಿಸಿದ್ದಾರೆ. ಗೋವಿಂದಗೌಡ ವಿರುದ್ಧದ ಈ ಪ್ರಕರಣದ ತನಿಖೆ ನಡೆಸಲು ಮೂರು ದಿನಗಳ ಹಿಂದೆಯಷ್ಟೇ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಿಸಿಸಿ ಬ್ಯಾಂಕ್‌ನ ಆಡಳಿತಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್, ಲೋಕಾಯುಕ್ತ ಪೊಲೀಸರಿಗೆ ಅನುಮತಿ ನೀಡಿದ್ದಾರೆ. ಬ್ಯಾಂಕ್‌ನ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯವಾಗಿ ಈ ನಿರ್ಧಾರಗಳು ಕುತೂಹಲ ಮೂಡಿಸಿವೆ. ಲೋಕಾಯುಕ್ತ ಪೊಲೀಸ್‌ನ 15ಕ್ಕೂ ಅಧಿಕ ಸಿಬ್ಬಂದಿ ದಿನವಿಡೀ ದಾಖಲೆ ಪತ್ರಗಳು, ಕಡತಗಳನ್ನು ಶೋಧಿಸಿದರು.

# ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

## ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಕೆ

• ಉದಯವಾಹಿನಿ, ಮೈಸೂರು

ಒಳ ಮೀಸಲಾತಿ ಜಾರಿಯಾಗುವವರೆಗೂ ಎಲ್ಲಾ ಇಲಾಖೆಯಲ್ಲೂ ಬಡ್ತಿ ಪ್ರಕ್ರಿಯೆ ಸ್ಥಗಿತಗೊಳಿಸಬೇಕು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೇರಿದಂತೆ ನಮ್ಮ ಹೋರಾಟಕ್ಕೆ ಅಡ್ಡಿಪಡಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಗರದ ಲಲಿತಮಹಲ್ ಮೈದಾನದಿಂದ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಬಳಿ ಮಧ್ಯಾಹ್ನದವರೆಗೂ ಧರಣಿ ನಡೆಸಿದರು. ಒಳ ಮೀಸಲಾತಿ ಜಾರಿಗೊಳಿಸಲು ಒತ್ತಾಯಿಸಿ ಮೈಸೂರಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲು ಮುಂದಾಗಿರುವ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿಯ ನೆಲಮಂಗಲದ ಭಾಸ್ಕರ್ ಪ್ರಸಾದ್ ಅವರ ಮೇಲೆ ಕಿಡಿಗೇಡಿಗಳು ಹಲ್ಲೆಗೆ ಮುಂದಾಗಿದ್ದಾರೆ. ಉದ್ದೇಶಪೂರ್ವಕವಾಗಿ ಪೊಲೀಸರು ಭಾಸ್ಕರ್ ಪ್ರಸಾದ್ ಅವರನ್ನು ಬಂಧಿಸಿ, ಹಲ್ಲೆ ನಡೆಸಿದ್ದಾರೆ. ಒಳ ಮೀಸಲಾತಿ ವಿರೋಧಿಸುವ ಕೆಲ ಮುಖಂಡರು ಕಲ್ಲು ತೂರಾಟ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಹಲ್ಲೆ ಮಾಡಿರುವವರ ವಿರುದ್ಧ ಕ್ರಮ ಕೈಗೊಂಡು ಬಂಧಿಸಬೇಕು. ಬಂಧಿಸುವ ವೇಳೆ ಕೆಲ ಪೊಲೀಸ್ ಸಿಬ್ಬಂದಿಗಳು ಹಲ್ಲೆ ಮಾಡಿದ್ದು, ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸೇರಿದಂತೆ ಹಲವರ ಮೇಲೆ ಎಫ್‌ಐಆರ್ ದಾಖಲಿಸಬೇಕು. ಪಾದಯಾತ್ರೆಗೆ ಅಡ್ಡಿಪಡಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಧನರಾಜ್ ಮತ್ತು ನಂದೀಶ್ ಅವರನ್ನು ಅಮಾನತ್ತುಗೊಳಿಸಬೇಕು ಎಂದು ಪಟ್ಟುಹಿಡಿದಿದರು.

ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿಗೆ ನಡೆಸಲು ಉದ್ದೇಶಿಸಿರುವ ಪಾದಯಾತ್ರೆ, ಪೊಲೀಸ್ ಭದ್ರತೆ ಒದಗಿಸಬೇಕು. ಪಾದಯಾತ್ರೆಗೆ ಅಡ್ಡಿಯುಂಟು ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿದ್ದ ಕೆಲ ಮುಖಂಡರನ್ನು ಕಚೇರಿಗೆ ಕರೆಸಿಕೊಂಡ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸಮಸ್ಯೆ ಆಲಿಸಿದರು. ಈ ವೇಳೆ ಬೆಂಗಳೂರಿಗೆ ನಡೆಸಲು ಉದ್ದೇಶಿಸಿರುವ ಪಾದಯಾತ್ರೆಗೆ ಭದ್ರತೆ ನೀಡಬೇಕು. ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಭದ್ರತೆಯ ಭರವಸೆ ನೀಡಿದ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪಾದಯಾತ್ರೆ ಆರಂಭಿಸಿ ಪ್ರತಿಭಟನಾಕಾರರು, ಪೊಲೀಸ್ ಭದ್ರತೆಯಲ್ಲಿ ಬನ್ನೂರು ಕಡೆ ಪಾದಯಾತ್ರೆಯಲ್ಲಿ ತೆರಳಿದರು.

ಪ್ರತಿಭಟನೆಯಲ್ಲಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿಯ ಭಾಸ್ಕರ್ ಪ್ರಸಾದ್, ವಕೀಲ ಎಸ್.ಅರುಣ್ ಕುಮಾರ್, ಕೈಲಾಸಪುರಂ ಪ್ರಸನ್ನ ಚಕ್ರವರ್ತಿ, ಗಾಂಧಿನಗರದ ಪ್ರಕಾಶ, ಮರಡಿಪುರ ರವಿಕುಮಾರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.


**ರಾಜ್ಯ ಸರ್ಕಾರ ನ್ಯಾ.ನಾಗಮೋಹನ್ ದಾಸ್ ನೇತೃತ್ವದಲ್ಲಿ ಆರಂಭಿಸಿರುವ ಪರಿಶಿಷ್ಟ ಜಾತಿಯ ಸಮೀಕ್ಷಾ ವರದಿ ಸಲ್ಲಿಕೆಯಾಗಿ ಒಳ ಮೀಸಲಾತಿ ಕಲ್ಪಿಸುವವರೆಗೂ ವಿವಿಧ ಇಲಾಖೆಯಲ್ಲಿ ನೀಡುವ ಬಡ್ತಿಯನ್ನು ತಡೆ ಹಿಡಿಯಬೇಕು. ಒಳ ಮೀಸಲಾತಿ ಜಾರಿಯಿಂದ ಮಾತ್ರ ಮಾದಿಗ ಸಮುದಾಯ ನ್ಯಾಯ ದೊರಕುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಬಡ್ತಿ ಪ್ರಕ್ರಿಯೆ ತಡೆ ಹಿಡಿಯಬೇಕು. ಪರಿಶಿಷ್ಟ ಜಾತಿಯ ಸಮೀಕ್ಷೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ವರದಿ ಸ್ವೀಕರಿಸಿದ ಕೂಡಲೇ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.**

# ಬಿಇಒ ಕಚೇರಿಗೆ ವಾಹನ ಇಲ್ಲದೆ ಪರದಾಟ

• ಉದಯವಾಹಿನಿ, ಪಾವಗಡ

ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ವಾಹನ ನೀಡುವ ಬದಲಿಗೆ, ಚಾಲಕನನ್ನು ಹುದ್ದೆ ಸಮೇತ ಮಧುಗಿರಿ ಉಪ ನಿರ್ದೇಶಕರ ಕಚೇರಿಗೆ ವರ್ಗಾವಣೆ ಮಾಡಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಈ ಹಿಂದೆ ಬಿಇಒ ಕಚೇರಿಗೆ ಜೀಪ್ ನೀಡಲಾಗಿತ್ತು. ತುಂಬಾ ಹಳೆಯ ವಾಹನ ದುರಸ್ತಿ ಮಾಡಿಸಲೂ ಸಾಧ್ಯವಾಗುವುದಿಲ್ಲ ಎಂದು ಅದನ್ನು ಇಲಾಖೆ ಗುಜುರಿಗೆ ಕಳುಹಿಸಿತ್ತು. ಹಲವು ವರ್ಷಗಳಿಂದ ಬಿಇಒ ಕಚೇರಿ ಸಿಬ್ಬಂದಿ, ಶಿಕ್ಷಕರ ಬಳಿ ಕೇಳಿಕೊಂಡು ಅವರ ದ್ವಿಚಕ್ರ ವಾಹನಗಳಲ್ಲಿಯೇ ಶಾಲೆಗಳಿಗೆ ಭೇಟಿ ನೀಡಬೇಕಿದೆ. ಪರೀಕ್ಷೆ, ಶಾಸಕ, ಸಚಿವರ ಕಾರ್ಯಕ್ರಮ, ಸಭೆ ಸಮಾರಂಭಗಳ ವೇಳೆಯಲ್ಲಿ ಬೇರೆ ಇಲಾಖೆಗಳ ವಾಹನಗಳಲ್ಲಿ ಪ್ರಯಾಣಿಸಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಶಿಕ್ಷಣ ಇಲಾಖೆ ಅಧಿಕಾರಿಗಳು ಇದ್ದಾರೆ. ತಾಲ್ಲೂಕು ಕೇಂದ್ರದಿಂದ ಸುಮಾರು 40 ರಿಂದ 50 ಕಿ.ಮೀ ದೂರದ ಶಾಲೆಗಳಿಗೆ ಬಸ್, ದ್ವಿಚಕ್ರ ವಾಹನಗಳ ಮೂಲಕವೇ ಹಲವು ವರ್ಷಗಳಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಓಡಾಡುತ್ತಿದ್ದಾರೆ. ಇಡೀ ದಿನ ಕೇವಲ ಒಂದು ಶಾಲೆಗೆ ಮಾತ್ರ ಭೇಟಿ ಮಾಡಬಹುದು. ವಾಹನ ಇದ್ದಲ್ಲಿ ದಿನಕ್ಕೆ 4 ರಿಂದ 5 ಶಾಲೆಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಬಹುದು ಎನ್ನುವುದು ಅಧಿಕಾರಿಗಳ ಅಂಬೋಣ. ಒಂದು ದಶಕದಿಂದ ವಾಹನವಿಲ್ಲದೆ ಸಾಕಷ್ಟು ಸಮಸ್ಯೆ ಅನುಭವಿಸುತ್ತಿದ್ದ ಅಧಿಕಾರಿಗಳಿಗೆ, ಇಲಾಖೆ ಇಂದಲ್ಲ ನಾಳೆ ವಾಹನ ನೀಡುತ್ತದೆ ಎನ್ನುವ ಭರವಸೆ ಇತ್ತು. ಇದೀಗ ಇದ್ದ ಚಾಲಕನ ಹುದ್ದೆಯನ್ನು ವರ್ಗಾವಣೆ ಮಾಡಿ ಇದ್ದ ಅಲ್ಪ ಸ್ವಲ್ಪ ಭರವಸೆಗೂ ಅಧಿಕಾರಿಗಳು ಮಣ್ಣೆರಚಿದ್ದಾರೆ. ಮಧುಗಿರಿ ಶೈಕ್ಷಣಿಕ ಜಿಲ್ಲೆಯು ಆಂಧ್ರದ ಗಡಿಯಲ್ಲಿದೆ. ಶಾಲೆಗಳ ಭೇಟಿ, ತುರ್ತು ಪರಿಸ್ಥಿತಿಗಳಲ್ಲಿ ವಾಹನದ ಅವಶ್ಯಕತೆ ಇರುವುದರಿಂದ ಚಾಲಕರಿಲ್ಲದೆ ತೊಂದರೆಯಾಗುತ್ತದೆ. ಹೀಗಾಗಿ ಪಾವಗಡದಿಂದ ಚಾಲಕನ ಇಲ್ಲಿಗೆ ವರ್ಗಾವಣೆ ಮಾಡಿಕೊಡಬೇಕು ಎಂದು ಉನ್ನತ ಇಲಾಖೆ ಅಧಿಕಾರಿಗಳಿಗೆ ಮಧುಗಿರಿ ಉಪ ನಿರ್ದೇಶಕಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಪ್ರಸ್ತಾವನೆ ಪರಿಗಣಿಸಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಎ. ಮಹಾಲಕ್ಷ್ಮಿ ಅವರು ಮೇ 5ರಂದು ಚಾಲಕನನ್ನು ಹುದ್ದೆ ಸಮೇತ ಮಧುಗಿರಿ ಉಪ ನಿರ್ದೇಶಕರ ಕಚೇರಿಗೆ ವರ್ಗಾವಣೆ ಮಾಡಿ ಆದೇಶಿಸಿದ್ದಾರೆ.


ಉದಯವಾಹಿನಿ ಚಿತ್ರ

**ರಾಜಧಾನಿ, ಜಿಲ್ಲಾ ಕೇಂದ್ರದಿಂದ ಸಾಕಷ್ಟು ದೂರದಲ್ಲಿರುವ, ಆಂಧ್ರದಿಂದ ಸುತ್ತುವರೆದಿರುವ ತಾಲ್ಲೂಕಿಗೆ ವಾಹನ. ಚಾಲಕನ ಅಗತ್ಯವಿಲ್ಲವೆ ಎನ್ನುವುದು ಸಾರ್ವಜನಿಕರ ಪ್ರಶ್ನೆ, ತಾಲ್ಲೂಕಿಗೆ ಬರಲು, ಇಲ್ಲಿ ಕಾರ್ಯನಿರ್ವಹಿಸುವಲ್ಲಿ ನೌಕರರು ಹಿಂದೇಟು ಹಾಕುತ್ತಾರೆ. ಇಂತಹ ಸ್ಥಿತಿಯಲ್ಲಿ ತಾಲ್ಲೂಕಿನಿಂದ ಹುದ್ದೆಯನ್ನೂ ವರ್ಗಾವಣೆ ಮಾಡಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ.**

ಅಂತರಾಳದಿಂದ... EDITORIAL

# ರವಿಕುಮಾರ್ ಮಾತು ಖಂಡನಾರ್ಹ
# ಕಠಿಣ ಕ್ರಮ ತ್ವರಿತವಾಗಿ ಆಗಲಿ

ವಿಧಾನಪರಿಷತ್ ಸದಸ್ಯ, ಬಿಜೆಪಿಯ ಎನ್. ರವಿಕುಮಾರ್ ಅವರು ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು 'ಪಾಕಿಸ್ತಾನದವರೋ ಅಥವಾ ಭಾರತದವರೋ ಎಂಬುದು ಖಚಿತವಾಗಿಲ್ಲ' ಎಂದು ಹೇಳಿರುವುದು ಖಂಡನೆಗೆ ಅರ್ಹ. ಈ ಮಾತು ಅಪಮಾನಕಾರಿ ಮಾತ್ರವೇ ಅಲ್ಲ ಅಪಾಯಕಾರಿಯೂ ಹೌದು. ಬಿಜೆಪಿಯ ನಾಯಕರು ಮುಸ್ಲಿಮರನ್ನು ಗುರಿಯಾಗಿಸಿಕೊಂಡು, ಅವರಿಗೆ ದೇಶದ ಬಗ್ಗೆ 'ನಿಷ್ಠೆ ಇಲ್ಲ' ಎಂಬ ಅನುಮಾನ ಇತರರಲ್ಲಿ ಮೂಡಬೇಕು ಎಂಬ ಉದ್ದೇಶದಿಂದ ಇಂತಹ ಮಾತಿನ ದಾಳಿಗಳನ್ನು ಮಾಡುತ್ತಿದ್ದಾರೆ. ಅದರ ಭಾಗ ರವಿಕುಮಾರ್ ಆಡಿರುವ ಮಾತುಗಳು. ಇಂತಹ ಮಾತುಗಳು ಮುಸ್ಲಿಮರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರ ಸರಿಸುವುದಕ್ಕೆ ಇಂಬು ಕೊಡುವಂಥವು.



ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲೇ 'ಅರ್ಧ ಪಾಕಿಸ್ತಾನ ಇದೆ' ಎಂದು ಹಿಂದೊಮ್ಮೆ ನಿಂದಿಸಿದ್ದರು. ದಿನೇಶ್ ಅವರು ಮುಸ್ಲಿಂ ಮಹಿಳೆಯನ್ನು ಮದುವೆಯಾಗಿರುವ ಕಾರಣಕ್ಕೆ ಯತ್ನಾಳ ಈ ಬಗೆಯಲ್ಲಿ ಮಾತನಾಡಿದ್ದರು. ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು, ಪಾಕಿಸ್ತಾನದಲ್ಲಿ ಇರುವ ಸಮುದಾಯದವರ ಸಹೋದರಿ ಎಂದು ಕರೆದಿದ್ದರು. ಇಂತಹ ಮಾತುಗಳು ಮುಸ್ಲಿಮರ ತ್ಯಾಗ, ಸೇವೆ, ಸಾಂವಿಧಾನಿಕವಾಗಿ ಅವರು ಹೊಂದಿರುವ ಸ್ಥಾನ ಏನೇ ಇದ್ದರೂ ಅವರನ್ನು ಅನುಮಾನಕ್ಕೆ ಗುರಿಮಾಡುವ ಉದ್ದೇಶದ ಪ್ರಯತ್ನದ ಭಾಗ.

ಐಎಎಸ್ ಅಧಿಕಾರಿಯಾಗಿರುವ ಫೌಜಿಯಾ ಅವರ ನಿಷ್ಠೆಯನ್ನು ಅವರ ಧರ್ಮದ ಕಾರಣಕ್ಕೆ ಪ್ರಶ್ನಿಸುವುದು ವೈಯಕ್ತಿಕ ಮಟ್ಟದ ನಿಂದೆಯಷ್ಟೇ ಅಲ್ಲ, ಅದು ನಾಗರಿಕ ಸೇವೆಗಳಿಗೆ ಹಾಗೂ ದೇಶದ ಅಧಿಕಾರಿಶಾಹಿಯ ಧರ್ಮನಿರಪೇಕ್ಷ ನೆಲಗಟ್ಟಿಗೆ ಮಾಡುವ ಅವಮಾನವೂ ಹೌದು. ರವಿಕುಮಾರ್ ಆಡಿರುವ ಮಾತುಗಳನ್ನು ಐಎಎಸ್ ಅಧಿಕಾರಿಗಳ ಸಂಘವು ಖಂಡಿಸಿರುವುದು ಸರಿಯಾಗಿಯೇ ಇದೆ. ಆದರೆ ಇಂತಹ ಮಾತುಗಳಿಗೆ ಈ ಬಗೆಯ ಖಂಡನೆ ಮಾತ್ರವೇ ಸಾಕಾಗುವುದಿಲ್ಲ. ಇಂತಹ ಮಾತು ಆಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

**ಸಾರ್ವಜನಿಕ ಸೇವೆಯಲ್ಲಿ ಇರುವವರನ್ನು ಅವರ ಧರ್ಮದ ಕಾರಣಕ್ಕೆ ನಿಂದಿಸಿದಾಗ, ಸರ್ಕಾರದ ಕರ್ತವ್ಯದಲ್ಲಿ ಇರುವ ಅಲ್ಪಸಂಖ್ಯಾತ ಸಮುದಾಯದವರಲ್ಲಿ ಭೀತಿ ಮೂಡಿಸುವ ಸಂದೇಶವೊಂದು ರವಾನೆಯಾಗುತ್ತದೆ. ಅಂದರೆ, ಯಾವುದೇ ಹುದ್ದೆಯಲ್ಲಿ, ಎಷ್ಟೇ ದೊಡ್ಡ ಸ್ಥಾನದಲ್ಲಿ ಇದ್ದರೂ ಪೂರ್ವಗ್ರಹಪೀಡಿತ ವಾಗ್ದಾಳಿಗಳಿಂದ ತಮಗೆ ರಕ್ಷಣೆ ಇಲ್ಲ ಎಂಬ ಸಂದೇಶವು ಅವರಿಗೆ ರವಾನೆಯಾಗುತ್ತದೆ.**

ರವಿಕುಮಾರ್, ವಿಜಯ್ ಶಾ ಅವರಂತಹ ಮುಖಂಡರ ವಿರುದ್ಧ ಕ್ರಮ ಜರುಗಿಸಲು ಬಿಜೆಪಿಯು ಹಿಂದೇಟು ಹಾಕುತ್ತಿರುವುದು, ಅಂತಹ ಮಾತುಗಳನ್ನು ಪಕ್ಷವು ಒಪ್ಪುತ್ತದೆ ಎಂಬ ಪರೋಕ್ಷ ಸಂದೇಶವನ್ನು ನೀಡುತ್ತಿದೆ. 'ನಾನು ಬಾಯಿತಪ್ಪಿ ಹಾಗೆ ಮಾತನಾಡಿದೆ' ಎಂಬ ಕಾರಣ ನೀಡಿ ಮುಖಂಡರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾದರೆ, ಅಂತಹ ಮಾತುಗಳನ್ನು ಮತ್ತೆ ಆಡಲು ಇತರರಿಗೆ ಧೈರ್ಯ ಬರುತ್ತದೆ. ದ್ವೇಷದ ನೆಲೆಯಲ್ಲಿ ಮಾತನಾಡುವವರ ವಿರುದ್ಧ ಬಿಜೆಪಿಯು ಕ್ರಮ ಜರುಗಿಸಬೇಕು, ಅದಾಗದಿದ್ದರೆ ಈ ಬಗೆಯಲ್ಲಿ ವಿಷ ಉಗುಳುವುದು ತನ್ನ ರಾಜಕೀಯದ ಒಂದು ಭಾಗ ಎಂಬುದನ್ನು ಒಪ್ಪಿಕೊಳ್ಳಬೇಕು.

ಇಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ್ದೂ ಒಂದಿಷ್ಟು ತಪ್ಪುಗಳಿವೆ. ಇಂತಹ ಪ್ರಕರಣಗಳನ್ನು ಎಷ್ಟು ಗಂಭೀರವಾಗಿ ನಿರ್ವಹಿಸಬೇಕೋ ಅಷ್ಟು ಗಂಭೀರವಾಗಿ ನಿರ್ವಹಿಸುವ ಕೆಲಸ ಕಾಂಗ್ರೆಸ್ಸಿನಿಂದ ಆಗುತ್ತಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುವಂತೆ ಮಾಡುವ ಉದ್ದೇಶ ಇಲ್ಲದೆ, ಎಫ್‌ಐಆರ್ ಮಾತ್ರ ದಾಖಲಿಸುವುದರಿಂದ ತಪ್ಪು ಮಾಡಿದರೂ ಶಿಕ್ಷೆ ಆಗದು' ಎಂಬ ಸಂದೇಶ ಹೋಗುತ್ತದೆ. ಇದರಿಂದಾಗಿ ಕಾನೂನಿನ ಮೇಲಿನ ವಿಶ್ವಾಸಕ್ಕೆ ಚ್ಯುತಿ ಬರುತ್ತದೆ. ದ್ವೇಷದ ಮಾತುಗಳು ಇನ್ನಷ್ಟು ಹೆಚ್ಚಾಗುತ್ತವೆ.

ಭಾರತದ ಶಕ್ತಿ ಇರುವುದು ಬಹುತ್ವದಲ್ಲಿ, ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ಕಾಪಾಡುವಲ್ಲಿ. ಐಎಎಸ್ ಅಧಿಕಾರಿಯೊಬ್ಬರ ನಿಷ್ಠೆಯನ್ನು ಅವರ ಧರ್ಮದ ಕಾರಣಕ್ಕಾಗಿ ಪ್ರಶ್ನಿಸಿದಾಗ, ಸೇನೆಯ ಕರ್ನಲ್ ಒಬ್ಬರನ್ನು ಅವರ ಧರ್ಮದ ಕಾರಣಕ್ಕಾಗಿ ನಿಂದಿಸಿದಾಗ ಆಗುವ ಹಾನಿಯು ವ್ಯಕ್ತಿಗಳ ಹಂತದಲ್ಲಿ ಮಾತ್ರವೇ ಉಳಿದು ಕೊಳ್ಳುವುದಿಲ್ಲ.

ಈ ರೀತಿಯ ಪ್ರಕರಣಗಳು ಭಾರತದ ಹೃದಯಕ್ಕೆ ಗಾಯ ಉಂಟುಮಾಡುತ್ತವೆ. ರಾಜಕೀಯ ಮುಖಂಡರು, ಸಮಾಜ ಮತ್ತು ನ್ಯಾಯಾಂಗವು ಇಂತಹ ವಿಭಜನಕಾರಿ ವರ್ತನೆಗಳ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಬುನಾದಿಗೆ ಪೆಟ್ಟು ಬೀಳುತ್ತದೆ. ಇಂತಹ ಕೋಮುವಾದಿ ಕೃತ್ಯಗಳ ಬಗ್ಗೆ ಗಂಭೀರವಾಗಿ ಗಮನ ಹರಿಸಲು, ಇಂತಹ ಕೃತ್ಯಗಳಿಗೆ ಇಂಬು ಕೊಡುವ ಮೌನವನ್ನು ಕೊನೆಗೊಳಿಸಲು ಇದು ಸಕಾಲ.

---



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

## ಉದಯೋನ್ಮುಖ ಕಲಾವಿದೆಯರಾದ ಅಮೃತಾ-ಅಂಬಿಕಾ
# ಸೋದರಿಯರ ರಂಗಪ್ರವೇಶ


ಬೆಂಗಳೂರಿನಲ್ಲಿ ಬದ್ಧತೆಯ ನೃತ್ಯತರಬೇತಿಗೆ ಹೆಸರಾದ ಖ್ಯಾತ ನೃತ್ಯಗುರು ಮತ್ತು ಭರತನಾಟ್ಯ ಉತ್ತಮ ನೃತ್ಯಕಲಾವಿದೆಯಾದ ಡಾ. ಪಿ. ಮಾನಸ ತಮ್ಮ 'ಮನೋಜ್ಞ ನೃತ್ಯ ಕಲಾ ಅಕಾಡೆಮಿ'ಯ ಮೂಲಕ ನೂರಾರು ಜನ ನೃತ್ಯಾಕಾಂಕ್ಷಿಗಳಿಗೆ ವಿದ್ಯಾದಾನ ಮಾಡುತ್ತಿದ್ದು, ಅವರ ನುರಿತ ಗರಡಿಯಲ್ಲಿ ರೂಪುಗೊಂಡ ಕಲಾಶಿಲ್ಪಗಳು ಶ್ರೀಮತಿ. ವಿದುಷಿ ಅಮೃತ ಸತ್ಯೇಂದ್ರ ಮತ್ತು ಕು. ಅಂಬಿಕಾ ಸತ್ಯೇಂದ್ರ ಸೋದರಿಯರು. ಇಂಜಿನಿಯರಿಂಗ್ ಪದವೀಧರೆಯರಾದ ಇವರಿಬ್ಬರು ಕಳೆದ 14 ವರ್ಷಗಳಿಂದ ಡಾ. ಮಾನಸರ ಬಳಿ ಬಹು ಆಸಕ್ತಿ- ಪರಿಶ್ರಮಗಳಿಂದ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ನಾಡಿನಾದ್ಯಂತ ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿರುವ ಇವರು ಶ್ರೀ ಸತ್ಯೇಂದ್ರ ನಿರಂಜನ್ ಮತ್ತು ರೇಖಾ ದಂಪತಿಯರ ಪುತ್ರಿಯರು. ಕರ್ನಾಟಕ ಸರ್ಕಾರದ ವಿದ್ವತ್ ಪರೀಕ್ಷೆಯವರೆಗೆ ಎಲ್ಲಾ ಹಂತಗಳಲ್ಲೂ ಅತ್ಯುಚ್ಚ ಅಂಕಗಳನ್ನು ಪಡೆದು ತೇರ್ಗಡೆಯಾಗಿರುವ ಈ ಸಹೋದರಿಯರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಜೂನ್ ತಿಂಗಳ 1 ಭಾನುವಾರದಂದು ಸಂಜೆ 5. 30 ಕ್ಕೆ ಎ.ಡಿ.ಎ. ರಂಗಮಂದಿರದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶವನ್ನು ನೆರವೇರಿಸಿಕೊಳ್ಳಲಿದ್ದಾರೆ. ಇವರ ಅನುಪಮ ನೃತ್ಯವಿನ್ಯಾಸವನ್ನು ಕಣ್ತುಂಬಿಕೊಳ್ಳಲು ಎಲ್ಲಾ ಕಲಾರಸಿಕರಿಗೂ ಆದರದ ಸುಸ್ವಾಗತ .

**ಅಪೂರ್ವ ನೃತ್ಯ ವಿನ್ಯಾಸ**

ಭಾರತದ ವಾಯುಪಡೆಯಲ್ಲಿ ಅಮೂಲ್ಯ ಸಲ್ಲಿಸಿರುವ ಶ್ರೀ ಸತ್ಯೇಂದ್ರ ಮತ್ತು ರೇಖಾ ದಂಪತಿಗಳ ಮಕ್ಕಳಾದ ಅಮೃತಾ ಮತ್ತು ಅಂಬಿಕಾ ಪ್ರತಿಭಾನ್ವಿತರು. ಬಾಲ್ಯದಿಂದಲೇ ನೃತ್ಯಾಸಕ್ತಿ. ಒಟ್ಟು 14 ವರ್ಷಗಳ ಪರಿಶ್ರಮದ ನೃತ್ಯ ಕಲಿಕೆ. ವಿದ್ಯಾಭ್ಯಾಸದಲ್ಲೂ ಅಷ್ಟೇ ಮುಂದು. ಶಾಲಾ- ಕಾಲೇಜುಗಳಲ್ಲಿ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಗಳಿಸಿದ ವೈಶಿಷ್ಟ್ಯ.

ರಾಜ್ಯಾದ್ಯಂತ ಎಲ್ಲಾ ಪ್ರತಿಷ್ಠಿತ ವೇದಿಕೆಗಳಲ್ಲಿ ಮತ್ತು ದೇವಾಲಯಗಳಲ್ಲಿ ನರ್ತಿಸಿದ ಸಂತೃಪ್ತಿ ಅವರದು. ಹೆತ್ತವರೊಂದಿಗೆ ತಾತಂದಿರು ಮತ್ತು ಅಜ್ಜಿಯಂದಿರ ಸಂಪೂರ್ಣ ಬೆಂಬಲವೂ ಅವರಿಗಿದೆ.

ಶ್ರೀಮತಿ ಅಮೃತಾ ಅಭಿನಂದನ್ ವಿವಾಹಿತೆ. ವಿದ್ವತ್ ಪರೀಕ್ಷೆಯನ್ನು ಅತ್ಯುಚ್ಚ ಅಂಕಗಳಿಂದ ತೇರ್ಗಡೆ ಹೊಂದಿರುವ ಅಮೃತಾಳ ಶೈಕ್ಷಣಿಕ ಪ್ರಯಾಣ ಭಾರತದಾದ್ಯಂತದ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರಾರಂಭವಾದದ್ದು ವಿಶೇಷ. 14 ನೇ ವಯಸ್ಸಿನಲ್ಲಿ, ಭರತನಾಟ್ಯದಲ್ಲಿ ತರಬೇತಿ. ಓದಿನಲ್ಲೂ ಜಾಣೆ. ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಮಾಹಿತಿ ವಿಜ್ಞಾನದಲ್ಲಿ ಇಂಜಿನಿಯರಿಂಗ್ ಪದವಿ. ಪ್ರಸ್ತುತ ಕ್ಯಾಪ್‌ಜೆಮಿನಿ ಟೆಕ್ನಾಲಜಿ ಸರ್ವಿಸಸ್ ಇಂಡಿಯಾ ಲಿಮಿಟೆಡ್‌ನಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕಾರ್ಯ ನಿರ್ವಹಣೆ. ಕಾಲೇಜಿನಲ್ಲಿ ಹ್ಯಾಕಥಾನ್‌ಗಳಲ್ಲಿ ಸಕ್ರಿಯೆ. ಅನೇಕ ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವಗಳ ಆಯೋಜನೆ, ಭಾಗವಹಿಸುವಿಕೆ. ಅಮೃತ ಪೂರ್ಣ ಅಲಂಕಾರ ಪರೀಕ್ಷೆ ಮಟ್ಟವನ್ನು ಪೂರ್ಣಗೊಳಿಸಿದ್ದು, ಅನೇಕ ನೃತ್ಯ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ.



ಕು.ಅಂಬಿಕಾ ಸತ್ಯೇಂದ್ರ- ಅಂಬಿಕಾ ಪ್ರತಿಭಾವಂತ ಉದಯೋನ್ಮುಖ ನೃತ್ಯಕಲಾವಿದೆ. 8 ವರ್ಷಕ್ಕೆ ಭರತನಾಟ್ಯ ಕಲಿಯಲಾರಂಭಿಸಿ, ಕರ್ನಾಟಕ ಸರ್ಕಾರದ ಹಿರಿಯ ನೃತ್ಯ ಪರೀಕ್ಷೆಗಳಲ್ಲಿ ಅತ್ಯುಚ್ಚ ಅಂಕ ಪಡೆದು ತೇರ್ಗಡೆಯಾಗಿದ್ದು, ಪೋಸ್ಟ್ ವಿದ್ವತ್ ಪರೀಕ್ಷೆಯ ತಯಾರಿ ನಡೆಸಿದ್ದಾರೆ.

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ ಎಂ ಇ ಜಿ ಸೆಂಟರ್‌ನಲ್ಲಿ 10 ನೇ ತರಗತಿ ಮತ್ತು ಮಂಗಳೂರಿನ ಮಹೇಶ್ ಪಿಯು ಕಾಲೇಜಿನಲ್ಲಿ ಓದಿ, ಪ್ರಸ್ತುತ ಎಂ.ವಿ.ಜೆ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಬ್ಯಾಚುಲರ್ ಆಫ್ ಇಂಜಿನಿಯರಿಂಗ್ ಓದುತ್ತಿದ್ದಾರೆ. ಜೊತೆಜೊತೆಗೆ ಅನೇಕ ನೃತ್ಯ ಮತ್ತು ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿದ್ದು ವೈಶಿಷ್ಟ್ಯ.

ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಅಂಬಿಕಾ, ಸಾಂಸ್ಕೃತಿಕ ಗುಂಪಿನ 'ಧ್ವನಿ' ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರಲ್ಲದೆ, ಸ್ವಯಂ ಸಾಂಸ್ಕೃತಿಕ ಉತ್ಸವ, ವರ್ಟೆಕ್ಸ್ 11.0 ಮತ್ತು ಪ್ರಾಜೆಕ್ಟ್ ಎಕ್ಸ್‌ಪೋ 2024 ನಂತಹ ಅಂತರ ಕಾಲೇಜು ಉತ್ಸವಗಳನ್ನು ಆಯೋಜಿಸುವಲ್ಲಿ ಕೂಡ ಪ್ರಮುಖ ಪಾತ್ರ ವಹಿಸಿದ್ದಾರೆ. ಮುಂಬೈನ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ಅಲಂಕಾರ ಪ್ರಥಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ ಕೂಡ.

### ವಿವಿಧ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನ

**ಉನ್ನತ ನೃತ್ಯಸಾಧನೆಯ ಆಕಾಂಕ್ಷೆಯುಳ್ಳ ಈ ಸಹೋದರಿಯರು ಅನೇಕ ರಾಷ್ಟ್ರೀಯ ಮಟ್ಟದ ನೃತ್ಯೋತ್ಸವಗಳು,ದೇವಾಲಯದಲ್ಲಿ ನೃತ್ಯ ಪ್ರದರ್ಶನಗಳು, ಸರ್ಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕಾರ್ಪೊರೇಟ್ ಪ್ರದರ್ಶನಗಳು ಸೇರಿದಂತೆ ಭಾರತದಾದ್ಯಂತ ಮೈಸೂರು, ಆಂಧ್ರಪ್ರದೇಶ, ತಮಿಳುನಾಡು ಮುಂತಾದೆಡೆಗಳ ವಿವಿಧ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನ ನೀಡಿರುವ ಹಿರಿಮೆ ಇವರದು. ಇವರ ಪ್ರತಿಭೆಯನ್ನರಸಿ ಅನೇಕ ಬಿರುದು- ಪ್ರಶಸ್ತಿಗಳೂ ಸಂದಿವೆ.**

---

# ಜೇನ್ನೊಣದ ಕುರಿತು



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಜೇನುಹುಳುಗಳು ಹಾರುವ ಕೀಟಗಳು, ಮತ್ತು ಕಣಜಗಳು ಮತ್ತು ಇರುವೆಗಳ ಹತ್ತಿರದ ಸಂಬಂಧಿಗಳು. ಅಂಟಾರ್ಕ್ಟಿಕಾವನ್ನು ಹೊರತುಪಡಿಸಿ ಭೂಮಿಯ ಮೇಲಿನ ಪ್ರತಿಯೊಂದು ಖಂಡದಲ್ಲೂ ಅವು ಕಂಡುಬರುತ್ತವೆ.

ಎಲ್ಲಾ ಪ್ರಭೇದಗಳ ಜೇನುನೊಣಗಳು ಮಕರಂದ ಮತ್ತು ಪರಾಗಗಳ ಮೇಲೆ ವಾಸಿಸುತ್ತವೆ. ಜೇನುನೊಣಗಳಿಲ್ಲದೆ, ಪರಾಗಸ್ಪರ್ಶವು ಕಷ್ಟಕರವಾಗಿರುತ್ತದೆ ಮತ್ತು ಸಮಯ ತೆಗೆದುಕೊಳ್ಳುತ್ತದೆ - ಮಾನವನ ಆಹಾರ ಪೂರೈಕೆಯ ಮೂರನೇ ಕೀಟಗಳ ಪರಾಗಸ್ಪರ್ಶವನ್ನು ಅವಲಂಬಿಸಿರುತ್ತದೆ ಒಂದು ಭಾಗ ಎಂದು ಅಂದಾಜಿಸಲಾಗಿದೆ. ಜೇನುನೊಣಗಳು ಪ್ರೋಬಿಸ್ಕಸ್ ಎಂದು ಕರೆಯಲ್ಪಡುವ ಉದ್ದವಾದ, ಒಣಹುಲ್ಲಿನಂತಹ ನಾಲಿಗೆಯನ್ನು ಹೊಂದಿರುತ್ತವೆ, ಇದು ಹೂವುಗಳ ಆಳದಿಂದ ಮಕರಂದವನ್ನು ಕುಡಿಯಲು ಅನುವು ಮಾಡಿಕೊಡುತ್ತದೆ.

ಜೇನುನೊಣಗಳು ಎರಡು ರೆಕ್ಕೆಗಳು, ಎರಡು ಆಂಟೆನಾಗಳು ಮತ್ತು ಮೂರು ವಿಭಾಗದ ದೇಹದ ಭಾಗಗಳನ್ನು (ತಲೆ, ಎದೆಗೂಡಿನ ಮತ್ತು ಹೊಟ್ಟೆ) ಹೊಂದಿದವು. ಜೇನುಹುಳುಗಳು ವಸಾಹತುಗಳಲ್ಲಿ ವಾಸಿಸುವ ಸಾಮಾಜಿಕ ಕೀಟಗಳು. ಜೇನುಗೂಡಿನ ಜನಸಂಖ್ಯೆಯು ಒಂದೇ ರಾಣಿ, ಕೆಲವು ನೂರು ಡ್ರೋನ್‌ಗಳು ಮತ್ತು ಸಾವಿರಾರು ಕಾರ್ಮಿಕ ಜೇನುನೊಣಗಳನ್ನು ಒಳಗೊಂಡಿದೆ.

ಹನಿಬೀ ಸೆಂಟರ್‌ನಲ್ಲಿ ನಾವು ತಿಳಿದಿರುವ ಮತ್ತು ಪ್ರೀತಿಸುವ ಜೇನುನೊಣಗಳು ಹೂವಿನ ಸಸ್ಯಗಳಿಂದ ಮಕರಂದ ಮತ್ತು ಪರಾಗಕ್ಕೆ ಮೇವು. ನಮ್ಮ ನೆಚ್ಚಿನ ಸಿಹಿ ಸತ್ಕಾರವನ್ನು ರಚಿಸಲು ಅವರು ಸಂಗ್ರಹಿಸಿದ ಮಕರಂದವನ್ನು ಬಳಸುತ್ತಾರೆ ಜೇನು! ಮಕರಂದವನ್ನು ಮತ್ತೆ ಜೇನುಗೂಡಿಗೆ ಕೊಂಡೊಯ್ಯುವಾಗ, ಅವರ ದೇಹಗಳು ಮಕರಂದದ ಸಂಕೀರ್ಣ ಸುಕ್ರೋಸ್‌ನ್ನು ಪ್ರಕ್ಟೋಸ್ ಮತ್ತು ಗ್ಲೂಕೋಸ್ ಎಂಬ ಎರಡು ಸರಳ ಸಕ್ಕರೆಗಳಾಗಿ ಒಡೆಯುತ್ತವೆ. ಜೇನುಗೂಡು ಕೋಶಕ್ಕೆ ಅದನ್ನು ಅಂದವಾಗಿ ಎಳೆದುಕೊಂಡು, ಜೇನುನೊಣಗಳು ತೇವಾಂಶವನ್ನು ಹೊರಹಾಕಲು ಮತ್ತು ವಸ್ತುವನ್ನು ದಪ್ಪವಾಗಿಸಲು ಈ ಸಿರಪ್ ಸಿಹಿ ದ್ರವದ ಮೇಲೆ ಕೋಪದಿಂದ ರೆಕ್ಕೆಗಳನ್ನು ಹೊಡೆಯುತ್ತವೆ. ಅದು ಪೂರ್ಣಗೊಂಡಾಗ, ಜೇನುನೊಣಗಳು ಆ ಕೋಶವನ್ನು ಜೇನುಮೇಣದಿಂದ ಮುಚ್ಚಿ, ನಂತರ ಪರಿಪೂರ್ಣವಾದ ಜೇನುತುಪ್ಪವನ್ನು ಬಳಕೆಗೆ ಮುಚ್ಚುತ್ತವೆ.



---

# ಪುರುಷರು ಎಷ್ಟು ವರ್ಷದವರೆಗೆ ತಂದೆಯಾಗಬಹುದು?

ಪುರುಷರು ಯಾವುದೇ ವಯಸ್ಸಿನಲ್ಲಿ ತಂದೆಯಾಗಬಹುದು, ಆದರೆ ಹೆಚ್ಚುತ್ತಿರುವ ವಯಸ್ಸಿನಲ್ಲಿ, ಫಲವತ್ತತೆ ಮತ್ತು ಹಾರ್ಮೋನುಗಳು ಎರಡೂ ಪರಿಣಾಮ ಬೀರುತ್ತವೆ. ಆರೋಗ್ಯಕರ ಜೀವನಶೈಲಿಯ ಮೂಲಕ ಪುರುಷರು ತಮ್ಮ ಫರ್ಟಿಲಿಟಿ ಕ್ಷೀಣಿಸುವುದನ್ನು ತಡೆಯಬಹುದು.


ಇತ್ತೀಚೆಗಷ್ಟೇ ಬಾಲಿವುಡ್ ನಟ ಅರ್ಬಾಜ್ ಖಾನ್ ತನ್ನ 57 ವಯಸ್ಸಿನಲ್ಲಿ ಮಗುವಿನ ತಂದೆಯಾಗಿದ್ದಾರೆ. ಹೀಗಿರುವಾಗ ಪುರುಷರು ಎಷ್ಟು ವರ್ಷದ ವರೆಗೆ ಮಗು ಮಾಡಿಕೊಳ್ಳಬಹುದು ಎನ್ನುವ ಪ್ರಶ್ನೆ ಬಹುತೇಕರಲ್ಲಿದೆ. ಯಾಕೆಂದರೆ ಮಹಿಳೆಯರಲ್ಲಿ ಇಂತಿಷ್ಟು ವಯಸ್ಸಾದಂತೆ ಋತುಬಂಧ ಕಾಡಲಾರಂಭಿಸುತ್ತದೆ. ಋತುಬಂಧದ ನಂತರ ಮಹಿಳೆಗೆ ಮಗುವಿಗೆ ಜನ್ಮ ನೀಡಲು ಸಾಧ್ಯವಿಲ್ಲ. ಹಾಗೆಯೇ ಪುರುಷರು ಎಷ್ಟು ವರ್ಷಗಳಾದ ನಂತರ ಮಗು ಪಡೆಯಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ತಿಳಿಯೋಣ.

**ಪುರುಷರ ಫರ್ಟಿಲಿಟಿಯನ್ನು ಅವಲಂಭಿಸಿದೆ:** ಋತುಬಂಧದ ಬಗ್ಗೆ ಮಾತನಾಡುವಾಗಲೆಲ್ಲಾ, ಮಹಿಳೆಯರ ವಯಸ್ಸು, ಹಾರ್ಮೋನುಗಳ ಬದಲಾವಣೆಗಳು ಮತ್ತು ಋತುಚಕ್ರದ ಸಮಸ್ಯೆಗಳ ಚರ್ಚೆ ತಕ್ಷಣ ಮನಸ್ಸಿಗೆ ಬರುತ್ತದೆ. ಆದರೆ ವಯಸ್ಸಾದಂತೆ ಪುರುಷರ ದೇಹದಲ್ಲಿಯೂ ಇದೇ ರೀತಿಯ ಬದಲಾವಣೆ ಆಗುತ್ತವೆ, ಪುರುಷರು ಸಹ ಋತುಬಂಧದಂತಹ ಹಂತವನ್ನು ದಾಟಬೇಕು ಎನ್ನುವುದು ಬಹುತೇಕರಿಗೆ ತಿಳಿದಿಲ್ಲ.

ಪುರುಷರು ಎಷ್ಟು ವಯಸ್ಸಿನವರೆಗೆ ತಂದೆಯಾಗಬಹುದು ಎಂಬುವುದು ಅವರ ಫರ್ಟಿಲಿಟಿಯ ಮೇಲೆ ನಿಂತಿದೆ. ಪುರುಷರಲ್ಲೂ ವಯಸ್ಸಾಗುತ್ತಾ ಹೋದಂತೆ ಫಲವತ್ತತೆ ಕಡಿಮೆಯಾಗಲಾರಂಭಿಸುತ್ತದೆ.

### ಪುರುಷರಲ್ಲಿ ಆಂಡ್ರೋಪಾಸ್ ಲಕ್ಷಣಗಳು

- ಆಯಾಸ ಮತ್ತು ಶಕ್ತಿಯ ಕೊರತೆ
- ಲೈಂಗಿಕ ಬಯಕೆ ಕಡಿಮೆಯಾಗುವುದು
- ಏಕಾಗ್ರತೆ ಕಡಿಮೆಯಾಗುವುದು
- ಮನಸ್ಥಿತಿಯಲ್ಲಿ ಬದಲಾವಣೆ ಅಥವಾ ಕಿರಿಕಿರಿ
- ಸ್ನಾಯು ದೌರ್ಬಲ್ಯ



**ಪುರುಷರ ಫರ್ಟಿಲಿಟಿ ಎಷ್ಟು ಕಾಲ ಇರುತ್ತದೆ?**

ಪುರುಷರ ಫಲವತ್ತತೆ ಸಂಪೂರ್ಣವಾಗಿ ಮುಗಿಯಲು ಅವರಿಗೆ ಯಾವುದೇ ನಿರ್ದಿಷ್ಟ ವಯಸ್ಸು ಎನ್ನುವುದು ಇರುವುದಿಲ್ಲ.

ಪುರುಷರು 60 ರಿಂದ 70 ವರ್ಷ ವಯಸ್ಸಿನವರೆಗೆ ತಂದೆಯಾಗಬಹುದು. ಆದರೆ ವಯಸ್ಸು ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಇದರ ಅರ್ಥವಲ್ಲ. ಪುರುಷರಲ್ಲಿ ವಯಸ್ಸು ಹೆಚ್ಚಾದಂತೆ, ವೀರ್ಯದ ಗುಣಮಟ್ಟ ಮತ್ತು ಸಂಖ್ಯೆ ಕ್ಷೀಣಿಸಲು ಪ್ರಾರಂಭಿಸುತ್ತದೆ. ಗರ್ಭಧಾರಣೆಗೆ ಪುರುಷರ ವೀರ್ಯದ ಗುಣಮಟ್ಟವೂ ಉತ್ತಮವಾಗಿರಬೇಕು.

---




ರಾಮಾಯಣ

## ದಶರಥನಿಗೆ ಶಾಪ ಬಂದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ವೃದ್ಧೆಯರಾದ ಪತಿವ್ರತಾಸ್ತ್ರೀಯರು ಅರಳು ಪುಷ್ಪಮಾಲಿಕೆಗಳನ್ನು ತೆಗೆದುಕೊಂಡು ಅಕ್ಷತೆ ಸುಗಂಧ ದ್ರವ್ಯಗಳಿಂದ ಸೇಸೆಯಿಕ್ಕಬೇಕೆಂದು ಬರುತ್ತಿದ್ದರು. ಕೆಲವರು ದಿವ್ಯ ಚಂದನಾದಿಗಳನ್ನು ಪವಿತ್ರವಾದ ಸುವರ್ಣಕಲಶಗಳಲ್ಲಿ ತಂದರು. ಹೀಗೆ ಅರಮನೆಯು ಅಲಂಕರಿಸಲ್ಪಟ್ಟು ಸರ್ವಲಕ್ಷಣ ಯುಕ್ತವಾಗಿ ಲಕ್ಷ್ಮೀನಿವಾಸಕ್ಕೆ ಆಸ್ಪದವಾಗಿತ್ತು. ಸೂರ್ಯೋದಯವಾಗುವವರೆಗೆ ಅತಿಸಂತೋಷದಿಂದಿದ್ದ ಆ ಜನಸಮೂಹಕ್ಕೆ ದಶರಥರಾಯನು ಓಲಗಕ್ಕೆ ಬರದಿರಲು ಮನಸ್ಸಿನಲ್ಲಿ ಶಂಕೆ ಹುಟ್ಟಿತು. ಆಗ ಆತನ ಓಲಗದ ಸ್ತ್ರೀಯರು ಶಯಾಗೃಹದ ಬಾಗಿಲಿಗೆ ಹೋಗಿ ಕಾಲೋಚಿತವನ್ನರಿತು ಆತನು ಏಳುವ ಹಾಗೆ ವಿನಯೋಕ್ತಿಗಳಿಂದ ಮೆಲ್ಲಗೆ ಎಬ್ಬಿಸಲು ಯತ್ನಿಸಿದರು. ಆತನು ಏಳದಿರಲು ನಿದ್ರಾಲಕ್ಷಣವನ್ನು ಬಲ್ಲವರು ಮೆಲ್ಲಗೆ ನಾಸಿಕವನ್ನು ಮುಟ್ಟಿನೋಡಿ ಉಸಿರಾಡದಿರಲು ಮನಸ್ಸಿನಲ್ಲಿ ಶಂಕೆಪಟ್ಟು ನದೀ ಪ್ರವಾಹವೇಗದಿಂದ ಚಲಿಸುವ ತೃಣಗಳಂತೆ ನಡುಗಲಾರಂಭಿಸಿದರು. ಕೌಸಲಾ ದೇವಿಯೂ ಸುಮಿತ್ರಾದೇವಿಯೂ ಪುತ್ರಶೋಕದಿಂದ ಅತ್ತು ಅತ್ತು ಸಾಕಾಗಿ ಮಲಗಿ ನಿದ್ರೆ ಮಾಡುತ್ತಿದ್ದರು. ಕೌಸಲ್ಮಾದೇವಿಯ ಮುಖವು ಕಾಂತಿಗುಂದಿತ್ತು. ಸುಮಿತ್ರಾದೇವಿಯ ಮುಖ ಕಾಂತಿ ತಗ್ಗಿತ್ತು. ದಶರಥರಾಯನ ಮುಖವು ವಿವರ್ಣವಾಗಿತ್ತು. ಕೌಸಲ್ಯಾದೇವಿ ಸುಮಿತ್ರಾದೇವಿಯರ ಕಣ್ಣುಗಳಲ್ಲಿ ಕಂಬನಿ ಸುರಿಯುತ್ತಿತ್ತು ! ಅಂತಃಪುರದ ಸ್ತ್ರೀಯರು ದಶರಥರಾಯನ ಮರಣವನ್ನು ತಿಳಿದು ಗೋಳಾಡತೊಡಗಿದರು.



ಕೌಸಲ್ಯಾದೇವಿ ಸುಮಿತ್ರಾದೇವಿಯರು ಆ ಕೋಲಾಹಲಧ್ವನಿಗಳನ್ನು ಕೇಳಿ ನಿದ್ದೆಯಿಂದೆಚ್ಚೆತ್ತು ಕಣ್ಣು ತೆರೆದು ನೋಡಿದರು. ಅದೇನು ಅದ್ಭುತ ವೆಂದು ದಶರಥರಾಯನನ್ನು ಮುಟ್ಟಿನೋಡಿ ಶರೀರತ್ಯಾಗ ಮಾಡಿದನೆಂದು ನಿಶ್ಚಯಿಸಿ, ಆಕಟಕಟಾ ! ಎಂದು ಹಂಬಲಿಸಿ ಭೂಮಿಯಮೇಲೆ ಬಿದ್ದು ಹೊರಳಾಡತೊಡಗಿದರು. ಶರೀರವೆಲ್ಲವೂ ಧೂಳುಮುಸುಕಿ ಅಂತರಿಕ್ಷಮಾರ್ಗದಿಂದ ಬಿದ್ದ ನಕ್ಷತ್ರಗಳಂತೆ ಅವರು ಕಾಂತಿಗುಂದಿದರು. ಅದನ್ನು ಕಂಡು ಕೈಕೇಯಿ ಮೊದಲಾದ ರಾಜಸ್ತ್ರೀಯರೆಲ್ಲರೂ ರೋದನಮಾಡುತ್ತ ಶೋಕಾಗ್ನಿಯಿಂದ ಚೈತನ್ಯ ಗುಂದಿದರು. ಈ ರೀತಿಯಲ್ಲಿ ರೋದನಮಾಡುತ್ತಿದ್ದ ಸ್ತ್ರೀಯರ ಕೋಲಾಹಲ ಧ್ವನಿಯಿಂದ ಆ ಅರಮನೆಯಲ್ಲಿ ಪ್ರತಿಧ್ವನಿಯು ಹುಟ್ಟಿ ಎಲ್ಲಿ ನೋಡಿದರೂ ದುಃಖಪಡುವ ಬಂಧುಜನರಿಂದ ಇಟ್ಟಣಿಸಿ ನೋಡುವುದಕ್ಕೆ ಅಶಕ್ಯವಾಗಿತ್ತು. ಅಂತಃಪುರಸ್ತ್ರೀಯರು ಒಬ್ಬರನ್ನೊಬ್ಬರು ತಬ್ಬಿ ಕೊಂಡು ಅನಾಥರಂತೆ ಉರಾಡನ ಮಾಡಿಕೊಳ್ಳುತ್ತಾ ಬಹಳವಾಗಿ ರೋದಿಸುತ್ತಿದ್ದರು.

ಮುಂದುವರಿಯುವುದು...


---

## ಸಂಧಿವಾತದ ಸಮಸ್ಯೆ ಇರುವವರು
# ಅನ್ನ ತಿನ್ನಬಹುದೇ?

ಕೆಲವೊಂದು ಆಹಾರಗಳ ಸೇವನೆಯು ಉರಿಯೂತವನ್ನು ಹೆಚ್ಚಿಸಿದರೆ ಇನ್ನೂ ಕೆಲವು ಪರಿಹಾರ ನೀಡಬಹುದು. ಸಂಧಿವಾತದಲ್ಲಿ ಅನ್ನವನ್ನು ತಿನ್ನಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆ ಜನರ ಮನಸ್ಸಿನಲ್ಲಿದೆ. ಅಕ್ಕಿ ನಮ್ಮ ಮುಖ್ಯ ಆಹಾರ ಹೆಚ್ಚಿನ ಮನೆಗಳಲ್ಲಿ ಅನ್ನವನ್ನು ಬಹುತೇಕ ಪ್ರತಿದಿನ ಬೇಯಿಸಿ ತಿನ್ನಲಾಗುತ್ತದೆ.

ಸಂಧಿವಾತವು ಕೀಲುಗಳ ಮೇಲೆ ಪರಿಣಾಮ ಬೀರುವ ಕಾಯಿಲೆಯಾಗಿದ್ದು, ಇದರಲ್ಲಿ ಊತ ಮತ್ತು ನೋವು ಇರುತ್ತದೆ. ಅಸ್ಥಿಸಂಧಿವಾತ, ಸಂಧಿವಾತ ಮತ್ತು ಗೌಟ್ ಹೀಗೆ ಸಂಧಿವಾತದಲ್ಲಿ ಹಲವು ವಿಧಗಳಿವೆ. ಒಬ್ಬ ವ್ಯಕ್ತಿಯು ಸಂಧಿವಾತದಿಂದ ಬಳಲುತ್ತಿರುವಾಗ, ಅವರ ಜೀವನಶೈಲಿಯು ಆ ಕಾಯಿಲೆಯ ಮೇಲೆ ಕೆಟ್ಟದಾಗಿ ಪರಿಣಾಮ ಬೀರುತ್ತದೆ. ಸಂಧಿವಾತವಿರುವ ರೋಗಿಗಳಲ್ಲಿ ನಡೆಯುವುದು, ಕೆಲಸ ಮಾಡುವುದು ಅಥವಾ ವಿಶ್ರಾಂತಿ ಪಡೆಯಲೂ ಕಷ್ಟವಾಗುತ್ತದೆ. ಅಂತಹ ರೋಗಿಗಳಿಗೆ ಆಹಾರದ ಪಾತ್ರವು ಬಹಳ ಮುಖ್ಯವಾಗುತ್ತದೆ.

**ಸಂಧಿವಾತ ಇರುವವರು ಅನ್ನವನ್ನು ತಿನ್ನಬಹುದೇ?:** ಸಂಧಿವಾತ ರೋಗಿಗಳು ಅನ್ನವನ್ನು ತಿನ್ನಬಹುದು, ಆದರೆ ಅಕ್ಕಿಯ ಪ್ರಕಾರಕ್ಕೆ ಗಮನ ಕೊಡಿ ಎಂದು ಪೌಷ್ಟಿಕತಜ್ಞರು ಹೇಳುತ್ತಾರೆ. ಸಂಧಿವಾತ ಇರುವವರು ಬಿಳಿ ಅಕ್ಕಿ ಅನ್ನವನ್ನು ವಿಶೇಷವಾಗಿ ತಪ್ಪಿಸಬೇಕು ಏಕೆಂದರೆ ಇದನ್ನು ಸಂಸ್ಕರಿಸಲಾಗುತ್ತದೆ ಮತ್ತು ಹೆಚ್ಚಿನ ಫೈಬರ್ ಮತ್ತು ಪೋಷಕಾಂಶಗಳನ್ನು ಅದರಿಂದ ತೆಗೆದುಹಾಕಲಾಗುತ್ತದೆ. ಬದಲಾಗಿ, ಕಂದು ಅಕ್ಕಿ, ಕೆಂಪು ಅಕ್ಕಿ ಮತ್ತು ಕಪ್ಪು ಅಕ್ಕಿಯಂತಹ ಆಯ್ಕೆಗಳಿಗೆ ಆದ್ಯತೆ ನೀಡಬೇಕು. ಇವು ಫೈಬರ್‌ನಲ್ಲಿ ಸಮೃದ್ಧವಾಗಿವೆ ಮಾತ್ರವಲ್ಲದೆ ಕೀಲು ಊತವನ್ನು ಕಡಿಮೆ ಮಾಡುವ ಉರಿಯೂತದ ಗುಣಲಕ್ಷಣಗಳನ್ನು ಸಹ ಹೊಂದಿವೆ.



**ಬ್ರೌನ್ ರೈಸ್ ಅನ್ನ ಸೇವಿಸುವುದರ ಪ್ರಯೋಜನಗಳು:** ಬಿಳಿ ಅಕ್ಕಿ ತಿನ್ನುವ ಬದಲು, ಕಂದು ಅಕ್ಕಿಯಂತಹ ಧಾನ್ಯಗಳನ್ನು ಸೇವಿಸಿ. ಧಾನ್ಯಗಳಲ್ಲಿ ನಾರು ಅಧಿಕವಾಗಿದ್ದು, ಇದು ಹೊಟ್ಟೆಯನ್ನು ದೀರ್ಘಕಾಲದವರೆಗೆ ತುಂಬಿರುವಂತೆ ಮಾಡುತ್ತದೆ ಮತ್ತು ಹಸಿವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ತೂಕವನ್ನು ನಿಯಂತ್ರಿಸಲು ಸಹಕಾರಿಯಾಗಿದೆ. ಇದರಿಂದಾಗಿ ಕೀಲುಗಳ ಮೇಲೆ ಯಾವುದೇ ಹೆಚ್ಚುವರಿ ಒತ್ತಡ ಬೀಳುವುದಿಲ್ಲ.

**ಬಿಳಿ ಅಕ್ಕಿ ಮತ್ತು ಕಂದು ಅಕ್ಕಿ:** ಬಿಳಿ ಅಕ್ಕಿಯಲ್ಲಿ ನಾರು ತುಂಬಾ ಕಡಿಮೆ ಮತ್ತು ತ್ವರಿತವಾಗಿ ಜೀರ್ಣವಾಗುತ್ತದೆ, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ವೇಗವಾಗಿ ಹೆಚ್ಚಿಸುತ್ತದೆ. ಇದು ಉರಿಯೂತವನ್ನು ಸಹ ಹೆಚ್ಚಿಸುತ್ತದೆ. ಮತ್ತೊಂದೆಡೆ, ಬ್ರೌನ್ ರೈಸ್ ಕಡಿಮೆ ಗ್ಲೈಸೆಮಿಕ್ ಸೂಚಿಯನ್ನು ಹೊಂದಿದ್ದು, ಇದು ನಿಧಾನವಾಗಿ ಜೀರ್ಣವಾಗುತ್ತದೆ ಮತ್ತು ದೇಹದಲ್ಲಿ ಸಕ್ಕರೆಯನ್ನು ನಿಧಾನವಾಗಿ ಬಿಡುಗಡೆ ಮಾಡುತ್ತದೆ. ಇದು ಉರಿಯೂತದ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ.

---

# ಕೋವಿಡ್ ರೋಗಿಗಳಲ್ಲಿ ಈ ಲಕ್ಷಣಗಳು ಕಂಡು ಬಂದಿಲ್ಲವಂತೆ!

ಇದ್ದಕ್ಕಿದಂತೆ ಆಹಾರ ಪದಾರ್ಥಗಳ ವಾಸನೆ ಮತ್ತು ರುಚಿ ಗ್ರಹಿಸಲು ಸಾಧ್ಯವಾಗದೇ ಇರುವುದು ಕೊರೋನಾ ಕಾಯಿಲೆಯ ಲಕ್ಷಣಗಳಲ್ಲಿ ಒಂದು ಎನ್ನುವುದು ನಮಗೆಲ್ಲಾ ಗೊತ್ತೇ ಇದೆ! ಈ ಬಗ್ಗೆ ತಜ್ಞರು ಹೇಳುವ ಪ್ರಕಾರ ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ರೋಗಿಗಳಲ್ಲಿ ಈ ಲಕ್ಷಣಗಳು ಕಂಡುಬಂದಿಲ್ಲವಂತೆ! ಹಾಗಾದ್ರೆ, ಇದರ ಹಿಂದಿನ ಕಾರಣಗಳೇನು?

ಕೊರೋನಾ ಪ್ರಕರಣಗಳ ಸಂಖ್ಯೆ ದಿನಾ ಹೋದ ಹಾಗೆ ಜಾಸ್ತಿ ಆಗುತ್ತಿರುವುದು ನಿಜಕ್ಕೂ ಆತಂಕ ಮೂಡಿಸುತ್ತಿದೆ! ಕೇವಲ ಭಾರತ ಮಾತ್ರ ವಲ್ಲದೆ ಪ್ರಪಂಚದಾದ್ಯಂತ ಈ ಸೋಂಕು ವೇಗವಾಗಿ ಹರಡುತ್ತಿರುವುದು ನಿಜಕ್ಕೂ ಆತಂಕ ಮೂಡಿಸುತ್ತಿದೆ. ಸರಿಸುಮಾರು ಐದಾರು ವರ್ಷಗಳ ಹಿಂದೆ ಈ ದರಿದ್ರ ಸೊಂಕು ಮೊದಲ ಬಾರಿಗೆ ಜಗತ್ತನ್ನು ಆವರಿಸಿದಾಗ, ಅದರ ಹಲವಾರು ರೋಗ ಲಕ್ಷಣಗಳು ಬಹಿರಂಗಗೊಂಡವು. ಆದರೆ ಹೆಚ್ಚಿನವರು ಇವೆಲ್ಲಾ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಎಂದು ಕಡೆಗಣಿಸಿದ್ದರಿಂದ ನಮ್ಮಲ್ಲಿ ಹೆಚ್ಚಿನವರು ತಮ್ಮ ಪ್ರಾಣವನ್ನು ಕಳೆದುಕೊಂಡರು.

ಮುಖ್ಯವಾಗಿ ಮೊದಲಿಗೆ ಸಣ್ಣದಾಗಿ ಜ್ವರ, ಶೀತ ಕೆಮ್ಮು ಗಂಟಲು ಕೆರೆತ ಉಸಿರಾಟದಲ್ಲಿ ಸಮಸ್ಯೆ, ಇದ್ದಕ್ಕಿದಂತೆ ಮೈಕೈ ನೋವು ಕಾಣಿಸಿಕೊಳ್ಳುವುದು, ದೈಹಿಕ ಸುಸ್ತು ಮತ್ತು ಆಯಾಸ, ಹಾಗೂ ಎಲ್ಲಕ್ಕಿಂತಲೂ ಮುಖ್ಯವಾಗಿ ಸೇವನೆ ಮಾಡುವ ಆಹಾರಪದಾರ್ಥಗಳ ವಾಸನೆ ಮತ್ತು ರುಚಿ ಗ್ರಹಿಸಲು ಸಾಧ್ಯವಾಗದೇ ಇರುವುದು ಇವೆಲ್ಲಾ ಈ ಸೊಂಕಿನ ಪ್ರಮುಖ ಲಕ್ಷಣಗಳಲ್ಲಿ ಒಂದು ಎನ್ನುತ್ತಾರೆ ತಜ್ಞರು!

**ನಿಜಕ್ಕೂ ಆತಂಕ ಮೂಡಿಸುತ್ತಿದೆ**

**ಆಹಾರಪದಾರ್ಥಗಳ ವಾಸನೆ ಮತ್ತು ರುಚಿ ಗ್ರಹಿಸಲು ಸಾಧ್ಯವಾಗದೇ ಇರುವುದು:** ನೋಡಿ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ, ಕೊರೋನಾ ಕಾಣಿಸಿಕೊಂಡ ವ್ಯಕ್ತಿಯಲ್ಲಿ ಇದ್ದಕ್ಕಿದಂತೆ ಕಾಣಿಸಿಕೊಳ್ಳುವ ಸಮಸ್ಯೆಗಳು ಏನೆಂದರೆ ಸೇವನೆ ಮಾಡುವ ಆಹಾರಪದಾರ್ಥಗಳ ವಾಸನೆ ಮತ್ತು ರುಚಿ ಗ್ರಹಿಸಲು ಸಾಧ್ಯವಾಗದೇ ಇರುವುದು! ಆದರೆ ಈ ಬಗ್ಗೆ ಆರೋಗ್ಯ ತಜ್ಞರು ಹಾಗೂ ವಿಜ್ಞಾನಿಗಳು ಹೇಳುವ ಪ್ರಕಾರ, ಹೊಸ ಬಗೆಯ ಕೊರೋನಾದ ರೂಪಾಂತರದಲ್ಲಿ ಈ ಸಮಸ್ಯೆ ತುಂಬಾನೇ ಕಡಿಮೆಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ.

**ಈ ಬಗ್ಗೆ ವೈದ್ಯರು ಏನು ಹೇಳುತ್ತಾರೆ?:** ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಡಾ. ಜುಗಲ್ ಕಿಶೋರ್ ಅವರು ಹೇಳುವ ಪ್ರಕಾರ, ಆಹಾರಪದಾರ್ಥಗಳ ವಾಸನೆ ಮತ್ತು ರುಚಿ ಗ್ರಹಿಸಲು ಸಾಧ್ಯ ವಾಗದೇ ಇರುವ ಸಮಸ್ಯೆ 2020ರಲ್ಲಿ ಕೂಡ ಕೋವಿಡ್ ಕಾಣಿಸಿಕೊಂಡವರಲ್ಲಿ ಕಂಡುಬಂದಿತ್ತು! ಆದರೆ ಇತ್ತೀಚೆಗೆ ಅಂದರೆ ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ರೋಗಿಗಳಲ್ಲಿ ಈ ಲಕ್ಷಣಗಳು ಕಂಡುಬಂದಿಲ್ಲ.

ಇನ್ನು ಕೊರೋನಾ ವೈರಸ್‌ನ ಆರಂಭಿಕ ರೂಪಾಂತರಗಳು (ವುಹಾನ್ ತಳಿ ಮತ್ತು ಡೆಲ್ಟಾದಂತಹವು) ಮೊದಲು ನಮ್ಮ ದೇಹದ ಮೂಗು ಮತ್ತು ಗಂಟಲಿನ ಜೀವಕೋಶಗಳ ಮೇಲೆ ಪರಿಣಾಮ ಬೀರಿದವು.ಈ ವೈರಸ್ ಮೂಗಿನ ಒಳಗಿರುವ ' ವಾಸನೆಯ ಗ್ರಾಹಕಗಳನ್ನು ' ಹಾನಿಗೊಳಿಸಿತು, ಇದರಿಂದಾಗಿ ರೋಗಿಗಳಿಗೆ ಯಾವುದೇ ಆಹಾರಪದಾರ್ಥಗಳ ವಾಸನೆಯನ್ನು ಕೂಡ ಗ್ರಹಿಸಲು ಸಾಧ್ಯವಾಗದಿರುವುದು. ಅದೇ ರೀತಿ, ರುಚಿ ನೋಡುವ ಸಾಮರ್ಥ್ಯವೂ ಕಡಿಮೆಯಾಯಿತು, ಏಕೆಂದರೆ ಈ ವೈರಸ್ ಮೆದುಳು ಮತ್ತು ನರಮಂಡಲದ ಮೇಲೂ ಪರಿಣಾಮ ಬೀರಿತು.



**ಒಮಿಕ್ರಾನ್ ರೂಪಾಂತರ :** ಒಮಿಕ್ರಾನ್ ರೂಪಾಂತರ ಬಂದಾಗ, ವೈರಸ್‌ನ ನಡವಳಿಕೆಯಲ್ಲಿ ದೊಡ್ಡ ಬದಲಾವಣೆ ಕಂಡುಬಂದಿದೆ ಎಂದು ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಡಾ. ಜುಗಲ್ ಕಿಶೋರ್ ಹೇಳುತ್ತಾರೆ. ಮೊದಲಿಗೆ ದಕ್ಷಿಣ ಆಫ್ರಿಕಾದಲ್ಲಿ ಕಾಣಿಸಿಕೊಂಡ ಈ ಹೊಸ ರೂಪಾಂತರವನ್ನು 'ಒಮಿಕ್ರಾನ್' ಎಂದು ಹೆಸರಿಸಲಾಗಿತ್ತು. ಈ ವೈರಸ್ ನಲ್ಲಿಯೂ ಕೂಡ ರೋಗಲಕ್ಷಣಗಳು ಒಂದೇ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಬಗ್ಗೆ ತಜ್ಞರು ಹೇಳುವ ಪ್ರಕಾರ ತೀವ್ರ ರೀತಿಯ ಸುಸ್ತು ಬಳಲಿಕೆ, ಆಯಾಸ ಸ್ನಾಯುಗಳಲ್ಲಿ ನೋವು, ಗಂಟಲಿನಲ್ಲಿ ಕಿರಿಕಿರಿ ಮತ್ತು ಒಣ ಕೆಮ್ಮಿನ ಸಮಸ್ಯೆಯು ಕಂಡುಬರುವುದು. ಇನ್ನೂ ಕೆಲವರಲ್ಲಿ ತೀವ್ರ ಸ್ವರೂಪದ ಜ್ವರ ಕೂಡ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

ಇನ್ನು ಈ ರೂಪಾಂತರದ ಬಗ್ಗೆ ವಿಜ್ಞಾನಿಗಳು ಹೇಳುವ ಪ್ರಕಾರ, ಈ ವೈರಸ್ ಗಂಟಲು ಮತ್ತು ಮೂಗಿನಲ್ಲಿ ಕಡಿಮೆ ಸಕ್ರಿಯವಾಗಿದೆ ಮತ್ತು ಮೇಲ್ಭಾಗದ ಶ್ವಾಸಕೋಶದ ಪ್ರದೇಶದಲ್ಲಿ ಹೆಚ್ಚು ಸಕ್ರಿಯವಾಗಿದೆ ಎಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ.

**ಲಸಿಕೆ ಪಡೆದವರಲ್ಲಿ:** ಲಸಿಕೆ ಪಡೆದ ಜನರ ದೇಹದ ರೋಗನಿರೋಧಕ ಶಕ್ತಿ ಬಲಗೊಂಡಿದೆ. ಇದರಿಂದಾಗಿ, ವೈರಸ್ ದೇಹದಲ್ಲಿ ಹೆಚ್ಚು ಹರಡಲು ಸಾಧ್ಯವಾಗುವುದಿಲ್ಲ ಮತ್ತು ತೀವ್ರ ಲಕ್ಷಣಗಳು ಕಡಿಮೆಯಾಗುತ್ತವೆ. ಇದು ರುಚಿ ಮತ್ತು ವಾಸನೆಯ ಮೇಲೆ ಪರಿಣಾಮ ಬೀರುವ ಅವಕಾಶವನ್ನು ನೀಡುವುದಿಲ್ಲ ಎನ್ನುತ್ತಾರೆ ತಜ್ಞರು!

**ಸಂಶೋಧನೆಯಲ್ಲಿ ಹೇಳಿರುವ ಪ್ರಕಾರ :** ಇತ್ತೀಚೆಗೆ ಅಮೇರಿಕ ಮತ್ತು ಯುರೋಪ್‌ನಲ್ಲಿ ನಡೆಸಿದ ಅಧ್ಯಯನಗಳು, ಕೋವಿಡ್ ಸೋಂಕಿತ ರೋಗಿಗಳಲ್ಲಿ 90% ಕ್ಕಿಂತ ಹೆಚ್ಚು ಜನರು ರುಚಿ ಅಥವಾ ವಾಸನೆ ಗ್ರಹಿಸುವ ಸಮಸ್ಯೆಯನ್ನು ಎದುರಿಸುತ್ತಿಲ್ಲ ಎಂದು ತಮ್ಮ ವರದಿಯಲ್ಲಿ ತಿಳಿಸಿದೆ. ಹಿಂದಿನದಕ್ಕೆ ಹೋಲಿಸಿದರೆ ಈ ಸಂಖ್ಯೆ ತುಂಬಾ ಕಡಿಮೆಯಾಗಿದೆ ಎಂದೂ ಕೂಡ ತಮ್ಮ ವರದಿಯಲ್ಲಿ ತಿಳಿಸಿದೆ. ಇದರರ್ಥ ವೈರಸ್‌ನ ಬಲ ಕಡಿಮೆಯಾಗಿಲ್ಲದಿದ್ದರೂ, ಅದರ ವಿಧಾನವು ಬದಲಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ.

• ಜನನಿಬಿಡ ರಸ್ತೆಗಳಲ್ಲೇ ಒಂದು ಸುತ್ತು ಹಾಕಿ ಬಂದರೆ ಸಾಕು, ತಗ್ಗು–ಗುಂಡಿಗಳದ್ದೇ ದರ್ಶನವಾಗುತ್ತಿದೆ

# ರಸ್ತೆಗಳ ಸ್ಥಿತಿ ಅಧೋಗತಿ: ವಾಹನ ಸವಾರರು ಸರ್ಕಸ್, ಸಂಚಾರ ದುಸ್ತರ


☛ಉದಯವಾಹಿನಿ ಚಿತ್ರ


☛ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಳಗಾವಿ

ಈ ಬಾರಿ ಮುಂಗಾರು ಹಂಗಾಮಿನ ಪೂರ್ವದಲ್ಲೇ ವರುಣ ಅಬ್ಬರಿಸುತ್ತಿದ್ದಾನೆ. ಈ ಮಳೆಗೇ ನಗರದ ಹಲವು ರಸ್ತೆಗಳು ಅಧೋಗತಿಗೆ ತಲುಪಿದ್ದು, ವಾಹನ ಸವಾರರು ಸರ್ಕಸ್ ಮಾಡುತ್ತ ಸಂಚರಿಸುವಂತಾಗಿದೆ.

ನಗರದ ಕೇಂದ್ರ ಭಾಗದಲ್ಲೇ ಇರುವ, ಜನ ನಿಬಿಡ ರಸ್ತೆಗಳಲ್ಲೇ ಒಂದು ಸುತ್ತು ಹಾಕಿ ಬಂದರೆ ಸಾಕು. ತಗ್ಗು–ಗುಂಡಿಗಳದ್ದೇ ದರ್ಶನವಾಗುತ್ತಿದೆ. 'ಆರಂಭದಲ್ಲೇ ಪರಿಸ್ಥಿತಿ ಹೀಗಾದರೆ, ಮಳೆಗಾಲ ಮುಗಿಯುವವರೆಗೆ ನಮ್ಮ ಕತೆ ಏನು' ಎಂದು ಜನರು ಆತಂಕಕ್ಕೆ ಒಳಗಾಗಿದ್ದಾರೆ.

2024ರ ಡಿಸೆಂಬರ್‌ನಲ್ಲಿ ಸುವರ್ಣ ವಿಧಾನ ಸೌಧದಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆದಾಗ, ಮುಖ್ಯಮಂತ್ರಿ, ಸಚಿವರು ಮತ್ತು ಶಾಸಕರು ಸಂಚರಿಸುವ ಮುಖ್ಯರಸ್ತೆಗಳ ಸುಧಾರಣೆ ಮಾಡಲಾಗಿತ್ತು. ಅವು ತಕ್ಕಮಟ್ಟಿಗೆ ಉತ್ತಮ ಸ್ಥಿತಿಯಲ್ಲಿವೆ. ಆದರೆ, ನಗರದ ಒಳರಸ್ತೆಗಳ ಸ್ಥಿತಿ ಹೇಳತೀರದಾಗಿದೆ.

### ಎಲ್ಲೆಂದರಲ್ಲಿ ಅಗೆತ

**ಕುಡಿಯುವ ನೀರಿನ ಕಾಮಗಾರಿಯ ಪೈಪ್‌ಲೈನ್‌ಗಾಗಿ ಎಲ್ ಆ್ಯಂಡ್ ಟಿ ಕಂಪನಿಯವರು ನಗರದಲ್ಲಿ ಎಲ್ಲೆಂದರಲ್ಲಿ ಅಗೆದಿದ್ದಾರೆ. ಆದರೆ ಕಾಮಗಾರಿ ಮುಗಿದ ನಂತರ ಅಗೆದ ಸ್ಥಳಗಳನ್ನು ಸರಿಯಾಗಿ ಮುಚ್ಚುತ್ತಿಲ್ಲ. ಇದರಿಂದಲೂ ರಸ್ತೆ ಹಾಳಾಗುತ್ತಿವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.**

**ನಗರದಲ್ಲಿ ಹಾಳಾಗಿದ್ದ ಹಲವು ರಸ್ತೆಗಳನ್ನು ಮೇ ಎರಡನೇ ವಾರದವರೆಗೆ ದುರಸ್ತಿ ಮಾಡಿದ್ದೇವೆ. ಮಳೆಗಾಲದಲ್ಲಿ ರಸ್ತೆ ನಿರ್ಮಾಣ ಕಷ್ಟ. ಹಾಗಾಗಿ ಗುಂಡಿಗಳನ್ನು ಮುಚ್ಚಿ ಸವಾರರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸುತ್ತೇನೆ. ಎಲ್ ಆ್ಯಂಡ್ ಟಿ ಕಂಪನಿಯವರು ಅಗೆದು ಸರಿಯಾಗಿ ಮುಚ್ಚದ ರಸ್ತೆಗಳ ಬಗ್ಗೆಯೂ ವರದಿ ಪಡೆಯುತ್ತೇನೆ -ಬಿ.ಶುಭ, ಆಯುಕ್ತ ಮಹಾನಗರ ಪಾಲಿಕೆ**

**ಹಳೇ ಪಿ.ಬಿ ರಸ್ತೆಯಲ್ಲಿ ಗುಂಡಿಗಳೇ ಹೆಚ್ಚಿವೆ. ಇದರಿಂದ ಸವಾರರ ಜತೆಗೆ ಈ ಮಾರ್ಗದಲ್ಲಿನ ಉದ್ಯಮಿಗಳು ಮತ್ತು ವರ್ತಕರಿಗೂ ಸಮಸ್ಯೆಯಾಗುತ್ತಿದೆ ಸುರೇಂದ್ರ ಕ್ವಾಟರಾ ಉದ್ಯಮಿ ಏಳು ವರ್ಷಗಳಿಂದ ಹಳೇ ಪಿ.ಬಿ ರಸ್ತೆಯ ದುರವಸ್ಥೆ ಸರಿಯಾಗಿಲ್ಲ. ರಸ್ತೆ ಕೆಟ್ಟಿದ್ದಕ್ಕೆ ಹೆಚ್ಚಿನ ಜನರು ಈ ರಸ್ತೆಯಲ್ಲಿ ಸಾಗುತ್ತಿಲ್ಲ. ಇದರಿಂದ ವ್ಯವಹಾರಕ್ಕೂ ಹೊಡೆತ ಬಿದ್ದಿದೆ -ದೇವಾನಂದರಾವ್ ಸ್ಥಳೀಯ ಉದ್ಯಮಿ**

**ಜೋರು ಮಳೆ ಸುರಿದರೆ ಹಳೇ ಪಿ.ಬಿ ರಸ್ತೆಯ ಗುಂಡಿಗಳಲ್ಲಿ ಅಪಾರ ಪ್ರಮಾಣದಲ್ಲಿ ನೀರು ನಿಲ್ಲುತ್ತಿದೆ. ಸಂಚರಿಸುವಾಗ ರಸ್ತೆ ಕಾಣಿಸದೆ ಸವಾರರು ಬಿದ್ದು ಪೆಟ್ಟು ಮಾಡಿಕೊಳ್ಳುವುದು ಸಾಮಾನ್ಯವಾಗಿದೆ ಇರ್ಫಾನ್ ಶೇಖ್ ಸವಾರ ಸದಾಶಿವ ನಗರ ಮುಖ್ಯರಸ್ತೆ ಸಂಪೂರ್ಣ ಹದಗೆಟ್ಟಿದೆ. -ವಿಲಾಸ ನಿಲಜಕರ ಸವಾರ**

ಪಾಲಿಕೆ ನಿರ್ಲಕ್ಷ್ಯ | ಪಾಲಿಕೆ ಸಿದ್ಧತೆ ಮಾಡಿಕೊಳ್ಳಬೇಕಿತ್ತು ಅಲ್ಲವೆ? | ಅಧೋಗತಿಗೆ ನಗರದ ಹಲವು ರಸ್ತೆಗಳು | ಆತಂಕದಲ್ಲಿ ಜನರು

ಅದರಲ್ಲೂ ಇಲ್ಲಿನ ಹಳೇ ಪಿ.ಬಿ ರಸ್ತೆಯ ಮೇಲ್ಸೇತುವೆಯಿಂದ ಜಿನ್ನಾ ಚೌಕ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ತೀರಾ ಹದಗೆಟ್ಟಿದ್ದು, ವಾಹನಗಳ ಚಾಲಕರು ಮತ್ತು ಬೈಕ್ ಸವಾರರು ಸಂಚಾರಕ್ಕೆ ಹರಸಾಹಸ ಪಡುವಂತಾಗಿದೆ. ಇಲ್ಲಿ ಸಂಚರಿಸುವಾಗ ಬಿದ್ದು ಏಟು ಮಾಡಿಕೊಂಡವರಿಗೆ ಲೆಕ್ಕವೇ ಇಲ್ಲ.

ಇನ್ನು ಫುಲಭಾಗ್ ಲ್ಲಿ, ಸದಾಶಿವ ನಗರ, ನೆಹರೂ ನಗರ, ರಾಮನಗರ, ಹನುಮಾನ ನಗರ, ಕಾಕತಿವೇಸ್ ರಸ್ತೆ ಮತ್ತಿತರ ಕಡೆ ಇದೇ ಪರಿಸ್ಥಿತಿ ಇದೆ.

**ಪಾಲಿಕೆ ನಿರ್ಲಕ್ಷ್ಯ:** ಮಳೆಗಾಲದ ನಿರ್ವಹಣೆಗೆ ಮಹಾನಗರ ಪಾಲಿಕೆ ಮೊದಲೇ ಸಿದ್ಧತೆ ಮಾಡಿಕೊಳ್ಳಬೇಕು. ಸಂಚಾರಕ್ಕೆ ತೊಡಕಾದ ರಸ್ತೆಗಳ ದುರಸ್ತಿ ಮಾಡಬೇಕು. ಅವರು ನಿರ್ಲಕ್ಷ್ಯ ವಹಿಸಿದ್ದರಿಂದ ವಾಹನ ಸವಾರರೀಗ ಪರದಾಡುವ ಸ್ಥಿತಿ ಬಂದಿದೆ' ಎಂದು ಸಾರ್ವಜನಿಕರು ದೂರಿದ್ದಾರೆ.

ಒಂದೆಡೆ ರಸ್ತೆ ಕೆಟ್ಟಿವೆ. ಮತ್ತೊಂದೆಡೆ ವಿವಿಧ ಮಾರ್ಗಗಳ ರಸ್ತೆಗಳಲ್ಲಿ ನಿಲ್ಲುತ್ತಿರುವ ಮಳೆನೀರು ಹರಿದುಹೋಗುತ್ತಿಲ್ಲ.

ಇದರಿಂದ ಸಂಚಾರಕ್ಕೆ ತೊಂದರೆಯಾಗುವ ಜತೆಗೆ, ಆ ನೀರಿನಲ್ಲೇ ಸೊಳ್ಳೆಗಳು ಉತ್ಪತ್ತಿಯಾಗಿ ಅನಾರೋಗ್ಯಕರ ವಾತಾವರಣ ಸೃಷ್ಟಿಯಾಗುತ್ತಿದೆ' ಎಂಬ ಆರೋಪ ಕೇಳಿಬರುತ್ತಿದೆ.

## ಸಿದ್ದರಾಮಯ್ಯ ನಂತರ ನಾನೇ 2ನೇ ಜನಪ್ರಿಯ ನಾಯಕ: ಯತ್ನಾಳ್

• ಉದಯವಾಹಿನಿ ವಿಜಯಪುರ

ಆದಷ್ಟು ಬೇಗನೆ ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ಮಾಡಬಹುದು. ಪಾಕಿಸ್ತಾನ ಯುದ್ಧ ಹಿನ್ನೆಲೆಯಲ್ಲಿ ವರಿಷ್ಠರು ಈ ಸಂಬಂಧ ಗಮನಹರಿಸಲು ಸಾಧ್ಯವಾಗಿಲ್ಲ. ಬೇಗನೆ ರಾಜ್ಯ ಬಿಜೆಪಿ ಅಧ್ಯಕ್ಷರು ಬದಲಾವಣೆ ಮಾಡಬಹುದು ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ಬದಲಾವಣೆ ಆದಷ್ಟು ಬೇಗನೆ ಆಗುವ ನಿರೀಕ್ಷೆ ಇದೆ ಎಂದರು. ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಭೇಟಿ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ವಿಜಯೇಂದ್ರ ಸುಳ್ಳು ಸರ್ವೇ ಮಾಡಿಸಿದ್ದಾನೆ. ಚುನಾವಣೆ ನಡೆದರೆ 160 ಸ್ಥಾನ ಬರುತ್ತವೆ ಎಂಬುದು ಸುಳ್ಳು. ಅವರಪ್ಪ ಜನಪ್ರಿಯ ಇದ್ದಾಗಲೇ ಅಷ್ಟು ಸ್ಥಾನ ಬಂದಿಲ್ಲ. ಜಾತಿ ಸಮೀಕರಣ ಆಗಿಲ್ಲ.

ವಿರೋಧ ಪಕ್ಷವಾಗಿ ಬಿಜೆಪಿ ಪ್ರಬಲವಾಗಿ ಕೆಲಸ ಮಾಡಿಲ್ಲ. ಹಿಂದೂಗಳ ಕೊಲೆ ಆದರೆ ಮಾತನಾಡಲ್ಲ. ಹಿಂದೂಗಳ ರಕ್ಷಣೆ ಇಲ್ಲ. ಭ್ರಷ್ಟಾಚಾರ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಲ್ಲ. ಹೀಗಾಗಿ ಕೇಂದ್ರ ಹೈಕಮಾಂಡ್ ಬೇಸರ ವ್ಯಕ್ತಪಡಿಸಿದೆ. ರಾಜ್ಯ ಉಸ್ತುವಾರಿ ಮುಕ್ತವಾಗಿ ಚರ್ಚೆ ಮಾಡಬೇಕು ಎಂದರು. ಕೆಲ ವಿಜಯೇಂದ್ರ ಚೇಲಾಗಳು 224 ಸ್ಥಾನದಲ್ಲಿ 245 ಬರುವ ಸಂಭವವಿದೆ ಎಂದು ಹೊಗಳುತ್ತಾರೆ.

**ರಾಜ್ಯ ಉಸ್ತುವಾರಿಗಳ ಒನ್ ಟು ಒನ್ ಮಾತನಾಡಬೇಕು. ಗುಂಪಿನಲ್ಲಿ ಕೇಳಿದರೆ ಯಾರೂ ಮಾತನಾಡಲ್ಲ. ಹಾಲಿ, ಮಾಜಿ ಶಾಸಕರ, ಪಕ್ಷ ಕಟ್ಟಿದವರನ್ನು, ಲೋಕಸಭಾ ಸದಸ್ಯರನ್ನು, ಪರಾಜಿತ ಅಭ್ಯರ್ಥಿಗಳನ್ನು ಮಾತನಾಡಿಸಲಿ ಎಂದು ಯತ್ನಾಳ್ ಸಲಹೆ ನೀಡಿದರು -ಯತ್ನಾಳ್ ಶಾಸಕ**



ಬಿಜೆಪಿ ನಿಷ್ಠರು ಪಕ್ಷದಲ್ಲಿದ್ದಾರೆ. ನನ್ನ ಉಚ್ಚಾಟನೆ ಮಾಡಿದ್ದಾರೆ. ಅವರ ಜೊತೆಗೆ ಗುರುತಿಸಿಕೊಂಡರೆ ಅವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ನಾನೇ ಅವರಿಂದ ಅಂತರ ಕಾಯ್ದುಕೊಂಡಿದ್ದೇನೆ. ಎಲ್ಲರೂ ನನ್ನ ಸಂಪರ್ಕದಲ್ಲಿದ್ದಾರೆ. ನಾನು ರಾಜ್ಯದ ಪ್ರವಾಸ ಮಾಡುತ್ತಿದ್ದೇನೆ. ನನಗೆ ಜನರ ಬೆಂಬಲ ಅಪಾರವಾಗಿ ಸಿಗುತ್ತಿದೆ. ಯತ್ನಾಳ ಸಿಎಂ ಆದರೆ ಅಭಿವೃದ್ಧಿಯಾಗುತ್ತದೆ. ನೆಮ್ಮದಿ ಜೀವನ ಮಾಡಬಹುದು ಎಂಬ ವಾತಾವರಣ ಮನೆ ಮಾಡಿದೆ ಎಂದರು.

ಬಿಜೆಪಿಯಿಂದ ಉಚ್ಚಾಟನೆಯಾದ ಬಳಿಕ ನನ್ನ ಜನಪ್ರಿಯತೆ ಉತ್ತುಂಗಕ್ಕೆ ಏರಿದೆ. ಸಿದ್ದರಾಮಯ್ಯ ನಂತರ ನಾನೇ ಎರಡನೇ ಜನಪ್ರಿಯ ನಾಯಕ. ಈ ಕುರಿತು ಗುಪ್ತಚರ ವರದಿ ಸಿದ್ದರಾಮಯ್ಯ ಬಳಿಯೇ ಇದೆ. ಬಿಜೆಪಿ ತತ್ವಸಿದ್ಧಾಂತ ಬಿಡಲ್ಲಾ ಎಂದು ತಿಳಿಸಿದರು.

## ಅಧಿಕಾರಿಗಳ ಕರ್ತವ್ಯನಿಷ್ಟೆ ಉತ್ತಮ ಸೇವೆಗೆ ರಹದಾರಿ

• ಉದಯವಾಹಿನಿ ಪುತ್ತೂರು

ಕಾರ್ಯಾಂಗ ಕರ್ತವ್ಯನಿಷ್ಟೆಯಿಂದ ವರ್ತಿಸಿ ಶಾಸಕಾಂಗದ ಜತೆಗೆ ಕೈ ಜೋಡಿಸಿದರೆ ಜನರಿಗೆ ಯಾವುದೇ ಸಮಸ್ಯೆ ಇಲ್ಲದೆ ಉತ್ತಮ ಸೇವೆ ದೊರಕುತ್ತದೆ. ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ತಹಶೀಲ್ದಾರ್ ಮತ್ತು ಸಿಬ್ಬಂದಿಗಳು ಉತ್ತಮ ಸಹಕಾರ ನೀಡುತ್ತಿದ್ದು, ಇದರಿಂದಾಗಿ 3ಸಾವಿರ ಕಡತಗಳನ್ನು 7 ತಿಂಗಳ ಅವಧಿಯೊಳಗಡೆ ವಿಲೇವಾರಿ ಮಾಡಲಾಗಿದೆ.

ಬಗರ್ ಹುಕುಂ ಅರ್ಜಿಗೆ ಸಂಬಂಧಿಸಿದಂತೆ 28 ಹಕ್ಕು ಪತ್ರಗಳನ್ನು ವಿತರಣೆ ಮಾಡಲಾಗಿದೆ. ಹಕ್ಕು ಪತ್ರ ವಿತರಣೆಯಲ್ಲಿ ಪುತ್ತೂರು ತಾಲ್ಲೂಕು ರಾಜ್ಯದಲ್ಲಿಯೇ ಪ್ರಥಮವಾಗಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು. ಅವರು ಪುತ್ತೂರಿನ ಪುರಭವನದಲ್ಲಿ ನಡೆದ ಬಗರ್ ಹುಕುಂ ಹಕ್ಕುಪತ್ರ ವಿತರಣೆ ಹಾಗೂ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ ತಹಶೀಲ್ದಾರ್ ಪುರಂದರ ಹೆಗ್ಡೆ ಅವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಕೆಲಸದಲ್ಲಿ ಮಾನವೀಯತೆ ಹಾಗೂ ಧರ್ಮವನ್ನು ಪಾಲಿಸಬೇಕಾಗಿದೆ. ತಹಸೀಲ್ದಾರ್ ಪುರಂದರ ಅವರು ಬಡವರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಕಳೆದ 2 ವರ್ಷಗಳ ಹಿಂದೆ 32ಸಾವಿರ ಕಡತ ಬಾಕಿ ಇದ್ದು,


☛ಉದಯವಾಹಿನಿ ಚಿತ್ರ

ಈ ಪೈಕಿ 3ಸಾವಿರ ಕಡತವನ್ನು 7ತಿಂಗಳಲ್ಲಿ ಮಾಡಲಾಗಿದೆ. ಇದಕ್ಕಾಗಿ 15 ಬೈಠಕ್‌ಗಳನ್ನು ಮಾಡಲಾಗಿದೆ. ಈ ಹಿಂದೆ ಸುಮಾರು 15 ಸಾವಿರ ಕಡತಗಳನ್ನು ಕುಮ್ಕಿಯ ನೆಪವನ್ನು ಒಡ್ಡಿ ತಿರಸ್ಕರಿಸಿ ಫಲಾನುಭವಿಗಳಿಗೆ ಮೋಸ ಮಾಡಿ ಮುಚ್ಚಿ ಹಾಕಿದ್ದಾರೆ. ಕುಮ್ಕಿ ಹಕ್ಕು ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಇದೆ ಎಂಬ ಕಾರಣದಿಂದ ತುಂಬಾ ಜನರಿಗೆ ತೊಂದರೆಯಾಗಿದೆ. ಈ ಬಗ್ಗೆ ಪುನರ್‌ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಲಾಗುವುದು ಹಾಗೂ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು. ರೂಪ ರೇಖಾ ಆಳ್ವ, ರಾಮಣ್ಣ ಪಿಲಿಂಜ ಉಪಸ್ಥಿತರಿದ್ದರು. ಉಪ್ಪಿನಂಗಡಿ ಕಂದಾಯ ನಿರೀಕ್ಷಕ ಚಂದ್ರ ನಾಯ್ಕ ಸ್ವಾಗತಿಸಿದರು.

## ಬಿತ್ತನೆ ಬೀಜ, ಗೊಬ್ಬರ ಸಕಾಲದಲ್ಲಿ ವಿತರಣೆ ಮಾಡಿ


☛ಉದಯವಾಹಿನಿ ಚಿತ್ರ

• ಉದಯವಾಹಿನಿ ಬೀದರ

ರೈತರಿಗೆ ಸರ್ಕಾರದಿಂದ ಸಿಗುವ ಬಿತ್ತನೆಬೀಜ, ಕೃಷಿಭಾಗ್ಯ ಯೋಜನೆ, ಸಾವಯವ ಕೃಷಿ ಹಾಗೂ ಇತರೆ ಯೋಜನೆಗಳ ಲಾಭವನ್ನು ಸರ್ಕಾರದ ಸಹಾಯಧನದಲ್ಲಿ ಪಡೆಯಲು ಸಕಾಲದಲ್ಲಿ ರೈತರಿಗೆ ಬೀಜ, ಗೊಬ್ಬರ ಕೊರತೆಯಾಗದಂತೆ ವಿತರಣೆ ಮಾಡಬೇಕೆಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅಧಿಕಾರಿಯವರಿಗೆಸೂಚಿಸಿದರು.

ಅವರು ಜಿಲ್ಲಾ ಪಂಚಾಯತ, ಕೃಷಿ ಇಲಾಖೆ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಬೀದರ ಸಂಯುಕ್ತಾಶ್ರಯದಲ್ಲಿ ಚಾಂಬೋಳಾ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಿತ್ತನೆ ಬೀಜ ವಿತರಣೆ ಹಾಗೂ ಬೀಜ ಉಪಚಾರ ಹಾಗೂ ಕೀಟನಾಸಕ ಸುರಕ್ಷಾ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬೀದರ ಜಂಟಿ ಕೃಷಿ ನಿರ್ದೇಶಕರಾದ ಜಿಯಾವುಲ್ಲಾ ಕೆ. ಅವರು ಪಾಸ್ತಾವಿಕ ಮಾತನಾಡಿ, ಸೋಯಾ ಮತ್ತು ಇತರೆ ಬೀಜಗಳು ದಾಸ್ತಾನು ಮಾಡಿರುವ 29 ಬೀಜ ವಿತರಣಾ ಕೇಂದ್ರಗಳ ಬಗ್ಗೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಮಾಹಿತಿ ನೀಡಿ ದಿನಾಂಕವಾರು ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ ಎಂದರು. ಸಕಾಲದಲ್ಲಿ ಮಳೆಯಾಗಿರುವುದರಿಂದ ಉದ್ದು, ಹೆಸರು ಮತ್ತು ಮಿಶ್ರ ಬೆಳೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಗೂ ಡಿಎಪಿ ಬದಲಿಗೆ ಸಂಯುಕ್ತ ಗೊಬ್ಬರಗಳನ್ನು ಬಳಸಲು ರೈತರಿಗೆ ಸಲಹೆ ನೀಡಿದರು.

ಕೃಷಿ ಸಂಶೋಧನಾ ಕೇಂದ್ರದ ಕೃಷಿ ವಿಜ್ಞಾನಿಗಳಾದ ಡಾ.ಮಲ್ಲಿಕಾರ್ಜುನ ಲಿಂಗದಳ್ಳಿ ಅವರು ಸಮಗ್ರ ಕೃಷಿ ಪದ್ಧತಿ ಹಾಗೂ ಬಿತ್ತನೆ ಬೀಜ ಉಪಚಾರದ ಕುರಿತು ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಸಿದ್ರಾಮಯ್ಯ ಸ್ವಾಮಿ, ಬೀದರ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ.ಆರ್. ಎಲ್. ಜಾಧವ ಚಾಂಬೋಳ್ ಗ್ರಾಮ ಪಂಚಾಯತ ಅಧ್ಯಕ್ಷರಾದ ಸುರೇಖಾ ಅರ್ಜುನ ಕೋಳಿ, ಇತರರು ಉಪಸ್ಥಿತರಿದ್ದರು.

## ಜನನ ಮತ್ತು ಮರಣ ನೋಂದಣಿ ವಿಳಂಬವಾಗಬಾರದು: ಜಿಲ್ಲಾಧಿಕಾರಿ

• ಉದಯವಾಹಿನಿ ಬಳ್ಳಾರಿ

ಜಿಲ್ಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯು ಯಾವುದೇ ಕಾರಣಕ್ಕೂ ವಿಳಂಬವಾಗದೇ ನಿಗದಿತ ಸಮಯದಲ್ಲಿ ಜರುಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಬೆಳೆ ಕಟಾವು ಪ್ರಯೋಗಗಳ ಪ್ರಗತಿ ಪರಿಶೀಲನೆ, ಬೆಳೆ ಕ್ಷೇತ್ರ ಮರು ಹೊಂದಾಣಿಕೆ ಮತ್ತು ಜನನ–ಮರಣ ನಾಗರೀಕ ನೋಂದಣಿ ಪದ್ಧತಿಯ ಕುರಿತ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜನನ ಘಟನೆಗಳ ಪ್ರಮಾಣವು ವಾರ್ಷಿಕ ಅಂದಾಜು 30 ಸಾವಿರವಿದೆ. ಪ್ರತಿ ತಿಂಗಳು, ಪ್ರತಿ ಆಸ್ಪತ್ರೆಗಳಲ್ಲಿ ಎಷ್ಟು ಜನನ ಘಟನೆಗಳು ಸಂಭವಿಸುತ್ತಿವೆ ಹಾಗೂ ಎಷ್ಟು ಮಂದಿ ಜನನ ಪ್ರಮಾಣ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಪರಿಶೀಲಿಸಿ, ಮಾಹಿತಿ ಸಂಗ್ರಹಿಸಬೇಕು. ಈ ಕುರಿತು ಆಯಾ ತಾಲ್ಲೂಕು ತಹಶೀಲ್ದಾರರ ನೇತೃತ್ವದಲ್ಲಿ ತಾಲ್ಲೂಕು


☛ಉದಯವಾಹಿನಿ ಚಿತ್ರ

ಮಟ್ಟದ ಜನನ ಮತ್ತು ಮರಣ ಸಮನ್ವಯ ಸಮಿತಿ ಸಭೆಗಳನ್ನು ನಿಯಮಿತವಾಗಿ ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಅದೇರೀತಿಯಾಗಿ ಮರಣ ಘಟನೆಗಳನ್ನು ಹೇಗೆ ಗಣತಿ ಮಾಡುತ್ತೀರಿ ಎಂದು ವಿಚಾರಿಸಿದ ಜಿಲ್ಲಾಧಿಕಾರಿಗಳು, ಮರಣ ಘಟನೆಗಳು ಕೇವಲ ಆಸ್ಪತ್ರೆಗಳಲ್ಲಿ ಸಂಭವಿಸಿದರೆ ಗೊತ್ತಾಗುತ್ತದೆ, ಆದರೆ ಸಮುದಾಯದಲ್ಲಿ ನಡೆದ ಮರಣ ಘಟನೆಗಳನ್ನು ಸಹ ತಪ್ಪದೇ ಗಣತಿ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜನನ ಘಟನೆಗಳು 21 ದಿನಗಳೊಳಗಾಗಿ ಸಂಭವಿಸಿದ್ದರೆ ಉಚಿತವಾಗಿ ಪ್ರಮಾಣ ಪತ್ರ ಪಡೆಯಬಹುದು. ಘಟನೆ ಸಂಭವಿಸಿ 21 ದಿನದಿಂದ 30 ದಿನಗಳೊಳಗಿದ್ದರೆ ಪ್ರಮಾಣ ಪತ್ರ ಪಡೆಯಲು ರೂ.20 ಪಾವತಿಸಬೇಕು. 30 ದಿನಗಳ ನಂತರ ಪಡೆಯುವಂತಿದ್ದಲ್ಲಿ ರೂ.50 ಪಾವತಿಸಬೇಕು ಎಂದು ಮಾಹಿತಿ ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ, ಜನನ ಮತ್ತು ಮರಣ ಪ್ರಮಾಣ ವಿತರಣೆಯಲ್ಲಿ ಸಾರ್ವಜನಿಕರನ್ನು ವಿನಾಃಕಾರಣ ಅಲೆದಾಡಿಸುವಂತಿಲ್ಲ. ಮುಖ್ಯವಾಗಿ ಸುಳ್ಳು ಪ್ರಮಾಣ ಪತ್ರ ವಿತರಣೆ ಮಾಡುವಂತಿಲ್ಲ ಎಂದು ತಿಳಿಸಿದರು.

**2025 ರ ಜನವರಿಯಿಂದ ಏಪ್ರಿಲ್ ರವರೆಗೆ ಜಿಲ್ಲೆಯಲ್ಲಿ ಜನನ ನೋಂದಣಿ ವಿವರ ಕುರಿತಂತೆ ಗಂಡು-4,827, ಹೆಣ್ಣು-4,361 ಸೇರಿ ಒಟ್ಟು 9,188 ಘಟನೆಗಳು ನೋಂದಣಿಯಾಗಿವೆ. ಅದೇರೀತಿಯಾಗಿ 2025 ರ ಜನವರಿಯಿಂದ ಏಪ್ರಿಲ್ ರವರೆಗೆ ಜಿಲ್ಲೆಯಲ್ಲಿ ಮರಣ ನೋಂದಣಿ ವಿವರ ಕುರಿತಂತೆ ಗಂಡು-2,608, ಹೆಣ್ಣು-1,775 ಮತ್ತು ಲಿಂಗತ್ವ ಅಲ್ಪಸಂಖ್ಯಾತರು-1 ಸೇರಿದಂತೆ ಒಟ್ಟು 4,384 ಘಟನೆಗಳು ನೋಂದಣಿಯಾಗಿವೆ -ಎನ್.ಕೆ.ಪತ್ರಿಬಸಪ್ಪ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ**

## ಕೊಳಗೇರಿ ಮನೆ ನಿರ್ಮಾಣಕ್ಕೆ ಅನುದಾನ ಕೊರತೆ

• ಉದಯವಾಹಿನಿ ಶಿರಸಿ

ನಗರದ ವಿವಿಧ ವಾರ್ಡ್ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ)ಯಿಂದ ನಿರ್ಮಿಸಲಾಗುತ್ತಿರುವ ಅಂದಾಜು 600 ಮನೆಗಳಿಗೆ ಅನುದಾನದ ಅಲಭ್ಯತೆ ಕಾಡುತ್ತಿದೆ. ಹೀಗಾಗಿ ಹೊಸ ಮನೆ ನಿರ್ಮಿಸಿಕೊಳ್ಳಲು ಹಳೆಯ ಮನೆ ಕೆಡವಿಕೊಂಡಿರುವ ಫಲಾನುಭವಿಗಳು ಮಳೆಗಾಲ ಆರಂಭವಾದ ಕಾರಣ ವಾಸಿಸಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರಸಭೆ ವ್ಯಾಪ್ತಿಯ ರಾಜೀವನಗರ, ಗಣೇಶನಗರ, ಇಂದಿರಾನಗರ, ಕಸ್ತೂರಬಾನಗರ, ನೆಹರುನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ 2023–24ನೇ ಸಾಲಿನಲ್ಲಿ ಅಂದಾಜು 600 ಮನೆಗಳ ನಿರ್ಮಾಣಕ್ಕೆ ಚಾಲನೆ ಸಿಕ್ಕಿತ್ತು. ಹೊಸ ಮನೆಯ ಅವಶ್ಯವಿರುವ ಫಲಾನುಭವಿಗಳು ಹಣ ಭರಣ ಮಾಡಿ ನೋಂದಣಿ ಮಾಡಿಕೊಂಡು ಮನೆ ಮಂಜೂರು ಮಾಡಿಸಿಕೊಂಡಿದ್ದರು. ಆದರೆ ಸರ್ಕಾರದಿಂದ ನಿಗದಿತ ಅವಧಿಯೊಳಗೆ ಹಣ ಬಿಡುಗಡೆಯಾಗದ ಕಾರಣ ನಿರ್ಮಾಣ ಕಾರ್ಯ 8 ತಿಂಗಳಿನಿಂದ ಸ್ಥಗಿತಗೊಂಡಿದೆ. ಇದರಿಂದ ಫಲಾನುಭವಿಗಳು ಕಚೇರಿಯಿಂದ ಕಚೇರಿಗೆ ಅಲೆದಾಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ.


☛ಉದಯವಾಹಿನಿ ಚಿತ್ರ

ಕೊಳಚೆ ನಿರ್ಮೂಲನಾ ಮಂಡಳಿಯ ಪ್ರಕಾರ 330 ಚದರ ಅಡಿಯಲ್ಲಿ ಮನೆ ನಿರ್ಮಿಸಲಾಗುತ್ತಿದೆ. ಮನೆ ನಿರ್ಮಿಸಿಕೊಳ್ಳಲಿಚ್ಚಿಸುವ ಫಲಾನುಭವಿಗಳು ಪರಿಶಿಷ್ಟ ಜಾತಿ, ಪಂಗಡದವರಾದರೆ 50 ಸಾವಿರ, ಇತರೆ ವರ್ಗದವರಾದರೆ 1 ಲಕ್ಷ ವಂತಿಕೆ ಪಾವತಿಸಬೇಕು. ಉಳಿದ ಮೊತ್ತ ಸರ್ಕಾರವು ಮಂಡಳಿಯ ಮೂಲಕ ಪಾವತಿಸುತ್ತದೆ. ಫಲಾನುಭವಿಯೇ ಸ್ವತಃ ಮನೆ ನಿರ್ಮಿಸಿಕೊಳ್ಳಬಹುದು ಅಥವಾ ಗುತ್ತಿಗೆ ಆಧಾರದಲ್ಲಿಯೂ ಮನೆ ನಿರ್ಮಿಸಿಕೊಳ್ಳಬಹುದು. ಸರ್ಕಾರ ಸಾಮಗ್ರಿಗಳಿಗೆ ಹಣವನ್ನು ನೀಡುತ್ತದೆ. ಈ ಭರವಸೆಯಲ್ಲಿ ಹೊಸ ಮನೆ ಹೊಂದಬೇಕೆಂದು ಹಳೆ ಮನೆಯನ್ನು ನೆಲಸಮಗೊಳಿಸಿದ್ದಾರೆ. ಈ ಯೋಜನೆಯಲ್ಲಿ ಕೂಲಿಕಾರ್ಮಿಕರು, ಬಡವರು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಾಗಿದ್ದು, ಸಾಲ ಮಾಡಿ ಹಣ ಹೊಂದಾಣಿಕೆ ಮಾಡಿ ಮನೆ ಮಂಜೂರು ಮಾಡಿಸಿಕೊಂಡಿದ್ದರು. ಆದರೆ ಕೆಲವರಿಗೆ ಮೊದಲ ಹಂತದ ಹಣವಷ್ಟೇ ಸಂದಾಯವಾಗಿದ್ದು, ಬಹುತೇಕರಿಗೆ ಅದೂ ಇಲ್ಲ. ಹೀಗಾಗಿ ಸಮಸ್ಯೆ ಹೆಚ್ಚುತ್ತಿದೆ.

• ಶಿಗ್ಗಾವಿ ಪಟ್ಟಣಕ್ಕೆ ಹತ್ತಿರವಿರುವ ಪ್ರದೇಶ • ಹಕ್ಕುಪತ್ರಕ್ಕಾಗಿ ಹಲವು ವರ್ಷಗಳ ಹೋರಾಟ

# ಮನೆ ಇದ್ದರೂ ಮಾಲೀಕರಲ್ಲ: ಗಂಗೇನೂರು ಗೋಳು

• ಉದಯವಾಹಿನಿ ಹಾವೇರಿ

ಜಿಲ್ಲೆಯ ಶಿಗ್ಗಾವಿ ಪಟ್ಟಣಕ್ಕೆ ಸಮೀಪದಲ್ಲಿರುವ ಗಂಗೇನೂರಿನ ಜನರು ಹಕ್ಕುಪತ್ರಕ್ಕಾಗಿ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದು, ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದಾರೆ. ಚಾಲ್ತಿಯಲ್ಲಿರುವ ಕಾನೂನು ಹಾಗೂ ಕೆಲ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಅಧಿಕಾರಿಗಳು, ಹಕ್ಕುಪತ್ರದ ಅವಕಾಶವನ್ನು ಮುಂದೂಡುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಹಾದುಹೋಗಿರುವ ಪ್ರದೇಶದಿಂದ 5 ಕಿ.ಮೀ. ದೂರದಲ್ಲಿರುವ ಗಂಗೇನೂರಿನಲ್ಲಿ 95 ಮನೆಗಳಿವೆ. ಕೃಷಿ, ಕೂಲಿ, ಸ್ವ–ಉದ್ಯೋಗ ನಂಬಿಕೊಂಡು 300ಕ್ಕೂ ಹೆಚ್ಚು ಜನರು ವಾಸವಿದ್ದಾರೆ. ಪ್ರತಿಯೊಂದು ಮನೆಗೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲಾಗಿದೆ. ಮಕ್ಕಳಿಗಾಗಿ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆ ಸಹ ತೆರೆಯಲಾಗಿದೆ.

ಶಿಗ್ಗಾವಿಯಲ್ಲಿ ನೆಲೆಸಿದ್ದ ನಿರಾಶ್ರಿತರು, ರೈತರು ಹಾಗೂ ಇತರರು, ಸುಮಾರು 50 ವರ್ಷಗಳ ಹಿಂದೆ ಹುಲ್ಲುಗಾವಲು ಪ್ರದೇಶವೆಂದು ಗುರುತಿಸಿಕೊಂಡಿದ್ದ ಗಂಗೇನೂರಿಗೆ ಬಂದಿದ್ದರು. ಅದೇ ಜಾಗದಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ.

**ಹಕ್ಕುಪತ್ರಕ್ಕಾಗಿ ಮನವಿ ಪತ್ರ ಹಿಡಿದು ಕಚೇರಿಯಿಂದ ಕಚೇರಿಗೆ ಅಲೆದಾಡುತ್ತಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ಹೋರಾಟ ನಡೆಸುತ್ತೇವೆ -ಭದ್ರಪ್ಪ ಬಾರಕೇರ, ಗಂಗೇನೂರು ನಿವಾಸಿ**

ಹಕ್ಕು ಪತ್ರಕ್ಕಾಗಿ ಮನವಿ ಪತ್ರ

ಆದರೆ, ಅವರಿಗೆ ಇದುವರೆಗೂ ಹಕ್ಕು ಪತ್ರ ಮಾತ್ರ ಸಿಕ್ಕಿಲ್ಲ. ಚುನಾವಣೆ ಸಂದರ್ಭದಲ್ಲಿ ಗಂಗೇನೂರಿಗೆ ಬರುವ ರಾಜಕಾರಣಿಗಳು, ಮತಕ್ಕಾಗಿ ಜನರನ್ನು ಓಲೈಸುತ್ತಿದ್ದಾರೆ. ನಮಗೆ ಮತ ನೀಡಿದರೆ, ನಿಮಗೆ ಹಕ್ಕು ಪತ್ರ ಕೊಡಿಸುತ್ತೇವೆ. ಮೂಲ ಸೌಕರ್ಯವನ್ನೂ ಕಲ್ಪಿಸುತ್ತೇವೆ ಎಂದು ಭರವಸೆ ನೀಡುತ್ತಿದ್ದಾರೆ.

ಆದರೆ, ಚುನಾವಣೆಯಲ್ಲಿ ಗೆದ್ದು ಬಂದ ನಂತರ ಗಂಗೇನೂರಿನ ಜನರ ಬೇಡಿಕೆಗಳನ್ನು ಮರೆಯುತ್ತಿದ್ದಾರೆ. ಶಿಗ್ಗಾವಿ–ಸವಣೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಗಂಗೇನೂರಿನ ಜನರು, ಹಲವು ವರ್ಷಗಳಿಂದ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದರು. ಇದರಿಂದ ಬೇಸತ್ತ ಅವರು, ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮತದಾನ


☛ಉದಯವಾಹಿನಿ ಚಿತ್ರ

ಬಹಿಷ್ಕಾರ ಮಾಡಿದ್ದರು. ಜನರ ಮನವೊಲಿಸಿದ್ದ ಅಂದಿನ ಶಾಸಕ ಬಸವರಾಜ ಬೊಮ್ಮಾಯಿ, ಮತದಾನ ಮಾಡಿಸಿದ್ದರು. ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗ್ರಾಮದ ಪ್ರಮುಖ ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿ ಮಾಡಿಕೊಟ್ಟಿದ್ದಾರೆ. ಆದರೆ, ಅವರಿಂದಲೂ ಹಕ್ಕುಪತ್ರ ಕೊಡಿಸಲು ಆಗಲಿಲ್ಲವೆಂದು ಗ್ರಾಮಸ್ಥರು ದೂರುತ್ತಿದ್ದಾರೆ.

ಇತ್ತೀಚಿಗೆ ನಡೆದ ಉಪ ಚುನಾವಣೆಯಲ್ಲಿಯೂ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು, ಹಕ್ಕುಪತ್ರದ ಭರವಸೆ ನೀಡಿದ್ದರು. ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ ಯಾಸೀರ ಅಹ್ಮದ್ ಖಾನ್ ಪಠಾಣ, ಹಕ್ಕುಪತ್ರದ ಬಗ್ಗೆ ಮಾತನಾಡುತ್ತಿಲ್ಲ. ಇದರಿಂದ ಬೇಸತ್ತ ನಿವಾಸಿಗಳು, ತಡಸ ಗ್ರಾಮದಲ್ಲಿ ನಡೆದಿದ್ದ ಜನಸಂಪರ್ಕ ಸಭೆಯಲ್ಲಿ ಶಾಸಕರಿಗೆ ಮನವಿ ಸಲ್ಲಿಸಿದ್ದರು. ಕ್ರಮ ಕೈಗೊಳ್ಳುವ ಭರವಸೆ ಸಿಕ್ಕು ಹಲವು ತಿಂಗಳಾಗಿದ್ದು, ಹಕ್ಕುಪತ್ರದ ಬೇಡಿಕೆ ಮಾತ್ರ ಈಡೇರಿಲ್ಲ.

ಸದ್ಯದ ಮನೆಗಳು ಹಳೆಯದ್ದಾಗಿದ್ದು, ಭಾಗಶಃ ಶಿಥಿಲಗೊಂಡಿವೆ. ಮಳೆಗಾಲದ ಸಂದರ್ಭದಲ್ಲಿ ಮನೆಗಳು ಕುಸಿದು ಬೀಳುವ ಸಾಧ್ಯತೆಯಿದೆ. ಮನೆಗಳನ್ನು ಕಟ್ಟಿಕೊಳ್ಳಲು ಸಹ ಅಧಿಕಾರಿಗಳು ಅವಕಾಶ ನೀಡುತ್ತಿಲ್ಲವೆಂದು ಜನರು ಆರೋಪಿಸುತ್ತಿದ್ದಾರೆ.

### ಬ್ಯಾಂಕ್ ಸಾಲದಿಂದ ವಂಚಿತ

**ಗಂಗೇನೂರಿನಲ್ಲಿ ಶೇ 75ರಷ್ಟು ಮಂದಿ ಕೃಷಿ ನಂದಿದ್ದಾರೆ. ಉಳಿದವರು ಕೂಲಿ ಹಾಗೂ ಸಣ್ಣ–ಪುಟ್ಟ ಕೆಲಸ ಮಾಡಿಕೊಂಡಿದ್ದಾರೆ. ಹಣಕಾಸಿನ ಅಡಚಣೆ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಉದ್ದೇಶದಿಂದ ಸಾಲಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದಾರೆ. ಮನೆ ನಮ್ಮ ಹೆಸರಿನಲ್ಲಿಲ್ಲವೆಂದು ಬ್ಯಾಂಕ್‌ನವರು ಅರ್ಜಿಗಳನ್ನು ತಿರಸ್ಕರಿಸುತ್ತಿದ್ದಾರೆ' ಎಂದು ಗ್ರಾಮಸ್ಥರು ಹೇಳಿದರು. ರಾಜ್ಯ ಸರ್ಕಾರದಿಂದ ಇತ್ತೀಚೆಗೆ ಹೊಸಪೇಟೆಯಲ್ಲಿ ನಡೆದ ಸಮಾವೇಶದಲ್ಲಿ ಲಕ್ಷಕ್ಕೂ ಹೆಚ್ಚು ಮಂದಿಗೆ ಹಕ್ಕುಪತ್ರ ನೀಡಲಾಗಿದೆ. ನಾವೂ ಹಕ್ಕುಪತ್ರ ಪಡೆಯಲು ಅರ್ಹರಿದ್ದೇವೆ. ಆದರೆ, ಹಕ್ಕುಪತ್ರ ನೀಡುತ್ತಿಲ್ಲ. ಮನೆಯಲ್ಲಿ ವಾಸವಿದ್ದರೂ ನಾವು ಮಾಲೀಕರಾಗುತ್ತಿಲ್ಲ. ಯಾವ ಸಂದರ್ಭದಲ್ಲಿ ಏನಾಗುತ್ತದೆ? ಎಂಬ ಭಯವೂ ಇದೆ. ಸರ್ಕಾರ ನಿಗದಿಪಡಿಸಿದಷ್ಟು ತೆರಿಗೆ ಪಾವತಿಸಲು ನಾವು ಸಿದ್ಧರಿದ್ದು, ನಮಗೆ ಹಕ್ಕುಪತ್ರ ಕೊಡಬೇಕು. ಗಂಗೇನೂರನ್ನು ಕಂದಾಯ ಗ್ರಾಮವೆಂದು ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.**

**ತಂದೆ–ತಾಯಿ ಬಂದಿದ್ದ ಪ್ರದೇಶ:** 'ನಮ್ಮ ತಂದೆ–ತಾಯಿ 50 ವರ್ಷಗಳ ಹಿಂದೆಯೇ ಗಂಗೇನೂರಿಗೆ ಬಂದು ನೆಲೆಸಿದ್ದಾರೆ.ಆದರೆ, ಅವರ ಹೆಸರಿನಲ್ಲಿ ಯಾವುದೇ ದಾಖಲೆಗಳಿಲ್ಲ. ನಮ್ಮ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಕೆಲಸಗಳಿಗಾಗಿ ಶಾಶ್ವತ ವಿಳಾಸದ ದಾಖಲೆಗಳು ಲಭ್ಯವಾಗುತ್ತಿಲ್ಲ. ಮನೆಯ ಹಕ್ಕು ಪತ್ರ ನೀಡುವಂತೆ ಕೋರಿದರೂ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಗ್ರಾಮಸ್ಥರು ದೂರಿದರು.

## ಮಿನಿ ನ್ಯೂಸ್

### ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವಂತೆ ನಂಬಿಸಿ 75 ಲಕ್ಷ ವಂಚನೆ

• ಉದಯವಾಹಿನಿ ಉಡುಪಿ

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವಂತೆ ನಂಬಿಸಿ 75ಲಕ್ಷ ರೂ. ವಂಚಿಸಿರುವ ಬಗ್ಗೆ ಉಡುಪಿ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಟಪಾಡಿ ಶಂಕರಪುರದ ಜೊಸ್ಸಿ ರವೀಂದ್ರ ಡಿಕ್ರೂಸ್(54) ಎಂಬವರಿಗೆ ಫೇಸ್ಬುಕ್ ಮೂಲಕ ಮಹಿಳೆಯೊಬ್ಬರ ಪರಿಚಯವಾಗಿದ್ದು 2025ರ ಫೆಬ್ರವರಿ ತಿಂಗಳಲ್ಲಿ ಆಕೆ ವಾಟ್ಸಾಪ್ ನಂಬರ್ ನೀಡಿದ್ದಳು. ಆಕೆ ಷೇರಿನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರುವುದಾಗಿ ನಂಬಿಸಿದ್ದು, ಅದರಂತೆ ಜೋಸ್ಸಿ ಎ.9ರಿಂದ ಮೇ 12ವರೆಗೆ ಹಂತ ಹಂತವಾಗಿ ಒಟ್ಟು 75,00,000 ರೂ. ಹಣವನ್ನು ಆಕೆಯ ಖಾತೆಗೆ ವರ್ಗಾವಣೆ ಮಾಡಿದ್ದರು. ಆದರೆ ಆ ವ್ಯಕ್ತಿಗಳು ಈತನಕ ಜೋಸ್ಸಿ ಶೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಹಣವನ್ನಾಗಲೀ ಅಥವಾ ಲಾಭಾಂಶನ್ನಾಗಲಿ ನೀಡದೇ ವಂಚನೆ ಮಾಡಿರುವುದಾಗಿ ದೂರಲಾಗಿದೆ

### ಕಟ್ಟಡ ಕಾರ್ಮಿಕರಿಗೆ ನಿವೇಶನ ಮನೆ ನೀಡಲು ಮನವಿ

• ಉದಯವಾಹಿನಿ ಬಳ್ಳಾರಿ

ಕಟ್ಟಡ ಮತ್ತು ಇತರೆ ನಿರ್ಮಾಣ ಹಾಗೂ ಅಸಂಘಟಿತರಾಗಿ ದುಡಿಯುವ ಕಾರ್ಮಿಕರಿಗೆ ನಿವೇಶನ ಮತ್ತು ಮನೆ ನೀಡುವಂತೆ ಆಗ್ರಹಿಸಿ ಇಂದು ಮೇಯರ್ ಮುಲ್ಲಂಗಿ ನಂದೀಶ್ ಅವರಿಗೆ ಮನೆ ಸಲ್ಲಿಸಲಾಗಿದೆ.

ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘವು ಮನವಿ ಸಲ್ಲಿಸಿ ಕಟ್ಟಡ ನಿರ್ಮಾಣ ಹಾಗೂ ಅಸಂಘಟಿತ ಕಾರ್ಮಿಕರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನಮಗೆ ಇಲ್ಲಿ ತನಕ ಸ್ವಂತ ಜಾಗ ಮನೆ ಇಲ್ಲ. ಕಳೆದ 20 ವರ್ಷ ಮೇಲ್ಪಟ್ಟು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆ ಅಡಿಯಲ್ಲಿ ಅಥವಾ ಕಾರ್ಮಿಕ ಇಲಾಖೆಯಿಂದ ವಸತಿ ಸೌಲಭ್ಯ ನೀಡಬೇಕು ಎಂದು ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಎಂ. ಮಲ್ಲೇಶ್ ಮನವಿ ಮಾಡಿದ್ದಾರೆ.

### ಅನಧಿಕೃತ ಕೋಚಿಂಗ್ ಕೇಂದ್ರಗಳ ವಿರುದ್ಧ ಕ್ರಮಕ್ಕೆ ಆಗ್ರಹ

• ಉದಯವಾಹಿನಿ ಬೀದರ್

ನಗರದಲ್ಲಿ ನಡೆಯುತ್ತಿರುವ ಅನಧಿಕೃತ ಕೋಚಿಂಗ್ ಕೇಂದ್ರಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಆಗ್ರಹಿಸಿದೆ. ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ಬೆಂಗಳೂರಿನಲ್ಲಿ ಈ ಕುರಿತು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕಿ ಸಿಂಧು ಬಿ. ರೂಪೇಶ್ ಅವರಿಗೆ ದೂರು ಸಲ್ಲಿಸಿದ್ದಾರೆ.

ಫಿಜಿಕ್ಸ್‌ವಾಲಾ ವಿದ್ಯಾಪೀಠ ಪಾಠಶಾಲಾ ಕೋಚಿಂಗ್ ಕೇಂದ್ರದ ಹೆಸರಲ್ಲಿ ಹಣ ಪಡೆದು ಅನಧಿಕೃತವಾಗಿ ಬೇರೆ ಬೇರೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಸಿ, ಆನ್‌ಲೈನ್, ಆಫ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿದೆ. ಬನ್ಸಾಲ್ ಹಾಗೂ ಆಕಾಶ್ ಕೋಚಿಂಗ್ ಕೇಂದ್ರಗಳಿಂದಲೂ ವಿದ್ಯಾರ್ಥಿಗಳನ್ನು ವಂಚಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಅಧಿಕೃತ ಕಾಲೇಜುಗಳಲ್ಲೂ ನೀಟ್, ಜೆಇಇ, ಕೆಸಿಇಟಿ ಹೆಸರಲ್ಲಿ ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕ ಪಡೆಯಲಾಗುತ್ತಿದೆ. ಹೀಗಾಗಿ ಪಾಲಕರಿಗೆ ಮಕ್ಕಳ ಕಾಲೇಜು ಶಿಕ್ಷಣ ಹೊರೆಯಾಗಿದೆ ಎಂದು ಹೇಳಿದ್ದಾರೆ.

### ಗುಂಡಿಮಯ ರಸ್ತೆ: ಸವಾರರು ಪರದಾಟ

• ಉದಯವಾಹಿನಿ ಮಾಯಕೊಂಡ

ಗ್ರಾಮಗಳ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವ ರಸ್ತೆಗಳು ಗುಂಡಿಮಯವಾಗಿದ್ದು, ಜೀವ ತೆಗೆಯಲು ಕಾಯುತ್ತಿವೆ ಎಂಬ ಸ್ಥಿತಿ ನಿರ್ಮಾಣವಾಗಿದೆ. ಆನಗೋಡು ಹೋಬಳಿಯ ಬಾವಿಹಾಳು ಗ್ರಾಮದಿಂದ ಹೆಬ್ಬಾಳು ರಾಷ್ಟ್ರೀಯ ಹೆದ್ದಾರಿಯನ್ನು ಸಂಪರ್ಕಿಸುವ ರಸ್ತೆ ತೀರಾ ಹದಗೆಟ್ಟಿದೆ.


☛ಉದಯವಾಹಿನಿ ಚಿತ್ರ

ರಸ್ತೆಯಲ್ಲಿ ಗುಂಡಿಗಳಿವೆಯೋ ಅಥವಾ ಗುಂಡಿಗಳಲ್ಲಿಯೇ ರಸ್ತೆ ನಿರ್ಮಾಣ ಆಗಿದೆಯೋ ಎಂಬುದು ತೋಚದಂತಾಗಿದೆ.

ಬಾವಿಹಾಳು ಗ್ರಾಮದಿಂದ ಹೊನ್ನ ನಾಯ್ಕನಹಳ್ಳಿ, ನರಗನಹಳ್ಳಿ, ಚಿನ್ನಸಮುದ್ರ ಗ್ರಾಮಗಳ ಮೂಲಕ ಹೆಬ್ಬಾಳು ಹೆದ್ದಾರಿಯನ್ನು ಸಂಪರ್ಕಿಸಲಾಗುತ್ತದೆ. ಈ ಗ್ರಾಮಗಳ ಜನತೆಗೆ ಸಂಚರಿಸಲು ಈ ಮಾರ್ಗ ಹೊರತುಪಡಿಸಿ ಅನ್ಯ ದಾರಿಯಿಲ್ಲ. ಗುಂಡಿಗಳಿದ್ದರೂ ಇದೇ ರಸ್ತೆಯಲ್ಲಿ ಸಂಚರಿಸುವ ಅನಿವಾರ್ಯತೆ ಇದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 10 ಕಿಲೋಮೀಟರ್ ಅಂತರದ ದಾರಿಯನ್ನು ಕ್ರಮಿಸಲು ಕನಿಷ್ಠ ಒಂದರಿಂದ ಒಂದೂವರೆ ತಾಸು ಬೇಕಾಗುತ್ತದೆ. ಒಂದೊಂದು ಗುಂಡಿಯೂ ಎರಡು, ಮೂರು ಅಡಿಗಳಷ್ಟು ಆಳವಾಗಿದ್ದು, ಕೆಲವು ಕಡೆ ರಸ್ತೆಯ ಎರಡೂ ಅಂಚುಗಳಿಗೆ ವ್ಯಾಪಿಸಿವೆ. ಇಂತಹ ಗುಂಡಿಗಳನ್ನು ವಾಹನ ಸವಾರರು ಯಾವುದೇ ಕಾರಣಕ್ಕೂ ತಪ್ಪಿಸಿಕೊಂಡು ಮುಂದೆ ಹೋಗಲಾಗದು. ಇತ್ತೀಚೆಗೆ ಸುರಿದ ಮಳೆಗೆ ಈ ದೊಡ್ಡ ದೊಡ್ಡ ಗುಂಡಿಗಳು ತುಂಬಿ ಕೆರೆಗಳಂತಾಗಿವೆ. ವಾಹನ ಸವಾರರು ಜೀವ ಕೈನಲ್ಲಿ ಹಿಡಿದು ಸಂಚರಿಸುವ ಸ್ಥಿತಿ ಇದೆ.

### ರಸ್ತೆ ಮಧ್ಯೆ ಅಪಾಯದ ಗುಂಡಿ

• ಉದಯವಾಹಿನಿ ಮುಳಗುಂದ

ಗದಗ–ಮುಳಗುಂದ ನಡುವಿನ ಮುಖ್ಯ ರಸ್ತೆಯ, ಘನತ್ಯಾಜ್ಯ ವಿಲೇವಾರಿ ಘಟಕದ ಹತ್ತಿರ ರಸ್ತೆ ಮಧ್ಯ ಗುಂಡಿಗಳು ಉಂಟಾಗಿದ್ದು, ಬೈಕ್ ಸವಾರರಿಗೆ ಜೀವಕ್ಕೆ ಕಂಟಕವಾಗಿ ಪರಿಣಮಿಸಿದೆ. ಹಲವು ದಿನಗಳಿಂದ ರಸ್ತೆ ಹಾಳಾಗಿದ್ದು, ಐದಾರು ಜಾಗಗಳಲ್ಲಿ ವಾಹನಗಳಿಗೆ ಅಪಾಯ ತಂದೊಡ್ಡುವ ಗುಂಡಿಗಳು ಉಂಟಾಗಿವೆ. ಇದರಿಂದ ಬೈಕ್ ಸವಾರರು ಆಯತಪ್ಪಿ ಬಿದ್ದು ಗಾಯವಾದ ಘಟನೆಗಳು ನಡೆಯುತ್ತಿವೆ. ಕಾರು ಇನ್ನಿತರ ವಾಹನಗಳ ಸಂಚಾರಕ್ಕೂ ಸಮಸ್ಯೆ ಆಗುತ್ತಿದೆ. ಲೋಕೋಪಯೋಗಿ ಇಲಾಖೆ ಈ ಬಗ್ಗೆ ಗಮನ ಹರಿಸಿ ಗುಂಡಿ ಮುಚ್ಚಬೇಕು.


☛ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ವೃಷಭ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಪ್ರಮುಖ ಜನರು ವಿಶೇಷ ವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ಮಕ್ಕಳು ಅಭ್ಯಾಸಗಳ ಮೇಲೆ ಗಮನ ಹರಿಸಬೇಕು.

**ಮಿಥುನ** ವಿದೇಶದಲ್ಲಿ ಇರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ.

**ಕರ್ಕಾಟಕ** ಧ್ಯಾನ ಪರಿಹಾರ ತರುತ್ತದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ನಿಮ್ಮ ಸ್ನೇಹಿತರು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ.

**ಸಿಂಹ** ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು.

**ಕನ್ಯಾ** ಯಾರಾದರೂ ನಿಮ್ಮನ್ನು ಬಲಿಪಶುವನ್ನಾಗಿ ಮಾಡಲು ಪ್ರಯತ್ನಿಸ ಬಹುದಾದ್ದರಿಂದ ಎಚ್ಚರಿಕೆಯಿಂದಿರಿ. ಒತ್ತಡ ಹೆಚ್ಚಾಗಬಹುದು. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ತುಲಾ** ಕಚೇರಿಯಲ್ಲಿ ಇಂದು ನೀವು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ವರ್ತಿಸಬೇಕು. ಬಲವಂತವಾಗಿ ಮಾತನಾಡುವ ಮೂಲಕ, ನೀವು ನಿಮ್ಮನ್ನು ತೊಂದರೆಗೆ ಸಿಲುಕಿಸಬಹುದು.

**ವೃಶ್ಚಿಕ** ಈ ರಾಶಿಚಕ್ರದ ದೊಡ್ಡ ಉದ್ಯಮಿಗಳು ತುಂಬಾ ಯೋಚಿಸಿ ಅರ್ಥಮಾಡಿ ಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ. ನಿಮ್ಮ ಸ್ನೇಹಿತರು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ.

**ಧನಸ್ಸು** ಇತರರನ್ನು ಟೀಕಿಸುವ ನಿಮ್ಮ ಅಭ್ಯಾಸದಂದಾಗಿ ಇಂದು ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ. ನಿಮ್ಮ ಹಾಸ್ಯಪ್ರಜ್ಞೆ ಜಾಗೃತವಾಗಿರಲಿ ಮತ್ತು ನಿಮ್ಮ ಸ್ವರಕ್ಷಣೆ ಕಡಿಮೆಯಿರಲಿ.

**ಮಕರ** ನೀವು ಇಂದು ಹಾಜರಾದ ಸಾಮಾಜಿಕ ಸಂತೋಷಕೂಟದಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ. ನೀವು ಒಳ್ಳೆಯ ಅಭಿವೃದ್ಧಿ ಸಾಧಿಸುತ್ತಿದ್ದ ಹಾಗೆ ಪ್ರೇಮ ಜೀವನ ಒಳ್ಳೆಯ ತಿರುವು ತೆಗೆದುಕೊಳ್ಳುತ್ತದೆ.

**ಕುಂಭ** ಇಂದು ನೀವು ಉಚಿತ ಕ್ಷಣಗಳಲ್ಲಿ ಯಾವುದೇ ಹೊಸ ಕೆಲಸವನ್ನು ಮಾಡಲು ಯೋಚಿಸುವಿರಿ ಆದರೆ ನಿಮ್ಮ ಅಗತ್ಯವಾದ ಕೆಲಸಗಳು ಸಹ ತಪ್ಪುವಷ್ಟು ನೀವು ಈ ಕೆಲಸದಲ್ಲಿ ಸಿಲುಕಬಹುದು.

**ಮೀನ** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ.

● ಸದ್ಯ ಹಿಪ್ಪರಗಿ ಬ್ಯಾರೇಜ್‌ನಿಂದ 33 ಸಾವಿರ ಕ್ಯುಸೆಕ್ ನೀರು ಆಲಮಟ್ಟಿ ಡ್ಯಾಂಗೆ ಹೊರ ಬಿಡಲಾಗುತ್ತಿದೆ

# ತುಂಬಿ ಹರಿಯುತ್ತಿರುವ ಕೃಷ್ಣಾ ನದಿ: ಮಹಾರಾಷ್ಟ್ರ ಮೊಂಡಾಟಕ್ಕೆ ವರುಣ ಬ್ರೇಕ್

• ಉದಯವಾಹಿನಿ ಮುಧೋಳ

ಕುಡಿಯುವ ನೀರಿಗೆ ಹಾಹಾಕಾರವುಂಟಾಗಿ ಕೃಷ್ಣಾ ನದಿಗೆ ನೀರು ಬಿಡಿ ಎಂದು ಪಕ್ಕದ ಮಹಾರಾಷ್ಟ್ರಕ್ಕೆ ಗೋಗರೆದರೂ ನೀರು ಬಿಡಲಿಲ್ಲ, ಇದೀಗ ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ಸುರಿದಿದ್ದರಿಂದ ನದಿಗೆ ನೀರು ಹರಿದು ಬರುತ್ತಿದೆ.

ಕೇವಲ 20 ದಿನಗಳ ಹಿಂದೆ ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳ ಕೃಷ್ಣಾನದಿ ಪಾತ್ರದಲ್ಲಿ ನೀರಿನ ಕೊರತೆಯಿತ್ತು. ನೆರೆ ರಾಜ್ಯ ಮಾತ್ರ ಮೊಂಡುತನದಿಂದ ವರ್ತಿಸಿ ನೀರು ಕೊಡಲಿಲ್ಲ. ಪಶ್ಚಿಮ ಘಟ್ಟದಲ್ಲಿ ಅಪಾರ ಮಳೆ ಸುರಿಯುತ್ತಿರುವ ಕಾರಣ ನದಿಗೆ ನೈಸರ್ಗಿಕವಾಗಿ ನೀರು ಹರಿಯುತ್ತಿದೆ. ಮಹಾರಾಷ್ಟ್ರದ ಕೃಷ್ಣಾನದಿ ಉಗಮ ಸ್ಥಾನ ಮಹಾಬಳೇಶ್ವರ, ವಾರಣಾ, ಕೊಯ್ನಾ ಪ್ರದೇಶದಲ್ಲಿ ಭರ್ಜರಿಯಾಗಿ ಮಳೆಯಾಗುತ್ತಿದೆ. ಕೃಷ್ಣಾ ನದಿ ತುಂಬಿ ಹರಿಯುತ್ತಿದ್ದು, ರಾಜಾಪೂರ ಬ್ಯಾರೇಜ್‌ನಿಂದ ಜಿಲ್ಲೆಯ ಹಿಪ್ಪರಗಿ ಬ್ಯಾರೇಜ್‌ಗೆ ನೀರು ಹರಿಯುತ್ತಿದೆ. ವಾರದ ಹಿಂದೆ 1 ಸಾವಿರ ಕ್ಯುಸೆಕ್ ನಷ್ಟಿದ್ದ ಒಳಹರಿವು ಈಗ 33 ಸಾವಿರ ಕ್ಯುಸೆಕ್‌ಗೆ ಏರಿಕೆಯಾಗಿದೆ. ಹಿಪ್ಪರಗಿ ಬ್ಯಾರೇಜ್, ವಿಜಯಪುರದ ಆಲಮಟ್ಟಿ ಡ್ಯಾಂಗೆ ನೀರು ಸಂಗ್ರಹಣೆಗೆ ಅನುಕೂಲವಾಗಲಿದೆ. ಸದ್ಯ ಹಿಪ್ಪರಗಿ ಬ್ಯಾರೇಜ್‌ನಿಂದ 33 ಸಾವಿರ ಕ್ಯುಸೆಕ್ ನೀರು ಆಲಮಟ್ಟಿ ಡ್ಯಾಂಗೆ ಹೊರ ಬಿಡಲಾಗುತ್ತಿದೆ.

**ಮಹಾ ಮೊಂಡುವಾದ**

**ಜಿಲ್ಲೆಯ ಜಮಖಂಡಿ, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕುಗಳಲ್ಲಿ ಒಂದೂವರೆ ತಿಂಗಳ ಹಿಂದೆ ಕುಡಿವ ನೀರಿಗೆ ಹಾಹಾಕಾರವಿತ್ತು. ಆಗ ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳ ಶಾಸಕರು, ಸಚಿವರು ಮಹಾರಾಷ್ಟ್ರದಿಂದ ನೀರು ಬಿಡಿಸುವಂತೆ ಸರಕಾರಕ್ಕೆ ಮನವಿ ಮಾಡಿದ್ದರು. ಸಿಎಂ ಸಿದ್ದರಾಮಯ್ಯ ರಂದು ಖುದ್ದು ಮಹಾರಾಷ್ಟ್ರ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್‌ಗೆ ಪತ್ರ ಬರೆದಿದ್ದರು. ಕೃಷ್ಣಾ ನದಿಗೆ ಕೊಯ್ನಾ ಡ್ಯಾಂನಿಂದ 2 ಟಿಎಂಸಿ ನೀರು ಹರಿಸಬೇಕು ಎಂದು ಕೇಳಿದ್ದರು. ಸಿಎಂ ಪತ್ರಕ್ಕೆ ಮಹಾರಾಷ್ಟ್ರ ಸರಕಾರದಿಂದ ಉತ್ತರ ಬರಲಿಲ್ಲ, ನೀರೂ ಬಿಡಲಿಲ್ಲ.**



ಉದಯವಾಹಿನಿ ಚಿತ್ರ

**ಘಟಪ್ರಭೆ ಒಡಲೂ ಖುಷಿ**

**ಮಹಾರಾಷ್ಟ್ರ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯ ಘಟಪ್ರಭಾ ನದಿಯಲ್ಲೂ ಕಳೆದ ಎರಡು ದಿನಗಳಿಂದ ನೀರಿನ ಮಟ್ಟದಲ್ಲಿ ಹೆಚ್ಚಳ ಕಂಡುಬಂದಿದೆ. ಆ ಮೂಲಕ ಜಲರಾಶಿಯಿಂದ ಕಂಗೊಳಿಸುತ್ತಿದೆ.**

ಪ್ರತಿ ವರ್ಷ ಬೇಸಿಗೆಯಲ್ಲಿ 4 ಟಿಎಂಸಿ ನೀರು ಬಿಡಬೇಕು ಎಂಬ ಷರತ್ತು ಪಕ್ಕದ ರಾಜ್ಯ ಪಾಲಿಸಲಿಲ್ಲ. ಇದೀಗ ಮಹಾರಾಷ್ಟ್ರದಿಂದ ನೈಸರ್ಗಿಕವಾಗಿ ನೀರು ಹರಿದುಬರುತ್ತಿದೆ. ವರ್ಷಧಾರೆ ಮುಂದುವರಿದರೆ ಮಹಾರಾಷ್ಟ್ರ ಅಪಾರ ಪ್ರಮಾಣದ ನೀರು ತನ್ನ ಡ್ಯಾಂಗಳ ಮೂಲಕ ಹೊರಹಾಕಲಿದೆ. ನೀರಿನ ಪ್ರಮಾಣ 4 ಲಕ್ಷ ಕ್ಯುಸೆಕ್ ದಾಟಿದರೆ ಜಿಲ್ಲೆಯಲ್ಲಿ ನೆರೆ ಎದುರಾಗುವ ಸಾಧ್ಯತೆಯಿದೆ.

- **ಬೇಸಿಗೆಯಲ್ಲಿ ಗೋಗರೆದರೂ ನೀರು ಕೊಡದ ಪಕ್ಕದ ರಾಜ್ಯ - ವರ್ಷಧಾರೆಯಿಂದ ಹರಿಯಿತು ಜೀವಜಲ**
- **ಸದ್ಯ ಹಿಪ್ಪರಗಿ ಬ್ಯಾರೇಜ್‌ನಿಂದ 33 ಸಾವಿರ ಕ್ಯುಸೆಕ್ ನೀರು ಆಲಮಟ್ಟಿ ಡ್ಯಾಂಗೆ ಹೊರ ಬಿಡಲಾಗುತ್ತಿದೆ.**
- **ಜಿಲ್ಲೆಯ ಜಮಖಂಡಿ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕುಗಳಲ್ಲಿ ಒಂದೂವರೆ ತಿಂಗಳ ಹಿಂದೆ ಕುಡಿವ ನೀರಿಗೆ ಹಾಹಾಕಾರವಿತ್ತು**

**ಘಟಪ್ರಭೆ ಒಡಲೂ ಭರ್ತಿ**

ನೆರೆ ರಾಜ್ಯ ದಶಕಗಳಿಂದ ಬೇಸಿಗೆ ಅವಧಿಯಲ್ಲಿ ನೀರಿನ ವಿಷಯವಾಗಿ ಮೊಂಡುವಾದ ಅನುಸರಿಸುತ್ತಿದೆ. ಬೇಸಿಗೆಯಲ್ಲಿ ನೀರು ವಿನಿಮಯದ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕು.

ಭಾರಿ ಮಳೆ ಸುರಿದರೆ ಮಹಾರಾಷ್ಟ್ರ ಅಪಾರ ಪ್ರಮಾಣದ ನೀರು ಹೊರಬಿಟ್ಟು ಕರ್ನಾಟಕದಲ್ಲಿ ಪ್ರವಾಹ ಸ್ಥಿತಿಗೆ ಕಾರಣವಾಗುತ್ತದೆ ಎಂದಿದ್ದಾರೆ ಅಶೋಕ ಚಂದರಗಿ, ಸಾಮಾಜಿಕ ಕಾರ್ಯಕರ್ತ, ಕೆಲವು ದಿನಗಳ ಹಿಂದೆ ನದಿ ಬರಿದಾಗುತ್ತಾ ಸಾಗಿದ ಹಿನ್ನೆಲೆಯಲ್ಲಿ ಹಿಡಕಲ್ ಜಲಾಶಯದಿಂದ ನದಿಗೆ ಮತ್ತು ಕಾಲುವೆಗಳಿಗೆ ನೀರು ಹರಿಸಲಾಗಿತ್ತು. ಇದಾದ ಎರಡು ದಿನಗಳ ಬಳಿಕ ಜಿಲ್ಲೆಯಲ್ಲಿ ವರ್ಷಧಾರೆ ಆರಂಭವಾಗಿದ್ದರಿಂದ ನದಿ ರಭಸವಾಗಿ ಹರಿಯಲು ಶುರುವಾಗಿತ್ತು.

ಕಳೆದ 15 ದಿನಗಳ ಹಿಂದೆಯಷ್ಟೇ ನೀರಿಗೆ ಪ್ರಯಾಸಪಡುತ್ತಿದ್ದ ರೈತರು ಈಗ ನದಿಯಲ್ಲಿನ ನೀರು ಮತ್ತು ಮಳೆಯಿಂದ ಸಂತಸಪಟ್ಟಿದ್ದಾರೆ. ಜಮೀನುಗಳಿಗೀಗ ನೀರು ಹಾಯಿಸುವುದರ ಜತೆಗೆ ಕೃಷಿ ಚಟುವಟಿಕೆ ಶುರು ಮಾಡಿಕೊಂಡಿದ್ದಾರೆ. ಮಳೆ ಬಿಡುವು ಕೊಟ್ಟರೆ ಬಿತ್ತನೆಗೆ ಮುಂದಾಗಲಿದ್ದಾರೆ.

## ಕೋವಿಡ್ ಮುಂಜಾಗ್ರತೆ ಕ್ರಮಕ್ಕೈಗೊಳ್ಳಿ: ಬಿ.ಆನಂದ್

• ಉದಯವಾಹಿನಿ ಚಿತ್ರದುರ್ಗ

ರಾಜ್ಯದಲ್ಲಿ ಕೊರೋನಾ ವೈರಸ್ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಈ ಕುರಿತು ಸರ್ಕಾರದಿಂದ ಕಟ್ಟುನಿಟ್ಟಾಗಿ ಮಾರ್ಗಸೂಚಿ ಹೊರಡಿಸಿದ್ದು, ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಚಿತ್ರದುರ್ಗ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಬಿ.ಆನಂದ್ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಚಿತ್ರದುರ್ಗ ತಾಲ್ಲೂಕು ಪಂಚಾಯಿತಿಯ ಮೊದಲನೇ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಂಗಾರು ಉತ್ತಮ ರೀತಿಯಲ್ಲಿ ಆಗಿದ್ದು, ರೈತರಿಗೆ ಯಾವುದೇ ತೊಂದರೆ ಆಗದಂತೆ ಉತ್ತಮ ಗುಣ ಮಟ್ಟದ ಬಿತ್ತನೆ ಬೀಜ ವಿತರಿಸಲು ಕೃಷಿ ಇಲಾಖೆ ವತಿಯಿಂದ ಅಗತ್ಯ ಕ್ರಮವಹಿಸಲು ತಿಳಿಸಿದರು.



ಉದಯವಾಹಿನಿ ಚಿತ್ರ

ತೋಟಗಾರಿಕೆ ಇಲಾಖೆ, ರೇಷ್ಮೆ, ಗ್ರಾಮೀಣ ಕುಡಿ ಇಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಪಶುಪಾಲನಾ ಇಲಾಖೆ, ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು. ಸಭೆಯಲ್ಲಿ ಚಿತ್ರದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವೈ.ರವಿ ಕುಮಾರ್, ಯೋಜನಾಧಿಕಾರಿ ರಾಘವೇಂದ್ರ, ಲೆಕ್ಕಾಧಿಕಾರಿ ಕೆಂಚಪ್ಪ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಮಹಿಳೆಯರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ: ಡಾ.ಅನುಪಮಾ

• ಉದಯವಾಹಿನಿ ಕಲಬುರಗಿ

ಮಹಿಳೆಯರು ತಮ್ಮ ಆರೋಗ್ಯಕ್ಕೆ ಸಂಬಂಧಿಸಿಂತೆ ಯಾವುದೇ ಸಮಸ್ಯೆಯಿದ್ದರೆ, ಮುಜುಗರ, ಹಿಂಜರಿಕೆಯ ಮನೋಭಾವದಿಂದ ವೈದ್ಯರನ್ನು ಕಾಣದೆ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ. ಇದು ಮುಂದೆ ಅವರಿಗೆ ದೊಡ್ಡ ಸಮಸ್ಯೆ ಯಾಗುತ್ತದೆ. ಆದ್ದರಿಂದ ಮಹಿಳೆಯರು ತಮ್ಮ ಆರೋಗ್ಯದ ಏನಾದರೂ ಸಮಸ್ಯೆಯಿದ್ದರೆ ಮುಜುಗರ ಪಡದೆ ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ, ಸಲಹೆ ಪಡೆದು ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ವೈದ್ಯಾಧಿಕಾರಿ ಡಾ. ಅನುಪಮಾ ಎಸ್.ಕೇಶ್ವಾರ ಮಹಿಳೆಯರಿಗೆ ಸಲಹೆ ನೀಡಿದರು.

ನಗರದ ಶಹಾಬಜಾರ ಮಹಾದೇವ ನಗರದಲ್ಲಿನ ಸ್ವಾತಿ ಪ್ರೌಢಶಾಲೆ ಯಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಏರ್ಪ ಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ಆರೋಗ್ಯ ಸಂರಕ್ಷಣಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮಹಿಳೆಯರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಮಾಸಿಕ ಋತುಸ್ರಾವದ ಸಮಸ್ಯೆಯಿರುವವರು,



ಉದಯವಾಹಿನಿ ಚಿತ್ರ

**ಮಹಿಳಾ ಆರೋಗ್ಯ ಸಂರಕ್ಷಣಾ ದಿನಾಚರಣೆ**

ಅದರಲ್ಲಿಯೂ ಬಿಳಿ ಸೆರಗಿನ ತೊಂದರೆಯಿಂದ ಬಳಲುತ್ತಿರುವವರು, ಆರಂಭದಲ್ಲಿಯೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು. ಒಂದು ವೇಳೆ ಇದರ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಅದು ಮುಂದೆ ಕ್ಯಾನ್ಸರ್ರಾಗಿ ಪರಿವರ್ತನೆಯಾಗುತ್ತದೆ.

ರಕ್ತಹೀನತೆ, ರಕ್ತಸ್ರಾವ, ಮೈಗ್ರೇನ್, ಅಶಕ್ತತೆ, ಜಂತುಹುಳದ ತೊಂದರೆ, ಸ್ತನ ಹಾಗೂ ಗರ್ಭಕೋಶದ ಕ್ಯಾನ್ಸರ್, ಮಧುಮೇಹ ಮತ್ತು ಅಧಿಕ ರಕ್ತದೊತ್ತಡ, ಬೊಜ್ಜುತನ, ಹೈಪೋಥೈರಾಯಿಡಿಸಮ್, ಮಾನಸಿಕ ತೊಂದರೆಯಂತಹ ಕೆಲವು ಸಮಸ್ಯೆಗಳು ಮಹಿಳೆಯರಲ್ಲಿ ಹೆಚಾಗಿ ಕಂಡು ಬರುತ್ತವೆ ಎಂದರು.

## ನರೇಗಾ ಕೂಲಿ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಬಳ್ಳಾರಿ

ಬಾಕಿ ಇರುವ ನರೇಗಾ ಕೂಲಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಜಿಪಂ ಮುಂದೆ ಎಐಕೆಕೆಎಂಎಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯ್ತು.

ಕಳೆದ ಏ.1 ರಿಂದ ನರೇಗಾ ಕೂಲಿ ಕೆಲಸ ಮಾಡಿದೆ. ಆದರೆ ಈ ವರೆಗೆ ಮಾಡಿದ ಕೆಲಸಕ್ಕೆ ಕೂಲಿ ಹಣ ಬಿಡುಗಡೆ ಮಾಡಿಲ್ಲ. ಕೂಡಲೇ ಬಿಡುಗಡೆ ಮಾಡಬೇಕು. ಪ್ರತಿಯೊಂದು ಕುಟುಂಬಕ್ಕೂ ಅವರ ಕೋರಿಕೆಯ ಮೇರೆಗೆ 100 ದಿನ ಕೆಲಸ ನೀಡಬೇಕು. ಪ್ರಯೊಬ್ಬರಿಗೂ ಪೂರ್ಣ ಕೂಲಿ ರೂ 370 ಗಳು ದೊರೆಯುವಂತೆ ಕ್ರಮ ವಹಿಸಬೇಕು. ನರೇಗಾ ಯೋಜನೆಯಡಿ ಇವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು ಎಂದು ಮನವಿ ಮಾಡಲಾಗಿದೆ. ಪ್ರತಿವರ್ಷ ನರೇಗಾ ಕೆಲಸ ಮಾಡಿದ 5 ರಿಂದ 10 ದಿನಗಳಲ್ಲಿ ಕೂಲಿ ಹಣ ಪಾವತಿಯಾಗುತ್ತಿತ್ತು. ಆದರೆ ಈ ವರ್ಷ ಬಿಡುಗಡೆಯಾಗಿಲ್ಲ. ಮೆಣಸಿನಕಾಯಿ ಬೆಳಗಾರರೂ ಮತ್ತು ಭತ್ತ ಬೆಳೆಗಾರರು ತಾವು ಈ ಬಾರಿ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ತುಂಬಾ ನಷ್ಟ ಅನುಭವಿಸಿದ್ದಾರೆ, ಈ ಬಾರಿ ಅವರು ಯಾವ ರೀತಿಯ ಹಣವನ್ನೂ ಸಹ ಕೂಡಿಟ್ಟಿಲ್ಲ.




ಉದಯವಾಹಿನಿ ಚಿತ್ರ

ಇಂತಹ ಪರಿಸ್ಥಿತಿಯಲ್ಲಿ ಈ ಭಾಗದ ಜನ ಸಾಮಾನ್ಯರು ಗುಳೆ ಹೋಗಬೇಕಾದ ಪರಿಸ್ಥಿತಿ ಎದುರಾಗಿತ್ತು. ಆದರೆ ಈ ಭಾಗದಲ್ಲಿ ಜನರಿಗೆ ದೊರೆಯುವ ನರೇಗಾ ಕೆಲಸದ ಆಧಾರದ ಮೇಲೆ ಇಲ್ಲಿನ ಜನ ಗುಳೆ ಹೋಗುವುದನ್ನು ನಿಲ್ಲಿಸಿದ್ದಾರೆ. ಯೋಜನೆಯಲ್ಲಿ ಈಗ ಕೆಲಸ ಮಾಡಿ, ಎರೆಡು ತಿಂಗಳು ಕಳೆದರೂ ಸಹ ಅವರಿಗೆ ದೊರೆಯಬೇಕಿದ್ದ ಕೂಲಿಯು ಇನ್ನು ದೊರೆಯದಿರುವುದು ಅವರನ್ನು ಮತ್ತು ಅವರ ಕುಟುಂಬವನ್ನು ಸಂಕಷ್ಟಕ್ಕೆ ನೂಕಿದಂತಾಗಿದೆ.

## ರೈಲ್ವೆ ಇಲಾಖೆಯಲ್ಲಿ ಮಾಜಿ ಸೈನಿಕರಿಗೆ ಉದ್ಯೋಗಾವಕಾಶ

• ಉದಯವಾಹಿನಿ , ಚಿತ್ರದುರ್ಗ

ರೈಲ್ವೆ ಇಲಾಖೆಯ ಸೆಕ್ಯೂರಿಟಿ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ಮಾಜಿ ಸೈನಿಕರನ್ನು ಭರ್ತಿ ಮಾಡಿಕೊಳ್ಳುತ್ತಿದ್ದು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಆಸಕ್ತ ಮಾಜಿ ಸೈನಿಕರಿಗೆ ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಮೇ 27ರವರಗೆ ಕಾಲಾವಕಾಶ ನೀಡಲಾಗಿತ್ತು. ಒಟ್ಟು 48 ಮಾಜಿ ಸೈನಿಕರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುತ್ತಾರೆ.

ನೋಂದಾಯಿತರ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿದ್ದು, ಈ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದರೆ ಇದೇ ಮೇ30 ಒಳಗೆ ಕಚೇರಿಯಲ್ಲಿ ಸಲ್ಲಿಸಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ.ಸಿ.ಎ.ಹಿರೇಮಠ ತಿಳಿಸಿದ್ದಾರೆ.

## ಪೌರಕಾರ್ಮಿಕ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಜೆಡಿಎಸ್ ಬೆಂಬಲ



ಉದಯವಾಹಿನಿ ಚಿತ್ರ

• ಉದಯವಾಹಿನಿ ಇಂಡಿ

ಪೌರಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಂಡಿ ಪುರಸಭೆಯ ಮುಂಬಾಗದಲ್ಲಿ ಹಮ್ಮಿಕೊಂಡ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಜೆಡಿಎಸ್ ಮುಖಂಡರಾದ ಬಿ ಡಿ ಪಾಟೀಲರು ಬೆಂಬಲ ವ್ಯಕ್ತಪಡಿಸಿದರು. ಜೆಡಿಎಸ್ ಮುಖಂಡರಾದ ಶ್ರೀಶೈಲ ಗೌಡ ಪಾಟೀಲ್, ಅಯೂಬ್ ನಾಟೀಕರ,ಪಜಲು ಮುಲ್ಲಾ, ಹಾಗೂ, ಸುನೀಲ ಕಾಲೇಬಾಗ ಹಾಗೂ ಮುಂತಾದವರು ಉಪಸ್ಥಿತರಿದ್ದರು. ಪೌರಕಾರ್ಮಿಕ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

**ಪೌರಕಾರ್ಮಿಕ ನ್ಯಾಯಯುತ ಬೇಡಿಕೆಗೆ ಆಳುವ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತ ಪೌರಕಾರ್ಮಿಕ ನ್ಯಾಯಯುತ ಹಾಗೂ ಸಂವಿಧಾನ ಬದ್ದ ಹಕ್ಕಿಗೆ ಆಳುವ ಸರ್ಕಾರದ ಧೋರಣೆ ಖಂಡನಾರ್ಹವಾಗಿದೆ .ನಮ್ಮ ನಾಯಕರಾದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿಯವರ ಗಮನಕ್ಕೆ ಪೌರಕಾರ್ಮಿಕರ ಬೇಡಿಕೆಯನ್ನು ತರುವುದಾಗಿ ಮಾತನಾಡಿದರು.**

**-ಬಿ ಡಿ ಪಾಟೀಲ, ಜೆಡಿಎಸ್ ಮುಖಂಡ**

**ಪೌರಕಾರ್ಮಿಕರನ್ನು ಹೊರಗುತ್ತಿಗೆಯ ಆಧಾರದಲ್ಲಿ ನೇಮಕ ಮಾಡಿಕೊಳ್ಳದೆ ಸರಕಾರವು ಅವರನ್ನು ನೇರ ನೇಮಕಾತಿ ಮಾಡಬೇಕು ಕಾಂಟ್ರಾಕ್ಟ್ ಮುಖಾಂತರ ನೇಮಿಸುವುದನ್ನು ನಿಲ್ಲಿಸಬೇಕು ,ಕಾಂಟ್ರಾಕ್ಟ್ ಮೂಲಕದ ನೇಮಕಾತಿಯೂ ದೊಡ್ಡ ಲಾಬಿ ಇದೆ ಪೌರ ಕಾರ್ಮಿಕರ ದುಡಿಮೆಯಿಂದ ಕಾಂಟ್ರಾಕ್ಟ್ ಪಡೆದವರು ತಮ್ಮ ಲಾಭವನ್ನು ಗಳಿಸುವುದು, ಇದು ಒಂದು ದಂದೆಯಾಗಿ ಬಿಟ್ಟಿದೆ ಎಂದು ಮಾತನಾಡಿದರು.**

**-ಶಿವು ಬಗಲಿ, ಕ. ರ. ವೆ. ಇಂಡಿ ತಾಲ್ಲೂಕ ಅಧ್ಯಕ್ಷರು ಹಾಗೂ ಬಿಜೆಪಿ ಮುಖಂಡ**

## ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮುಷ್ಕರ

• ಉದಯವಾಹಿನಿ ಚಿತ್ತಾಪುರ

ಎಲ್ಲಾ ನಗರ ಸ್ಥಳಿಯ ಸಂಸ್ಥೆಯ ನೌಕರರನ್ನು ರಾಜ್ಯ ಸರ್ಕಾರ ನೌಕರರೆಂದು ಪರಿಗಣಿಸಿ ಹಾಗೂ ಜ್ಯೋತಿ ಸಂಜೀವಿನಿ, ಕೆ.ಜಿ.ಐ.ಡಿ ಸೇರಿದಂತೆ ಸರ್ಕಾರಿ ನೌಕರರು ಪಡೆಯುವ ಎಲ್ಲಾ ಸೌಲಭ್ಯವನ್ನು ನೀಡಬೇಕೆಂಬ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ನೇತೃತ್ವದಲ್ಲಿ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ ಪ್ರಯುಕ್ತ ಚಿತ್ತಾಪುರ ಶಾಖೆ ವತಿಯಿಂದ ಪುರಸಭೆ ಕಚೇರಿ ಎದುರು ಪೌರಕಾರ್ಮಿಕರು ಮುಷ್ಕರ ನಡೆಸಿದ್ದಾರೆ.

ಸಂಘದ ತಾಲ್ಲೂಕು ಅಧ್ಯಕ್ಷ ಸಾಬಣ್ಣ ಸಿ.ಕಾಶಿ ಮಾತನಾಡಿ, ರಾಜ್ಯಾದ್ಯಂತ ಕರ್ತವ್ಯಕ್ಕೆ ಪೌರ ನೌಕರರು ಗೈರು, ಕಸ ಸಂಗ್ರಹ ವಿಲೇವಾರಿ, ಸ್ವಚ್ಚತೆ, ನೀರು ಪೂರೈಕೆ, ಒಳಚರಂಡಿ, ನಿರ್ವಹಣೆ ಸ್ಥಗಿತಗೊಳಿಸಿ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತಿದೆ ಎಂದು ಹೇಳಿದರು. ಸಂಘದ ಬೇಡಿಕೆಗಳನ್ನು ಈಡೇರಿಸುವವರಿಗೆ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಮಾಡಲು ಸೂಚಿಸಿದಂತೆ ಚಿತ್ತಾಪುರ ಪುರಸಭೆಗೆ ಸಂಬಂಧ ಪಟ್ಟ ಕೆಲಸಗಳನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ವೆಂಕಟೇಶ್ ಜೈಗುರು, ಖಜಾಂಚಿ ಕ್ರಾಂತಿದೇವಿ ಸೇರಿದಂತೆ ಪೌರ ನೌಕರರು ಇದ್ದರು.




ಉದಯವಾಹಿನಿ ಚಿತ್ರ

## ಕ್ರಿಕೆಟ್ ಬೆಟ್ಟಿಂಗ್: ಓರ್ವನ ಬಂಧನ

• ಉದಯವಾಹಿನಿ ಕಲಬುರಗಿ

ಇಲ್ಲಿನ ಸುನೀಲ ನಗರದ ಫಿಲ್ಟರ್ ಬೆಡ್‌ನ ಹನುಮಾನ ಗುಡಿಯ ಹಿಂಭಾಗದ ಕಟ್ಟೆಯ ಮೇಲೆ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ನಡೆಯುತ್ತಿದೆ ಎಂಬ ಮಾಹಿತಿ ಮೇಲೆ ಚೌಕ್ ಪೊಲೀಸ್ ಠಾಣೆಯ ಎಎಸ್‌ಐ ಶಿವಶರಣಪ್ಪ, ಸಿಬ್ಬಂದಿಗಳಾದ ಶಿವಾನಂದ, ಸುರೇಶ, ಮೋಸಿನ್, ಸೈಯದ್ ತೌಸಿಫ್ ಹುಸೇನ್ ಅವರು ದಾಳಿ ನಡೆಸಿ ಓರ್ವನನ್ನು ಬಂಧಿಸಿದ್ದಾರೆ. ಆಳಂದ ತಾಲ್ಲೂಕಿನ ಚಿಂಚನಸೂರ ಗ್ರಾಮದ ಮಹಾರುದ್ರಪ್ಪ ತಂದೆ ಚನ್ನಮಲ್ಲಪ್ಪ ಗುಮ್ಮಾ (34) ಎಂಬಾತನನ್ನು ಬಂಧಿಸಿ 5 ಸಾವಿರ ರೂ.ನಗದು ಜಪ್ತಿ ಮಾಡಿದ್ದಾರೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕೃತಿಯನ್ನು ಕಲಿಸಿ

• ಉದಯವಾಹಿನಿ ಹುಬ್ಬಳ್ಳಿ

ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಸಂಸ್ಕೃತಿಯನ್ನು ಕಲಿಸಿರಿ ಎಂದು ಶಾಸಕರಾದ ಮಹೇಶ ಟೆಂಗಿನಕಾಯಿ ಅವರು ಹೇಳಿದರು.ನಗರದ ಬಿವಿಬಿ ಇಂಜಿನಿಯರಿಂಗ್ ಕಾಲೇಜ್, ದೇಶಪಾಂಡೆ ಫೌಂಡೇಶನ್ ಆಡಿಟೋರಿಯಂ ಹಾಲ್‌ನಲ್ಲಿ ನಡೆದ ಬಣಗಾರ ಸಮಾಜದ ರಾಷ್ಟ್ರಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳನ್ನು ಶಿಕ್ಷಿತರನ್ನಾಗಿ ಅಷ್ಟೇ ಮಾಡದೇ ಸುಸಂಸ್ಕೃತರನ್ನಾಗಿ ಮಾಡಬೇಕೆಂದು ಪಾಲಕರಿಗೆ ಕಿವಿಮಾತು ಹೇಳಿದರು. ಬೆಳಗಾವಿ ಕೆಎಲ್‌ಇ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಅವಿನಾಶ ಕವಿ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣದ ಬಗ್ಗೆ ಉಪನ್ಯಾಸ ನೀಡಿದರು.



ಉದಯವಾಹಿನಿ ಚಿತ್ರ

ಸಾನಿಧ್ಯ ವಹಿಸಿದ್ದ ಶ್ರೀ ಮ.ನಿ. ಜಗದ್ಗುರು ಡಾ. ಗುರುಸಿದ್ಧ ರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ, ಸಮಾಜದವರು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಮಾರ್ಗದರ್ಶನ ನೀಡಿದರು.

## ಬಿತ್ತನೆ ಕೊಂಬೋತ್ಸವ



ಉದಯವಾಹಿನಿ ಚಿತ್ರ

• ಉದಯವಾಹಿನಿ ಸಿರಿಗೇರಿ

ಸಿರುಗುಪ್ಪ ತಾಲ್ಲೂಕು ಸಿರಿಗೇರಿ ಗ್ರಾಮದಲ್ಲಿ ರೈತ ಸಮುದಾಯದಿಂದ ಮತ್ತು ಗ್ರಾಮಸ್ಥರಿಂದ ಬಿತ್ತನೆ ಕೊಂಬೋತ್ಸವ ಆಚರಿಸಲಾಯಿತು. ಈ ವರ್ಷ ಮುಂಗಾರು ಮಳೆ ಪ್ರಾರಂಭದಲ್ಲಿಯೇ ಚೆನ್ನಾಗಿ ಬಂದಿದ್ದು, ರೈತರಲ್ಲಿ ಬಿತ್ತನೆ ಕಾರ್ಯ ಕೈಗೊಳ್ಳಲು ಉತ್ಸಾಹ ತುಂಬಿದೆ.

ಪ್ರತಿವರ್ಷ ಮುಂಗಾರು ಸಮಯದಲ್ಲಿ ಗ್ರಾಮದಲ್ಲಿನ ರೈತರು ತಮ್ಮ ಜಮೀನುಗಳಲ್ಲಿ ಬೀಜ ಬಿತ್ತನೆ ಮಾಡುವ ಮುಂಚೆ, ಗ್ರಾಮದ ಆದಿ ದೇವತೆ ಮಾರೆಮ್ಮ ದೇವಿ ಮತ್ತು ಸುಂಕ್ಲಮ್ಮ ದೇವಿಯರಿಗೆ ವಿಶೇಷ ಪೂಜೆ, ಎಡೆ ಅರ್ಪಿಸಿ ಕುಂಭಗಳನ್ನು ಮಾಡುವುದು ಗ್ರಾಮದ ವಾಡಿಕೆಯಾಗಿದೆ. ಗ್ರಾಮದ ಕುರುಬರ ಸಮುದಾಯದಿಂದ ಮತ್ತು ಬಾರಿಕರ ಸಮುದಾಯದಿಂದ ಕುಂಭಗಳನ್ನು ಹೊರಲಾಗುತ್ತದೆ. ಇದರಿಂದ ಹೋಬಳಿಯಲ್ಲಿ ಸಮೃದ್ಧ ಮಳೆಯಾಗಿ, ಉತ್ತಮ ಬೆಳೆ ಬಂದು, ರೈತಾಪಿ ವರ್ಗಕ್ಕೇ ಮತ್ತು ಸಮಸ್ತ ಜನರಿಗೆ ಒಳಿತಾಗಲಿ ಎಂದು ದೇವರಲ್ಲಿ ಈ ಕುಂಬೋತ್ಸವದಿಂದ ವಿಶೇಷ ಪ್ರಾರ್ಥನೆ ಮಾಡಿಕೊಳ್ಳಲಾಗುತ್ತದೆ.

● ಬಂದ್ ಆಗುವ ಭೀತಿಯಿಂದ ಸ್ಥಳೀಯ ನಿವಾಸಿಗಳು ರಸ್ತೆ ಸಮಸ್ಯೆ ಬಗ್ಗೆ ಮಾತನಾಡಲು ಹೆದರುತ್ತಿದ್ದಾರೆ

# ಬೆಂಗಳೂರು-ಮಂಗಳೂರು ಸಂಪರ್ಕಿಸುವ ರಾ. ಹೆದ್ದಾರಿ ಶಿರಾಡಿ ಸಂಚಾರ ಅಪಾಯಕಾರಿ

• ಉದಯವಾಹಿನಿ ಹಾಸನ

ಮುಂಗಾರು ಮಳೆ ಆರ್ಭಟದ ಪರಿಣಾಮ ರಾಷ್ಟ್ರೀಯ ಹೆದ್ದಾರಿ ಶಿರಾಡಿ ರಸ್ತೆ ಕೆಸರುಮಯವಾಗಿದ್ದು, ಹಳ್ಳಕೊಳ್ಳ ತುಂಬಿ ನದಿಯಾಗಿ ಹರಿಯುತ್ತಿದೆ. ಒಂದೆಡೆ ಗುಡ್ಡ ಕುಸಿದಿದ್ದು, ಇನ್ನು ಹಲವು ಕಡೆ ಕುಸಿತದ ಮುನ್ಸೂಚನೆ ನೀಡಿದೆ.

ಈ ಬಾರಿಯೂ ಶಿರಾಡಿ ಸಂಚಾರ ಅಪಾಯಕಾರಿ ಎಂಬ ಮುನ್ನೆಚ್ಚರಿಕೆ ನೀಡಿದೆ. ಬೆಂಗಳೂರು-ಮಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಶಿರಾಡಿ ರಸ್ತೆ ಕಾಮಗಾರಿ ಆಮೆವೇಗ ಹಾಗೂ ಅವೈಜ್ಞಾನಿಕ ಕಾರಣದಿಂದ ವಾಹನ ಸಂಚಾರ ದುಸ್ತರವಾಗಿದೆ.

ಹಾಸನದಿಂದ ಸಕಲೇಶಪುರಕ್ಕೆ ಕೇವಲ 20ರಿಂದ 25 ನಿಮಿಷದಲ್ಲಿ ತಲುಪಬಹುದು. ಆದರೆ ಆನೆಮಹಲ್‌ನಿಂದ ಮುಂದೆ ಸಾಗಿ ಮಂಜ್ರಾಬಾದ್ ತಿರುವು ತಲುಪುವಷ್ಟರಲ್ಲಿ ರಸ್ತೆಯ ಕರಾಳ ದರ್ಶನವಾಗುತ್ತದೆ. ಅಲ್ಲಿಂದ ಮಾರನಹಳ್ಳಿವರೆಗೂ ನರಕ ಸದೃಶ್ಯವಾಗಿದೆ. ಕಳೆದ ವರ್ಷ ದೊಡ್ಡತಪ್ಪಲೆ ಬಳಿ ಭಾರಿ ಪ್ರಮಾಣದ ಭೂ ಕುಸಿತವಾಗಿದ್ದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ವಹಿಸಿ ಜೂನ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆ ಕಂಪನಿಗೆ ಜಿಲ್ಲಾಡಳಿತ, ಸರಕಾರ ಸೂಚನೆ ನೀಡಿತ್ತು. ಹೆದ್ದಾರಿ ಕಾಮಗಾರಿ ವಿಳಂಬ ಗತಿಯಲ್ಲಿ ಸಾಗಿದ ಪರಿಣಾಮ ಹಾಗೂ ಅಡೆತಡೆಯಿಂದ ಅಪೂರ್ಣವಾಗಿದೆ. ಒಂದು ಮಾರ್ಗದ ಕಾಮಗಾರಿಯೂ ಪೂರ್ಣಗೊಳ್ಳದೆ ಗುಂಡಿ ಬಿದ್ದಿದೆ. ಇದರಿಂದಾಗಿ ನೀರಿನಿಂದ ತುಂಬಿರುವ ಹಳ್ಳದಲ್ಲಿ ವಾಹನ ಸಂಚರಿಸಬೇಕಾದ ಅನಿವಾರ್ಯತೆ ಹಾಗೂ ಆತಂಕ ಸೃಷ್ಟಿಯಾಗಿದೆ.



ಉದಯವಾಹಿನಿ ಚಿತ್ರ

**ಕಾಮಗಾರಿ ವಿಳಂಬದಿಂದ ರಸ್ತೆ ದುರವಸ್ಥೆ**

ರಸ್ತೆ ಅವ್ಯವಸ್ಥೆಯಿಂದ ಸಕಲೇಶಪುರ ತಾಲ್ಲೂಕು ರಾಟೆಮನೆ ಬಳಿ ಮಂಗಳೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಮೀನು ಸಾಗಣೆ ಲಾರಿ, ಚಾಲಕನ ನಿಯಂತ್ರಣ ತಪ್ಪಿ ರಸ್ತೆಗೆ ಮಗುಚಿ ಬಿದ್ದಿತ್ತು. ರಸ್ತೆ ಸಂಚಾರ ಇಲ್ಲಿ ಎಷ್ಟು ಸುರಕ್ಷಿತ ಎಂಬುದಕ್ಕೆ ಇದು ನಿದರ್ಶನವಾಗಿದೆ. ಹೆದ್ದಾರಿಯಲ್ಲಿ ನಿತ್ಯ ಪ್ರಯಾಣಿಕರ ಹಾಗೂ ಸರಕು ಸಾಗಣೆ ವಾಹನ ಸೇರಿ ಹತ್ತಾರು ಸಾವಿರ ವಾಹನಗಳು ಸಂಚರಿಸುತ್ತಿದ್ದು, ಒಂದು ವಾಹನ ಕೆಟ್ಟು ನಿಂತರೆ ಅಥವಾ ಅಪಘಾತ ಸಂಭವಿಸಿದರೆ ಎನ್ನುವ ಆತಂಕ ಕಾಡುತ್ತಿದೆ. ಅದಕ್ಕಿಂತ ಮಿಗಿಲಾಗಿ ಒಂದು ಮರ, ಕಲ್ಲುಬಂಡೆ ಅಥವಾ ಗುಡ್ಡ ಉರುಳಿ ಬಿದ್ದರೆ ದೇವರೇ ಕಾಪಾಡಬೇಕು ಎನ್ನುವ ಸ್ಥಿತಿ ಇದೆ.

**ಜನತೆಗೆ ಆತಂಕ**

**ರಸ್ತೆ ಅವ್ಯವಸ್ಥೆ ಬಗ್ಗೆ ಹೋರಾಟ ಮಾಡಿ ಧ್ವನಿ ಎತ್ತಿದರೆ ಸರಕಾರ, ಜಿಲ್ಲಾಡಳಿತ ಎಲ್ಲಿ ರಸ್ತೆ ಸಂಚಾರ ನಿಷೇಧಿಸಿ ಆದೇಶ ಹೊರಡಿಸಿ ಬಿಡುತ್ತದೆಯೋ? ಇದರಿಂದ ಮತ್ತಷ್ಟು ಸಮಸ್ಯೆ ಅನುಭವಿಸಬೇಕಾದೀತು ಎಂಬ ಭಯದಿಂದ ಯಾರೊಬ್ಬರು ಮಾತನಾಡುತ್ತಿಲ್ಲಎನ್ನುತ್ತಾರೆ ಸ್ಥಳೀಯರು. ಹೆದ್ದಾರಿ ವಾಹನ ಸಂಚಾರವನ್ನೇ ನಂಬಿ ಹೋಟೆಲ್, ಟೀ, ಕಾಫಿ ಮತ್ತಿತರ ಅಂಗಡಿಗಳ ನೂರಾರು ಕುಟುಂಬಗಳು ಇವೆ. ಇವರೆಲ್ಲರೂ ಈ ಹಿಂದೆ ಸಮಸ್ಯೆ ಅನುಭವಿಸಿದ ಕಾರಣ ರಸ್ತೆ ಹೇಗಾದರೂ ಇರಲಿ, ಸಂಚಾರ ಇರಲಿ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.**

- **ಶಿರಾಡಿ ರಾಷ್ಟ್ರೀಯ ಹೆದ್ದಾರಿನಲ್ಲಿ ಕಾಮಗಾರಿ ವಿಳಂಬದಿಂದ ರಸ್ತೆ ಸ್ಥಿತಿಯು ದುಸ್ತರವಾಗಿದೆ, ಇದರಿಂದ ವಾಹನ ಸವಾರರಿಗೆ ಅಪಾಯ ಉಂಟಾಗಿದೆ.**
- **ಮೂಡಲಹಳ್ಳದ ಪ್ರದೇಶದಲ್ಲಿ ಭಾರಿ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ, ರಸ್ತೆ ಸಂಚಾರದಲ್ಲಿ ಅಡ್ಡಿ ಮತ್ತು ಭೂ ಕುಸಿತದ ಸಾಧ್ಯತೆ ಹೆಚ್ಚಾಗುತ್ತಿದೆ.**
- **ಬಂದ್ ಆಗುವ ಭೀತಿಯಿಂದ ಸ್ಥಳೀಯ ನಿವಾಸಿಗಳು ರಸ್ತೆ ಸಮಸ್ಯೆ ಬಗ್ಗೆ ಮಾತನಾಡಲು ಹೆದರುತ್ತಿದ್ದಾರೆ**

**ಯಂತ್ರಗಳ ಸದ್ದಿಲ್ಲ:** ಶಿರಾಡಿ ಹೆದ್ದಾರಿಯಲ್ಲಿ ಬೃಹತ್ ಗಾತ್ರದ ರಸ್ತೆ ಕಾಮಗಾರಿ ಯಂತ್ರಗಳು ಇವೆಯಾದರೂ ಎಲ್ಲವೂ ಸದ್ದು ನಿಲ್ಲಿಸಿವೆ. ಕಾಮಗಾರಿ ಸ್ಥಗಿತಗೊಂಡಿದೆ. ಈ ಬಗ್ಗೆ ಪ್ರಶ್ನಿಸಿದರೆ ಮಳೆಯಲ್ಲಿ ಹೇಗೆ ಕೆಲಸ ಮಾಡುವುದು ಎಂಬ ಸಿದ್ಧ ಉತ್ತರ ಬರುತ್ತಿದೆ. ಈ ಬಾರಿ ಮುಂಗಾರು ನಿಗದಿತ ಸಮಯಕ್ಕೆ ಮುನ್ನವೇ ಬರುತ್ತದೆ, ಹೆಚ್ಚಿನ ಮಳೆಯಾಗುತ್ತದೆ ಎಂಬ ಮುನ್ಸೂಚನೆ ಇದ್ದರೂ ಯುದ್ಧೋಪಾದಿಯಲ್ಲಿ ಕಾಮಗಾರಿ ಪೂರ್ಣಗೊಳಿಸದೆ ನಿರ್ಲಕ್ಷಿಸಿದ್ದು, ಪುನಃ ಸಮಸ್ಯೆ ಎದುರಿಸುವ ಸೂಚನೆ ನೀಡುತ್ತಿದೆ.

**ಧಾರಾಕಾರ ಮಳೆ**

**ಶಿರಾಡಿ ಘಾಟಿ ಭಾಗದಲ್ಲಿ ಮೋಡ ಸಂಪೂರ್ಣ ಮುಸುಕಿದ್ದು, ಮಳೆ ಆರ್ಭಟದಿಂದ ರಸ್ತೆಯೇ ಕಾಣದಂತೆ ಮಾಡಿದೆ. ಹಗಲು-ರಾತ್ರಿ ಎನ್ನದೆ ಬಿಡುವು ನೀಡದಂತೆ ಮಳೆ ಸುರಿಯುತ್ತಲೇ ಇದೆ. ಹೀಗಾಗಿ ಹಗಲಿನ ವೇಳೆಯಲ್ಲೇ ವಾಹನಗಳು ಲೈಟ್ ಹಾಕಿಕೊಂಡು ಸಂಚರಿಸುತ್ತಿರುವ ದೃಶ್ಯ ಕಂಡು ಬರುತ್ತಿದೆ.**

ಶಿರಾಡಿ ರಸ್ತೆ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಲು ಸೂಚನೆ ನೀಡಿದ್ದೇವೆ. ಮಳೆ ಆರ್ಭಟ ತೀವ್ರ ಹೆಚ್ಚಿದ್ದು, ಅನಾಹುತ ತಡೆಗೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದಿದ್ದಾರೆ ಸಿಮೆಂಟ್ ಮಂಜು, ಶಾಸಕರು, ಸಕಲೇಶಪುರ ಕ್ಷೇತ್ರ.

# ಪಾಕಿಸ್ತಾನಿಯರಿಗೆ ನರೇಂದ್ರ ಮೋದಿ ಸಂದೇಶ!

## ಪಾಕಿಸ್ತಾನದ ಭಯೋತ್ಪಾದನೆಗೆ ಅಂತ್ಯ ಹಾಡಲು ಯುವ ಸಮುದಾಯ ಮುಂದೆ ಬರಬೇಕು ಎಂದ ಪ್ರಧಾನಿ ಮೋದಿ

**ಅಹಮದಾಬಾದ್:** ರೊಟ್ಟಿ ತಿಂದು ಸುಖಜೀವನ ನಡೆಸುತ್ತೀರೋ ಅಥವಾ ನನ್ನ ಗುಂಡು ತಿಂದು ಐಸಿಯು ಸೇರುತ್ತೀರೋ ಎಂಬುದನ್ನು ಪಾಕಿಸ್ತಾನಿಯರು ನಿರ್ಧರಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ನೆರೆ ರಾಷ್ಟ್ರಕ್ಕೆ ಕಠಿಣ ಸಂದೇಶ ರವಾನಿಸಿದ್ದಾರೆ. ತಮ್ಮ ತವರು ರಾಜ್ಯ, ಗುಜರಾತ್‌ನ ವಡೋದರಾದಲ್ಲಿ ರೋಡ್ ಶೋ ನಡೆಸಿದ ಬಳಿಕ ಭುಜ್‌ನಲ್ಲಿ ಪ್ರಧಾನಿ ಮೋದಿ ಅಕ್ಷರಶಃ ಅಬ್ಬರಿಸಿದ್ದಾರೆ.

ಗುಜರಾತ್‌ನ ಭುಜ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಪಾಕಿಸ್ತಾನವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ನೀವು ಭಯೋತ್ಪಾದನೆಯಿಂದ ಏನು ಗಳಿಸಿದ್ದೀರಿ ಭಾರತ ಈಗಾಗಲೇ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರವಾಗಿ ಹೊರಹೊಮ್ಮಿದೆ. ಆದರೆ ನೀವು ಎಲ್ಲದ್ದೀರಿ ಎಂದು ಪ್ರಧಾನಿ ಮೋದಿ ಪಾಕಿಸ್ತಾನಿಯರನ್ನು ಉದ್ದೇಶಿಸಿ ಪ್ರಶ್ನೆ ಮಾಡಿದರು. ಭಯೋತ್ಪಾದನೆಯ ಕಾಯಿಲೆಯಿಂದ ಪಾಕಿಸ್ತಾನವನ್ನು ಅದರ ಜನರೇ ಗುಣಪಡಿಸಬೇಕು.

ಪಾಕಿಸ್ತಾನದ ಯುವಕರು ಭಯೋತ್ಪಾದನೆಯನ್ನು ಧಿಕ್ಕರಿಸಿ, ಅಭಿವೃದ್ಧಿ ಪಥವನ್ನು ಆಯ್ದು ಕೊಳ್ಳಬೇಕು ಅಲ್ಲಿನ ಯುವ ಸಮುದಾಯ ಪಾಕಿಸ್ತಾನವನ್ನು ಬದಲಾಯಿಸುವ ಇಚ್ಛಾಶಕ್ತಿ ತೋರಬೇಕು ಎಂದು ಪ್ರಧಾನಿ ಮೋದಿ ಇದೇ ವೇಳೆ ಸಲಹೆ ನೀಡಿದರು. ಸುಖ್ ಚೈನ್ ಕಿ ಜಿಂದಗಿ ಜಿಯೋ, ರೋಟಿ ಖಾವೋ. ವರ್ನಾ ಮೇರಿ ಗೋಲಿ ತೋ ಹೈ ಹೀ: (ಶಾಂತಿಯುತ ಜೀವನ ನಡೆಸಿ, ನಿಮ್ಮ ರೊಟ್ಟಿ ನೀವು ತಿನ್ನಿರಿ, ಇಲ್ಲದಿದ್ದರೆ ನನ್ನ ಗುಂಡುಗಳು ಇದ್ದೇ ಇವೆ) ಎಂದು ಪ್ರಧಾನಿ ಮೋದಿ ಅವರ ಪಾಕಿಸ್ತಾನಿಯರಿಗೆ ಅತ್ಯಂತ ಕಠಿಣ ಸಂದೇಶ ರವಾನಿಸಿದ್ದಾರೆ. ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯಿಂದಾಗಿ ಪಾಕಿಸ್ತಾನದ ವಾಯು ನೆಲೆಗಳು ಐಸಿಯುನಲ್ಲಿವೆ. ಭಾರತ ಕೊಟ್ಟಿರುವ ಸಾಮರಿಕ ಏಟಿನಿಂದ ಚೇತರಿಸಿಕೊಳ್ಳಲು ಪಾಕಿಸ್ತಾನಕ್ಕೆ ಹಲವು ವರ್ಷಗಳೇ ಬೇಕಾಗುತ್ತವೆ. ಅಷ್ಟಾಗಿಯೂ ನೀವು ಭಾರತದ ವಿರುದ್ಧ ಭಯೋತ್ಪಾದನೆಯನ್ನು ಪೋಷಿಸುತ್ತೀರಿ ಎಂದಾದರೆ, ಭಾರತದ ಮಾರಣಾಂತಿಕ ಪೆಟ್ಟು ತಿನ್ನಲು ಸಿದ್ಧರಾಗಿರಿ ಎಂದು ಪ್ರಧಾನಿ ಮೋದಿ ಪಾಕಿಸ್ತಾನದ ವಿರುದ್ಧ ಗುಡುಗಿದರು. ಪ್ರಧಾನಿ ಮೋದಿ ರಾಜಸ್ಥಾನದ ಬಿಕಾನೇರ್‌ನಲ್ಲಿ ಮಾಡಿದ ಭಾಷಣಕ್ಕಿಂತ ಭುಜ್‌ನಲ್ಲಿ ಮಾಡಿದ ಭಾಷಣ ಪ್ರಖರವಾಗಿತ್ತು. ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಕೇವಲ ಮಿಲಿಟರಿ ಕಾರ್ಯಾಚರಣೆಯಲ್ಲ. ಇದು ನಮ್ಮ ಭಾರತೀಯ ಮೌಲ್ಯಗಳು ಮತ್ತು ನಮ್ಮ ಹೃದಯಗಳಿಗೆ ಹತ್ತಿರವಾಗಿರುವ ಆಳವಾದ ಭಾವನೆಗಳ ಪ್ರತಿಬಿಂಬವಾಗಿದೆ ಎಂದು ಪ್ರಧಾನಿ ಮೋದಿ ಭಾವುಕರಾಗಿ ನುಡಿದರು. ಒಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಭುಜ್‌ನಲ್ಲಿ ಮಾಡಿರುವ ತಮ್ಮ ಭಾಷಣದಲ್ಲಿ, ಪಾಕಿಸ್ತಾನಿಯರನ್ನು ಉದ್ದೇಶಿಸಿ ಮಾತನಾಡಿರುವುದು ಜಾಗತಿಕವಾಗಿ ಗಮನ ಸೆಳೆದಿದೆ. ಭಯೋತ್ಪಾದನೆಗೆ ಅಂತ್ಯ ಹಾಡಲು ಪಾಕಿಸ್ತಾನಿಯರು ಮುಂದಾಗಬೇಕು ಎಂಬ ಪ್ರಧಾನಿ ಮೋದಿ ಸಲಹೆ, ಪಾಕಿಸ್ತಾನದಲ್ಲೂ ಚರ್ಚೆಗೆ ಗ್ರಾಸವಾಗಿದೆ.



> ಪಹಲ್ಗಾಮ್‌ನಲ್ಲಿನರಮೇಧ ನಡೆಸಿದ ಹಂತಕರನ್ನು ಬಲಿ ಹಾಕಲು ಪಾಕಿಸ್ತಾನಕ್ಕೆ 15 ದಿನ ಸಮಯ ನೀಡಿದೆವು. ಉಗ್ರ ಪೋಷಕ ದೇಶ ಕ್ರಮ ಜರುಗಿಸದೆ ಹೋದಾಗ ನಮ್ಮ ರಕ್ಷಣಾ ಪಡೆಗಳಿಗೆ ನರಹಂತಕರನ್ನು ದಂಡಿಸಲು ಪೂರ್ಣ ಅಧಿಕಾರ ನೀಡಲಾಯಿತು. ಆಪರೇಷನ್ ಸಿಂದೂರ ಕಾರ್ಯಾಚರಣೆ ಮೂಲಕ ಉದ್ದೇಶಿತ ಗುರಿಯನ್ನು ಸಾಧಿಸಲಾಯಿತು, ಎಂದು ಪ್ರಧಾನಿ ಮೋದಿ ಇದೇ ವೇಳೆ ಹೇಳಿದರು.

> ಪಾಕಿಸ್ತಾನ ಸರ್ಕಾರ ಹಾಗೂ ಸೇನೆ ಉಗ್ರರಿಗೆ ಬೆಂಬಲ ನೀಡುವುದನ್ನು ಮೊದಲು ನಿಲ್ಲಿಸಬೇಕು. ಶಾಂತಿ ಬಯಸುವ ಮೂಲಕ ರೊಟ್ಟಿ ಬಯಸಿದರೆ ನಾವು ನೆರವಿಗೆ ಬರುತ್ತೇವೆ. ಇಲ್ಲವಾದಲ್ಲಿ ಗುಂಡಿನ ಮೂಲಕ ಉತ್ತರ ಕೊಡುತ್ತೇವೆ. ನಮನ್ನು ಕೆಣಕಿದರೆ ಏನಾಗುತ್ತದೆ ಎಂಬುದು ಇತ್ತಿಚೆಗೆ ನಡೆದ ಸೇನಾ ಕಾರ್ಯಾಚರಣೆ ಮೂಲಕ ತೋರಿಸಿದ್ದೇವೆ ಎಂದು ಪ್ರಧಾನಿ ಮೋದಿ ನೆರೆ ರಾಷ್ಟ್ರಕ್ಕೆ ಎಚ್ಚರಿಕೆ ನೀಡಿದರು. ಜಬ್ ಕೋಯಿ ಹಮಾರಿ ಬೆಹ್ನೋ ಕೆ ಸಿಂಧೂರ್ ಕೋ ಮಿತಾಯೇಗಾ, ತೋ ಉಸ್ಕಾ ಭಿ ಮಿಟ್ನಾ ತೇ ಹೋ ಜಾತಾ ಹೈ (ಯಾರಾದರೂ ನಮ್ಮ ಸಹೋದರಿಯರ ಸಿಂಧೂರ್‌ವನ್ನು ಒರೆಸಲು ಧೈರ್ಯ ಮಾಡಿದರೆ, ಅವರ ಅಂತ್ಯ ಖಚಿತ) ಎಂದು ಪ್ರಧಾನಿ ಮೋದಿ ಇದೇ ವೇಳೆ ಪಾಕಿಸ್ತಾನಕ್ಕೆ ನೇರವಾಗಿ ಎಚ್ಚರಿಕೆ ನೀಡಿದರು.

# ವಿದೇಶಿ ವಿದ್ಯಾರ್ಥಿಗಳಿಗೆ ಯುಎಸ್ ಹೊಸ ಎಚ್ಚರಿಕೆ

**ಅಮೆರಿಕ:** ಯುಎಸ್‌ನಲ್ಲಿ ಓದುತ್ತಿರುವ ಭಾರತ ಸೇರಿದಂತೆ ಅನೇಕ ವಿದೇಶಿ ವಿದ್ಯಾರ್ಥಿಗಳಿಗೆ ಹೊಸ ಎಚ್ಚರಿಕೆ ನೀಡಲಾಗಿದೆ. ಸ್ನಾತಕೋತ್ತರ ಪದವಿಯ ಓದು ಮುಗಿದ ಬಳಿಕ ವಿದ್ಯಾರ್ಥಿಗಳಿಗೆ ಟ್ರೈನಿಂಗ್ ಪಡೆದುಕೊಳ್ಳಲು, ಕೆಲಸ ಮಾಡುವುದಕ್ಕೆ 2 ವರ್ಷ ಅವಕಾಶ ನೀಡಲಾಗಿರುತ್ತದೆ. ಆದರೆ ವಿದ್ಯಾರ್ಥಿಗಳು ಕೆಲಸದ ಬಗ್ಗೆ ಸರಿಯಾದ ಮಾಹಿತಿ ನೀಡದಿದ್ದರೆ ಅಥವಾ ನಿರುದ್ಯೋಗಿಗಳಾಗಿ ಉಳಿದರೆ ವೀಸಾ ರದ್ದು ಮಾಡುವ ಎಚ್ಚರಿಕೆಯನ್ನು ಕೊಡಲಾಗಿದೆ.

ಓದು ಮುಗಿಸಿದ ವಿದ್ಯಾರ್ಥಿಗಳು ತಮ್ಮ ಕೆಲಸದ ಬಗ್ಗೆ ಕಾಲ ಕಾಲಕ್ಕೆ ಅಪ್‌ಡೇಟ್ ಮಾಡಬೇಕು. ಕೆಲಸವಿಲ್ಲದೆ ಹೆಚ್ಚು ಸಮಯ ಕಳೆಯುವಂತಿಲ್ಲ. ನಿಯಮಗಳ ಪ್ರಕಾರ, ವಿದ್ಯಾರ್ಥಿಗಳು 90 ದಿನಗಳಿಗಿಂತ ಹೆಚ್ಚು ಕಾಲ ಕೆಲಸವಿಲ್ಲದೆ ಇರಬಾರದು. ಇನ್ನು ಸ್ಟೆಮ್ ಓದುವ, ಅಂದರೆ ಸೈನ್ಸ್, ಟೆಕ್ನಾಲಜಿ, ಇಂಜಿನಿಯರಿಂಗ್, ಮ್ಯಾತ್ಸ್ ಓದುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ 60 ದಿನ ಸಿಗುತ್ತದೆ. ಉದ್ಯೋಗ ಮಾಡುತ್ತಿರುವ ಸಂಸ್ಥೆಯ ವಿವರಗಳನ್ನು ಸೇವಿಸ್ ಪೋರ್ಟಲ್‌ನಲ್ಲಿ ವಿದೇಶಿ ವಿದ್ಯಾರ್ಥಿಗಳು ಅಪ್‌ಡೇಟ್ ಮಾಡಲೇಬೇಕು, ತಪ್ಪಿದ್ದಲ್ಲಿ ನಿರುದ್ಯೋಗಿಗಳು ಎಂದು ಪರಿಗಣಿಸಿ, ವೀಸಾ ರದ್ದು ಮಾಡಲಾಗುತ್ತದೆ. ಈ ಮೊದಲು ಕಠಿಣ ನಿಯಮ ಇರಲಿಲ್ಲ, 90 ದಿನಗಳ ಕಾಲ ಕೆಲಸವಿಲ್ಲದೆ ಇರುತ್ತಿದ್ದರೂ ಸೇವಿಸ್ ರೆಕಾರ್ಡ್ ರದ್ದಾಗುತ್ತಿರಲಿಲ್ಲ. ಆದರೆ ಈಗ ನಿಯಮವನ್ನು ಕಟ್ಟುನಿಟ್ಟುಗೊಳಿಸಲಾಗಿದೆ. ಎನ್‌ಪಿ ಝಡ್ ಲಾ ಗ್ರೂಪ್‌ನ ವ್ಯವಸ್ಥಾಪಕ ವಕೀಲರಾದ ಸ್ನೇಹಲ್ ಬಾತ್ರಾ ಮಾತನಾಡಿ, ಇದು ಎಫ್-1 ವಿದ್ಯಾರ್ಥಿಗಳಿಗೆ ದೊಡ್ಡ ಬದಲಾವಣೆ. ಈ ಹಿಂದೆ, ಖಇಗಿಖಖ, 90 ದಿನಗಳಿಗಿಂತ ಹೆಚ್ಚು ಕಾಲ ಕೆಲಸವಿಲ್ಲದೆ ಇದ್ದರೆ ಸ್ವಯಂಚಾಲಿತವಾಗಿ ದಾಖಲೆಗಳನ್ನು ರದ್ದು ಮಾಡುತ್ತಿರಲಿಲ್ಲ. ಆದರೆ ಈಗ, ಕಠಿಣ ನಿಯಮಗಳಿಂದಾಗಿ, ವಿದ್ಯಾರ್ಥಿಗಳು ಮಾಹಿತಿ ನೀಡಲು ತಪ್ಪಿದರೆ ಅವರ ವೀಸಾ ರದ್ದಾಗಬಹುದು ಎಂದಿದ್ದಾರೆ. ಒಪಿಟಿ ನಿಯಮಗಳ ಪ್ರಕಾರ, ಯಾವುದೇ ಬದಲಾವಣೆಗಳಾದಲ್ಲಿ (ಉದಾಹರಣೆಗೆ ಹೊಸ ಕೆಲಸ, ಕೆಲಸದ ಸ್ಥಳ ಬದಲಾವಣೆ ಅಥವಾ ಉದ್ಯೋಗ ನಷ್ಟ) ಈ ಬಗ್ಗೆ 10 ದಿನಗಳ ಒಳಗೆ ಖಇಗಿಖಗೆ ತಿಳಿಸಬೇಕು.





### ಭಾರತೀಯ ವಿದ್ಯಾರ್ಥಿಗಳಿಗೆ ಹೆಚ್ಚು ತೊಂದರೆ

ಅಮೆರಿಕದಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಬಹಳಷ್ಟಿದೆ. 2022-23ರ ಶೈಕ್ಷಣಿಕ ವರ್ಷದ ಪ್ರಕಾರ, 2.70 ಲಕ್ಷ ಭಾರತೀಯ ವಿದ್ಯಾರ್ಥಿಗಳು ಅಮೆರಿಕದಲ್ಲಿ ಓದುತ್ತಿದ್ದಾರೆ. ಅವರಲ್ಲಿ 69,000 ವಿದ್ಯಾರ್ಥಿಗಳು ಔಕಖಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಹೀಗಾಗಿ, ಅನೇಕ ಭಾರತೀಯ ವಿದ್ಯಾರ್ಥಿಗಳಿಗೆ ಈ ಪತ್ರಗಳು ಬಂದಿವೆ.

# ಪೂರ್ವ ಗಡಿಯಲ್ಲಿ ಭಾರತದ ವ್ಯೂಹಾತ್ಮಕ ಹೆಜ್ಜೆ

**ಹೊಸದಿಲ್ಲಿ:** ಆಪರೇಷನ್ ಸಿಂದೂರದ ಮೂಲಕ ಪಶ್ಚಿಮ ಗಡಿಯಲ್ಲಿ ಪಾಕಿಸ್ತಾನಕ್ಕೆ ಬಿಸಿ ಮುಟ್ಟಿಸಿದ ಭಾರತ, ಪೂರ್ವ ಗಡಿಯಲ್ಲೂ ಮಿಲಿಟರಿ ಮೂಲ ಸೌಕರ್ಯ ಅಭಿವೃದ್ಧಿ ತೀವ್ರಗೊಳಿಸಿದೆ. ತ್ರಿಪುರಾದಲ್ಲಿ ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಂತಿರುವ ಕೈಲಾಶಹರ್ ವಿಮಾನ ನಿಲ್ದಾಣವನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರಕಾರ ಮುಂದಾಗಿದೆ. ಈ ವಿಮಾನ ನಿಲ್ದಾಣಕ್ಕೆ ಮರುಜೀವ ನೀಡಲು ಮುಂದಾಗಿರುವ ಸಮಯ ಹಾಗೂ ಈ ವಿಮಾನ ನಿಲ್ದಾಣ ಹೊಂದಿರುವ ಆಯಕಟ್ಟಿನ ಮಹತ್ವದ ಹಿನ್ನೆಲೆಯಲ್ಲಿ ಸರಕಾರದ ಕ್ರಮ ಗಮನ ಸೆಳೆದಿದೆ.

ಬಾಂಗ್ಲಾದೇಶದ ಮೇಲೆ ಹಿಡಿತ ಸಾಧಿಸಿ, ಯೂನಸ್ ಸರಕಾರವನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ಚೀನಾ, ಅಗತ್ಯ ಸಮಯದಲ್ಲಿ ಭಾರತದ ವಿರುದ್ಧ ಬಾಂಗ್ಲಾದ ಮಿಲಿಟರಿ ನೆಲೆಗಳನ್ನು ಬಳಸಲು ಕಾರ್ಯತಂತ್ರ ರೂಪಿಸಿದೆ. ಇದರ ಭಾಗವಾಗಿ ಭಾರತದ ಗಡಿಯಿಂದ ಕೇವಲ 20 ಕಿ.ಮೀ. ದೂರದಲ್ಲಿರುವ ಬಾಂಗ್ಲಾದೇಶದ ಲಾಲ್‌ಮೊನಿರ್ಹತ್ ವಾಯುನೆಲೆಯನ್ನು ಪುನರುಜ್ಜೀವನಗೊಳಿಸಲು ಚೀನಾ ಮುಂದಾಗಿದೆ. ಬಾಂಗ್ಲಾದೇಶದ ಲಾಲ್‌ಮೊನಿರ್ಹತ್ ಜಿಲ್ಲೆಯಲ್ಲಿರುವ ಈ ವಾಯುನೆಲೆ ಎರಡನೇ ಮಹಾಯುದ್ಧದ ಸಮಯದಲ್ಲಿ ಬಳಕೆಯಾಗಿತ್ತು. ಆ ಬಳಿಕ ಅದು ನಿಷ್ಕ್ರಿಯವಾಗಿತ್ತು. ಚೀನಾದ ನೆರವಿನೊಂದಿಗೆ ಇದನ್ನು ಮರುಸಜ್ಜುಗೊಳಿಸಲು ಬಾಂಗ್ಲಾ ಮುಂದಾಗಿದೆ. ಇದಕ್ಕೆ ಪ್ರತಿಯಾಗಿ ಭಾರತ 30 ವರ್ಷಗಳಿಗೂ ಹೆಚ್ಚು ಕಾಲದಿಂದ ನಿಷ್ಕ್ರಿಯವಾಗಿದ್ದ ಮತ್ತು 1971 ರ ಭಾರತ-ಪಾಕ್ ಯುದ್ಧದ (ಬಾಂಗ್ಲಾ ವಿಮೋಚನೆ) ವೇಳೆ ಬಳಸಲಾದ ಕೈಲಾಶಹರ್ ವಿಮಾನ ನಿಲ್ದಾಣವನ್ನು ಮರು ಅಭಿವೃದ್ಧಿಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.





### ಕೈಲಾಶಹರ್ ಏರ್ ಪೋರ್ಟ್ ವಿಶೇಷತೆ

> ತ್ರಿಪುರಾದ ಉನಕೋಟಿ ಜಿಲ್ಲೆಯಲ್ಲಿರುವ ಕೈಲಾಶೆಹರ್ ವಿಮಾನ ನಿಲ್ದಾಣವು ಭಾರತದ ಪಾಲಿಗೆ ಆಯಕಟ್ಟಿನ ಸ್ಥಳವಾಗಿದೆ. ಇದು ಬಾಂಗ್ಲಾದೇಶದಿಂದ ಕೆಲವೇ ಕಿ.ಮೀ. ದೂರದಲ್ಲಿದೆ. ಜತೆಗೆ ಚೀನಾ-ಬಾಂಗ್ಲಾಕಣ್ಣಿಟ್ಟಿರುವ ಸಿಲಿಗುರಿ ಕಾರಿಡಾರ್‌ಗೂ ಸನಿಹದಲ್ಲಿದೆ. 1971ರ ಭಾರತ-ಪಾಕ್ ಯುದ್ಧದ ವೇಳೆ ಈ ವಿಮಾನ ನಿಲ್ದಾಣವನ್ನು ಮಹತ್ವದ ಪಾತ್ರ ವಹಿಸಿತ್ತು. ಭಾರತೀಯ ವಾಯುಪಡೆಯು ಮಿಷನ್ ಕಾರ್ಯಾಚರಣೆ ಹಾಗೂ ವಿಚಕ್ಷಣೆಗಾಗಿ ಈ ನಿಲ್ದಾಣವನ್ನು ಬಳಸಿಕೊಂಡಿತ್ತು. ಇದರ ಪುನರಾಭಿವೃದ್ಧಿಯಿಂದ ಗಡಿಯಲ್ಲಿಭಾರತದ ಪಡೆಗಳು ಹಾಗೂ ಸರಕುಗಳ ಕ್ಷಿಪ್ರ ಚಲನವಲನಕ್ಕೆ ಅನುಕೂಲವಾಗಲಿದೆ. ಜತೆಗೆ ಈಶಾನ್ಯ ರಾಜ್ಯಕ್ಕೆ ಸಂಪರ್ಕವೂ ಸುಧಾರಣೆಯಾಗಲಿದೆ.

# ಅಮೆರಿಕ ಮಧ್ಯೆ ಮಧ್ಯಂತರ ವ್ಯಾಪಾರ ಒಪ್ಪಂದ ಸಾಧ್ಯತೆ

**ನವದೆಹಲಿ:** ಮುಂದಿನ ತಿಂಗಳು ವ್ಯಾಪಾರ ಮಾತುಕತೆಗಾಗಿ ಅಮೆರಿಕದ ಅಧಿಕಾರಿಗಳ ತಂಡ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ. ಇದರ ಅಂಗವಾಗಿ ಜೂನ್ 25ರೊಳಗೆ ಎರಡೂ ದೇಶಗಳು ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸುವ ಸಾಧ್ಯತೆಯಿದ್ದು, ಮಾತುಕತೆಗಳು ಪ್ರಗತಿಯಲ್ಲಿವೆ ಎಂದು ಮೂಲಗಳು ತಿಳಿಸಿವೆ.ಭಾರತದ ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ರಾಜೇಶ್ ಆಗರ್ವಾಲ್ ಅವರು ಕಳೆದ ವಾರ ನಾಲ್ಕು ದಿನಗಳ ಅಮೆರಿಕ ಭೇಟಿ ಕೈಗೊಂಡಿದ್ದರು. ಈ ವೇಳೆ ಪ್ರಸ್ತಾವಿತ ಒಪ್ಪಂದದ ಕುರಿತು ಅವರು ಅಮೆರಿಕ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.



ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಈಚೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಲ್ಲಿನ ವಾಣಿಜ್ಯ ಸಚಿವ ಹೊವಾರ್ಡ್ ಲುಟ್ರಿಕ್ ಅವರನ್ನು ಎರಡು ಬಾರಿ ಭೇಟಿಯಾಗಿ ವ್ಯಾಪಾರ ಒಪ್ಪಂದಗಳ ಕುರಿತು ಮಾತುಕತೆ ನಡೆಸಿದ್ದರು. ಅಮೆರಿಕ ವಿಧಿಸಿರುವ ಶೇ 26ರಷ್ಟು ಪ್ರತಿ ಸುಂಕದಿಂದ ಸಂಪೂರ್ಣ ವಿನಾಯಿತಿ ಪಡೆಯಲು ಭಾರತ ಮುಂದಾಗಿದೆ. ಹಾಗಾಗಿ, ಉಭಯ ದೇಶಗಳ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದವು ಜುಲೈ 8ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಈಚೆಗೆ ತಿಳಿಸಿದ್ದರು.

## ಪಾರಿವಾಳಗಳಿಗೆ ಕಾಳು ಹಾಕಿದ್ದಕ್ಕೆ ಭಾರತೀಯ ಮೂಲದ ಮಹಿಳೆಗೆ ದಂಡ



**ಸಿಂಗಪುರ:** ಅಪಾರ್ಟ್‌ಮೆಂಟ್ ಬಳಿ ಪಾರಿವಾಳಗಳಿಗೆ ಕಾಳು ಹಾಕಿದ್ದಾರೆ ಎನ್ನುವ ಕಾರಣಕ್ಕಾಗಿ ಭಾರತೀಯ ಮೂಲದ ಮಹಿಳೆಯೊಬ್ಬರಿಗೆ 79,800 (1,200 ಸಿಂಗಪುರ ಡಾಲರ್) ದಂಡ ವಿಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ನ್ಯಾಯಾಲಯವು ಆದೇಶ ನೀಡಿದೆ. ಅಪಾರ್ಟ್‌ಮೆಂಟ್ ಬಳಿ ಪಾರಿವಾಳಗಳಿಗೆ ಕಾಳು ಹಾಕುವಾಗ ರಾಷ್ಟ್ರೀಯ ಉದ್ಯಾನ ಮಂಡಳಿಯ ಅಧಿಕಾರಿಗಳು, ಈ ರೀತಿ ಮಾಡುವುದು ಅಪರಾಧ ಎಂದು ಸೂಚನೆ ನೀಡಿದ್ದಾರೆ. ಘಟನೆಯು ಪುನರಾವರ್ತನೆಯಾದಾಗ ಭಾರತೀಯ ಮೂಲದ 70 ವರ್ಷದ ಮಹಿಳೆ ಸನ್ಮುಗಮನಾಥನ್ ಶಾಮಲ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಸಿಂಗಪುರದ ವನ್ಯಜೀವಿ ಕಾಯ್ದೆಯ ಪ್ರಕಾರ ವನ್ಯಜೀವಿ ನಿರ್ವಹಣಾಧಿಕಾರಿಯ ಲಿಖಿತ ಅನುಮತಿಯಿಲ್ಲದೇ ಸಾಮಾನ್ಯ ಜನರು ವನ್ಯ ಜೀವಿಗಳಿಗೆ ಆಹಾರ ನೀಡುವುದು ಅಪರಾಧವಾಗಿದೆ. ರಾಷ್ಟ್ರೀಯ ಉದ್ಯಾನ ಮಂಡಳಿಯು ಪಾರಿವಾಳಗಳನ್ನು ಸೆರೆ ಹಿಡಿಯುವಾಗ ಅವರಿಗೆ ಅಡ್ಡಿಪಡಿಸಿದ ಆರೋಪ ಕೂಡ ಈ ಮಹಿಳೆಯ ಮೇಲಿತ್ತು. ನ್ಯಾಯಲಯವು 2 ದಿನಗಳ ನ್ಯಾಯಾಂಗ ಬಂಧನ ಅಥವಾ 1,200 ಸಿಂಗಪುರ ಡಾಲರ್ ದಂಡ ವಿಧಿಸಿತ್ತು. ವಯೋಸಹಜ ಖಾಯಿಲೆಯ ಕಾರಣದಿಂದ ನ್ಯಾಯಾಂಗ ಬಂಧನ ಸಾಧ್ಯವಿಲ್ಲವೆಂದು, ದಂಡ ಪಾವತಿಸಲು ಶಾಮಲ ಒಪ್ಪಿಕೊಂಡಿದ್ದಾರೆ.

# ಮುರಿದ್ ವಾಯುನೆಲೆಯ ಭೂಗತ ಬಂಕರ್ ಚಿತ್ರ

**ಹೊಸದಿಲ್ಲಿ:** ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತ ನಡೆಸಿದ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ, ಪಾಕಿಸ್ತಾನದ ಸೈನ್ಯ ನೆಲೆಗಳಿಗೆ ಭಾರೀ ಹಾನಿ ಮಾಡಿರುವುದು ಸ್ಪಷ್ಟವಾಗಿದೆ. ಭಾರತದ ಕ್ಷಿಪಣಿಗಳು ಪಾಕಿಸ್ತಾನದ ಮುರಿದ್ ವಾಯುನೆಲೆಯಲ್ಲಿರುವ ಒಂದು ನಿರ್ಣಾಯಕ ಭೂಗತ ಸೌಲಭ್ಯವನ್ನು ಗುರಿಯಾಗಿಸಿಕೊಂಡಿದ್ದನ್ನು, ಉಪಗ್ರಹ ಚಿತ್ರಗಳು ದೃಢಪಡಿಸಿವೆ.

ಈ ಉಪಗ್ರಹ ಚಿತ್ರಗಳು ಭಾರತದ ಗುಪ್ತಚರ ಸಾಮರ್ಥ್ಯ, ನಿಖರ ದಾಳಿ ನಡೆಸುವ ಕೌಶಲ್ಯ ಮತ್ತು ರಾಷ್ಟ್ರೀಯ ಭದ್ರತೆಗೆ ಇರುವ ಬದ್ಧತೆಯನ್ನು ಮತ್ತೊಮ್ಮೆ ಜಗತ್ತಿಗೆ ಸಾರಿದೆ. ಕಾರ್ಯಾಚರಣೆಯ ವಿವರಗಳು ಮತ್ತು ಗುರಿ: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿರುವ ಮುರಿದ್ ವಾಯುನೆಲೆ ಆಯಕಟ್ಟಿನ ಸ್ಥಳವಾಗಿದ್ದು, ಇಲ್ಲಿ ಭೂಗರ್ಭದಲ್ಲಿ ನಿರ್ಮಿಸಲಾಗಿದ್ದ ವಿಶೇಷ ಸೌಲಭ್ಯವನ್ನು, ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಸಂದರ್ಭದಲ್ಲಿ ಭಾರತ ಗುರಿಯಾಗಿಸಿಕೊಂಡಿದೆ. ಈ ಭೂಗತ ರಚನೆಯು ಪಾಕಿಸ್ತಾನದ ವ್ಯೂಹಾತ್ಮಕ ಕಾರ್ಯಕ್ರಮಗಳಿಗೆ, ಬಹುಶಃ ಶಸ್ತ್ರಾಸ್ತ್ರ ಸಂಗ್ರಹಣೆ, ಉಗ್ರಗಾಮಿಗಳಿಗೆ ತರಬೇತಿ ಅಥವಾ ನಿರ್ಣಾಯಕ ತಂತ್ರಜ್ಞಾನ ಅಭಿವೃದ್ಧಿಗೆ ಬಳಸಲಾಗುತ್ತಿತ್ತು ಎಂಬ ಶಂಕೆ ಇದೆ. ಭಾರತದ ನಡೆಸಿದ ದಾಳಿಯಲ್ಲಿ ಮುರಿದ್ದ ವಾಯುನೆಲೆಯ ಭೂಗತ ಸೌಲಭ್ಯಕ್ಕೆ ಹಾನಿಯಾಗಿರುವುದನ್ನು, ಉಪ್ರಗ್ರಹ ಚಿತ್ರಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.




ಆದರೆ ದಾಳಿಯ ನಂತರ ತೆಗೆಯಲಾದ ಚಿತ್ರಗಳಲ್ಲಿ, ಗುರಿಯಾಗಿಸಿಕೊಂಡಿದ್ದ ಭೂಗತ ಸೌಲಭ್ಯದ ನಿರ್ದಿಷ್ಟ ಸ್ಥಳದಲ್ಲಿ ದೊಡ್ಡ ಹಾನಿಯಾಗಿರುವುದು, ಕಟ್ಟಡಗಳು ಕುಸಿದಿರುವುದು ಮತ್ತು ಭೂಮಿಯ ಮೇಲ್ಮೈಯಲ್ಲಿ ಬದಲಾವಣೆಗಳಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಉಪಗ್ರಹ ಚಿತ್ರಗಳು ದಾಳಿಯು ಅತ್ಯಂತ ನಿಖರವಾಗಿ ನಡೆದಿರುವುದನ್ನು, ಉದ್ದೇಶಿತ ಗುರಿಯನ್ನು ಮಾತ್ರ ನಾಶಪಡಿಸಿರುವುದನ್ನು ಪ್ರಮಾಣೀಕರಿಸುತ್ತವೆ. ಆಪರೇಷನ್ ಸಿಂಧೂರ ಕಾರ್ಯಾಚರಣೆಯು ಹಲವು ದೃಷ್ಟಿಕೋನಗಳಿಂದ ಮಹತ್ವದ್ದಾಗಿದೆ. ಶತ್ರುರಾಷ್ಟ್ರದ ಗಡಿಯೊಳಗೆ ನುಗ್ಗಿ, ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ನಿಖರವಾಗಿ ಗುರಿ ತಲುಪಿ ಅದನ್ನು ನಾಶಪಡಿಸುವ ಭಾರತದ ಸಾಮರ್ಥ್ಯವನ್ನು ಇದು ಮತ್ತೊಮ್ಮೆ ಸಾಬೀತುಪಡಿಸಿದೆ.

### ಉಪಗ್ರಹ ಚಿತ್ರಗಳು - ಪ್ರಮುಖ ಸಾಕ್ಷಿ

ಈ ಕಾರ್ಯಾಚರಣೆಯ ಯಶಸ್ಸಿಗೆ ಪ್ರಮುಖ ಸಾಕ್ಷ್ಯವಾಗಿ ಉಪಗ್ರಹ ಚಿತ್ರಗಳನ್ನು ಬಿಡುಗಡೆ ಮಾಡಲಾಗಿದ್ದು, ದಾಳಿಗೂ ಮುನ್ನ ತೆಗೆಯಲಾದ ಉಪಗ್ರಹ ಚಿತ್ರಗಳಲ್ಲಿ ಮುರಿದ್ ವಾಯುನೆಲೆಯಲ್ಲಿನ ಭೂಗತ ಸೌಲಭ್ಯದ ಪ್ರವೇಶ ದ್ವಾರಗಳು ಮತ್ತು ಮೇಲ್ಮೈ ರಚನೆಗಳು ಸ್ಪಷ್ಟವಾಗಿ ಕಾಣಿಸುತ್ತವೆ.

ಅಲ್ಲದೇ ಗಡಿಯಾಚೆಗಿನ ಭಯೋತ್ಪಾದನೆ ಅಥವಾ ಭಾರತದ ಭದ್ರತೆಗೆ ಧಕ್ಕೆ ತರುವ ಯಾವುದೇ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂಬ ಕಠಿಣ ಸಂದೇಶವನ್ನು ಪಾಕಿಸ್ತಾನಕ್ಕೆ ರವಾನಿಸಿದೆ. ಇಂತಹ ಕ್ಲಿಷ್ಟಕರ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರೈಸಲು, ನಿಖರವಾದ ಗುಪ್ತಚರ ಮಾಹಿತಿ ಅತ್ಯಗತ್ಯ. ಇದರಲ್ಲಿ ಯಶಸ್ವಿಯಾಗಿರುವ ಭಾರತದ ಗುಪ್ತಚರ ಸಂಸ್ಥೆಗಳ ಕೌಶಲ್ಯವನ್ನು ಇದು ಎತ್ತಿ ತೋರಿಸುತ್ತದೆ. ಹಾನಿಗೊಳಗಾದ ಮುರಿದ್ ವಾಯುನೆಲೆ ಸಮೀಪದ ಭೂಗತ ಮಿಲಿಟರಿ ಸೌಲಭ್ಯದ ಉಪಗ್ರಹ ಚಿತ್ರಗಳ ವಿಶ್ಲೇಷಣೆಯು, ಗುರಿ ನಿರ್ಧಾರ ಮತ್ತು ನಿಖರ ದಾಳಿಗೆ ಬಳಸಲಾದ ತಂತ್ರಜ್ಞಾನವು ಭಾರತದ ತಾಂತ್ರಿಕ ಶ್ರೇಷ್ಠತೆಗೆ ಕನ್ನಡಿ ಹಿಡಿದಿದೆ.

## ಮಿನಿ ನ್ಯೂಸ್

### ಅಮೆರಿಕದ ಅಧೀನ ಕಾರ್ಯದರ್ಶಿ ಕೆಸ್ಲರ್ ಮಾತುಕತೆ

**ನ್ಯೂಯಾರ್ಕ್ / ವಾಷಿಂಗ್ಟನ್:** ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ತ್ರಿಯವರು ಅಮೆರಿಕದ ಅಧೀನ ಕಾರ್ಯದರ್ಶಿ ಜೆಫ್ರಿ ಕೆಸ್ತರ್ ಅವರನ್ನು ವಾಷಿಂಗ್ಟನ್‌ನಲ್ಲಿ ಭೇಟಿಯಾಗಿದ್ದಾರೆ. ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ದ್ವಿಪಕ್ಷೀಯ ಸಹಕಾರದ ಬಗ್ಗೆ ಮಾತುಕತೆ ನಡೆದಿದೆ ಎಂದು ವಾಷಿಂಗ್ಟನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ತಿಳಿಸಿದೆ. ಮೇ 27 ರಿಂದ 29ರವರೆಗೆ ವಾಷಿಂಗ್ಟನ್‌ನಲ್ಲಿ ಇರಲಿರುವ ಮಿಸ್ತ್ರಿ, ಅಮೆರಿಕ ಆಡಳಿತದ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ.2025ರ ಫೆಬ್ರುವರಿಯಲ್ಲಿ ಅಮೆರಿಕಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದರು. ಮಿಸ್ತ್ರಿಯವರ ಭೇಟಿ ಅದರ ಮುಂದುವರಿದ ಭಾಗವಾಗಿದೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ. ತಂತ್ರಜ್ಞಾನ, ವ್ಯಾಪಾರ ಸಹಯೋಗ ಹೆಚ್ಚಳಕ್ಕೆ ಭಾರತ-ಅಮೆರಿಕ ಕಾರ್ಯತಂತ್ರದ ವ್ಯಾಪಾರ ಸಂವಾದ ಸದ್ಯದಲ್ಲೇ ಆಯೋಜಿಸುವ ಬಗ್ಗೆಯೂ ಉಭಯ ಅಧಿಕಾರಿಗಳು ಚರ್ಚಿಸಿದ್ದಾರೆ ಎಂದು ರಾಯಭಾರ ಕಚೇರಿ ತಿಳಿಸಿದೆ.

### ಸರ್ವಪಕ್ಷ ನಿಯೋಗದ ಪ್ರವಾಸದ ಮಧ್ಯೆ ಗುಲಾಂ ನಬಿ ಆಜಾದ್ ಆಸ್ಪತ್ರೆಗೆ ದಾಖಲು

**ರಿಯಾದ್ (ಸೌದಿ ಅರೇಬಿಯಾ):** ಸರ್ವಪಕ್ಷ ನಿಯೋಗದಲ್ಲಿರುವ ಮಾಜಿ ಕೇಂದ್ರ ಸಚಿವ ಗುಲಾಂ ನಬಿ ಆಜಾದ್ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ಮಂಗಳವಾರ ರಿಯಾದ್‌ನ ಆಸ್ಪತ್ರೆವೊಂದಕ್ಕೆ ದಾಖಲಾಗಿದ್ದಾರೆ.ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ನೀಡಿರುವ ಬಿಜೆಪಿ ಸಂಸದ ಬೈಜಯಂತ್ ಜೈ ಪಾಂಡಾ, ಸರ್ವಪಕ್ಷ ನಿಯೋಗದ ಪ್ರವಾಸದ ಮಧ್ಯದಲ್ಲಿ ಗುಲಾಂ ನಬಿ ಆಜಾದ್ ಅವರ ಆರೋಗ್ಯ ಹದಗೆಟ್ಟಿದ್ದು, ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅವರ ಆರೋಗ್ಯ ಸ್ಥಿರವಾಗಿದ್ದು, ವೈದ್ಯಕೀಯ ಮೇಲ್ವಿಚಾರಣೆಯಲ್ಲಿದ್ದಾರೆ ಎಂದಿದ್ದಾರೆ. ಬಹ್ರನ್ ಮತ್ತು ಕುವೈತ್‌ನಲ್ಲಿ ನಡೆದ ಸಭೆಯಲ್ಲಿ ನಬಿ ಭಾಗಿಯಾಗಿದ್ದರು. ಅವರ ಅನುಪಸ್ಥಿತಿಯಲ್ಲಿ ಸೌದಿ ಅರೇಬಿಯಾ ಮತ್ತು ಅಕ್ಟೋರಿಯಾದಲ್ಲಿ ಸಭೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ. ತಾಪಮಾನ ಹೆಚ್ಚಳದಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗಿದೆ ಎಂದು ನಬಿ ತಿಳಿಸಿದ್ದಾರೆ. ಏತನ್ಮಧ್ಯೆ, ಈ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್, ನಬಿ ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

### ವಿದ್ಯಾರ್ಥಿ ವೀಸಾ ಸಂದರ್ಶನ ಪ್ರಕ್ರಿಯೆ ಸ್ಥಗಿತಗೊಳಿಸಿದ ಅಮೆರಿಕ

**ವಾಷಿಂಗ್ಟನ್:** ಅಮೆರಿಕದಲ್ಲಿ ವ್ಯಾಸಂಗ ಮಾಡಲು ಬಯಸಿರುವ ವಿದ್ಯಾರ್ಥಿ ವೀಸಾ ಅರ್ಜಿದಾರರ ಸಂದರ್ಶನ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಡೊನಾಲ್ಡ್ ಟ್ರಂಪ್ ಆಡಳಿತ ಸೂಚಿಸಿದೆ. ವಿದೇಶಿ ವಿದ್ಯಾರ್ಥಿಗಳು ಅಮೆರಿಕದಲ್ಲಿ ವ್ಯಾಸಂಗ ಮಾಡಲು ವೀಸಾಕ್ಕೆ ಅರ್ಜಿ ಸಲ್ಲಿಸುವಾಗ ಅವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಪರಿಶೀಲನೆಗೆ ಒಳಪಡಿಸುವುದನ್ನು ಟ್ರಂಪ್ ಆಡಳಿತ ಪರಿಗಣಿಸುತ್ತಿರುವುದರಿಂದ, ಈ ನಿರ್ಧಾರ ತೆಗೆದುಕೊಂಡಿದೆ. ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಿಶ್ವದ ವಿವಿಧ ದೇಶಗಳಲ್ಲಿರುವ ತನ್ನ ರಾಯಭಾರ ಕಚೇರಿಗಳಿಗೆ ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಖಾತೆಗಳ ಪರಿಶೀಲನೆಯ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲು ವಿದೇಶಾಂಗ ಇಲಾಖೆ ಸಿದ್ಧತೆ ನಡೆಸಿದೆ. ಆದ್ದರಿಂದ ಮುಂದಿನ ಆದೇಶದವರೆಗೆ ಯಾವುದೇ ಕಾನ್ಸಲರ್ ವಿಭಾಗಗಳು ವಿದ್ಯಾರ್ಥಿ ವೀಸಾ ಸಂದರ್ಶನ ಪ್ರಕ್ರಿಯೆ ನಿಲ್ಲಿಸಬೇಕು ಎಂದು ಸೂಚಿಸಿದ್ದಾರೆ.

### ಭಯೋತ್ಪಾದನೆ ವಿರುದ್ಧ ಭಾರತ-ಫ್ರಾನ್ಸ್ ಒಟ್ಟಾಗಿ ಹೋರಾಟ

**ಪ್ಯಾರಿಸ್:** ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ ಮತ್ತು ಫ್ರಾನ್ಸ್ ದೇಶಗಳು ಒಟ್ಟಾಗಿ ಹೋರಾಟ ನಡೆಸಲಿವೆ ಎಂದು ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ಹೇಳಿದ್ದಾರೆ.ರವಿಶಂಕರ್ ಪ್ರಸಾದ್ ನೇತೃತ್ವದ ಸರ್ವಪಕ್ಷಗಳ ಸಂಸದರನ್ನು ಒಳಗೊಂಡ ನಿಯೋಗವು. ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿ ನಂತರ ಭಾರತ ಕೈಗೊಂಡ ಆಪರೇಷನ್ ಸಿಂಧೂರ ಹಾಗೂ ಉಗ್ರವಾದದ ವಿರುದ್ಧ ಭಾರತ ಕೈಗೊಂಡಿರುವ ಹೋರಾಟ ಕುರಿತು ವಿವರಿಸಿದೆ. ಭಯೋತ್ಪಾದನೆ ವಿರುದ್ಧ ಇಡೀ ಜಗತ್ತು ಧ್ವನಿ ಎತ್ತುವ ಅಗತ್ಯವಿದೆ. ಅದರಂತೆ ಭಯೋತ್ಪಾದನೆ ವಿರುದ್ಧ ಭಾರತ ನಡೆಸುತ್ತಿರುವ ಹೋರಾಟಕ್ಕೆ ಫ್ರಾನ್ಸ್ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ಫ್ರಾನ್ಸ್‌ನ ಸೆನೆಟರ್‌ಗಳು ಭರವಸೆ ನೀಡಿರುವುದಾಗಿ ಪ್ರಸಾದ್ ತಿಳಿಸಿದ್ದಾರೆ. ಪಾಕಿಸ್ತಾನ ಮತ್ತು ಭಯೋತ್ಪಾದನೆಯ ನಡುವಿನ ವ್ಯತ್ಯಾಸ ಈಗ ಮಾಯವಾಗಿದೆ. ಪಾಕ್ ಸೇನೆ ಭಯೋತ್ಪಾದನೆಯನ್ನು ಸಾಧನವಾಗಿ ಬಳಸುತ್ತಿದೆ ಎಂದು ಪ್ರಸಾದ್ ವಾಗ್ದಾಳಿ ನಡೆಸಿದ್ದಾರೆ.

# ಶಶಿ ತರೂರ್ ಪನಾಮಾ ಭಾಷಣಕ್ಕೆ ಕಾಂಗ್ರೆಸ್ ವಿರೋಧ

## ಆಪರೇಷನ್ ಸಿಂಧೂರ ಸೇನಾ ಕಲಾರ್ಯಾಚಣೆಯಿಂದ ಪತರುಗುಟ್ಟಿರುವ ಪಾಕಿಸ್ತಾನದಿಂದ ಇನ್ನೂ ಬಾರದ ಪ್ರತಿಕ್ರಿಯೆ

**ಪನಾಮಾ:** ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಉಗ್ರವಾದಕ್ಕೆ ಪಾಕಿಸ್ತಾನದ ಬೆಂಬಲದ ಸತ್ಯಾಸತ್ಯತೆಯನ್ನು ಜಗತ್ತಿಗೆ ಮನವರಿಕೆ ಮಾಡಲು, ಭಾರತದ ಸರ್ವಪಕ್ಷ ಸಂಸದೀಯ ನಿಯೋಗ ವಿವಿಧ ದೇಶಗಳಿಗೆ ಭೇಟಿ ನೀಡಿದೆ.

ಅದರಂತೆ ಸದ್ಯ ಲ್ಯಾಟಿನ್ ಅಮೆರಿಕ ರಾಷ್ಟ್ರವಾದ ಪನಾಮಾದಲ್ಲಿರುವ ಶಶಿ ತರೂರ್ ಸದಸ್ಯರಾಗಿರುವ ನಿಯೋಗವು, ಭಾರತವು ದಶಕಗಳಿಂದ ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆಯನ್ನು ದಿಟ್ಟವಾಗಿ ಎದುರಿಸುತ್ತಿರುವ ರೀತಿಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದೆ.

ಪನಾಮಾದಲ್ಲಿ ಮಾತನಾಡಿದ ಕಾಂಗ್ರೆಸ್ ಸಂಸದ ಶಶಿ ತರೂರ್, ಭಾರತವನ್ನು ಗುರಿಯಾಗಿಸಿಕೊಂಡಿರುವ ಭಯೋತ್ಪಾದಕರು ತಮ್ಮ ದುಸ್ಸಾಹಸಗಳಿಗೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಅರಿತುಕೊಂಡಿದ್ದಾರೆ. ಭಯೋತ್ಪಾದನೆಯನ್ನು ಎದುರಿಸುವ ಭಾರತದ ನೀತಿಯಲ್ಲಿ ಆಗಿರುವ ಬದಲಾವಣೆಯನ್ನು ಶತ್ರುಗಳು ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂದು ಸೂಚ್ಯವಾಗಿ ಹೇಳಿದರು. ನಾವು ಸುಮಾರು ನಾಲ್ಕು ದಶಕಗಳಿಂದ ದಾಳಿಯ ಮೇಲೆ ದಾಳಿಯನ್ನು ಅನುಭವಿಸಿದ್ದೇವೆ. ನೋವು, ದುಃಖ, ಗಾಯಗಳು, ನಷ್ಟಗಳನ್ನು ಸಹಿಸಿಕೊಳ್ಳುವುದನ್ನು ಮುಂದುವರಿಸುವುದು ಮತ್ತು ನಂತರ ಅಂತಾರಾಷ್ಟ್ರೀಯ ಸಮುದಾಯದ ಮುಂದೆ ಹೋಗಿ ಅಳಲು ತೋಡಿಕೊಳ್ಳುವುದನ್ನು ಭಾರತ ಈಗ ನಿಲ್ಲಿಸಿದೆ. ಭಾರತ ವಿರೋಧಿ ಭಯೋತ್ಪಾದಕ ಕೃತ್ಯಗಳಿಗೆ ಈಗೇನಿದ್ದರೂ ಸೇನಾ ಕಾರ್ಯಚರಣೆಗಳೇ ನಮ್ಮ ಉತ್ತರವಾಗಿರುತ್ತವೆ ಎಂದು ಶಶಿ ತರೂರ್ ಆಪರೇಷನ್ ಸಿಂಧೂರ ಮಿಲಿಟರಿ ಕಾರ್ಯಾಚರಣೆಯನ್ನು ಉಲ್ಲೇಖಿಸಿದರು.

2008ರ ಮುಂಬೈ ಭಯೋತ್ಪಾದಕ ದಾಳಿಯನ್ನು ಉಲ್ಲೇಖಿಸುತ್ತಾ, ನಮ್ಮ ಬಳಿ ಎಲ್ಲಾ ಪುರಾವೆಗಳಿದ್ದವು. ನಾವು ಒಬ್ಬ ಭಯೋತ್ಪಾದಕನನ್ನು ಜೀವಂತವಾಗಿ ಸೆರೆಹಿಡಿದಿದ್ದೇವು. ಅತ್ಯಂತ ಧೈರ್ಯಶಾಲಿ ಪೊಲೀಸ್ ಅಧಿಕಾರಿಯೊಬ್ಬರು, ಅಜ್ಮಲ್ ಕಸಬ್‌ನನ್ನು ಜೀವಂತವಾಗಿ ಸೆರೆಹಿಡಿಯಲು ತನ್ನ ಪ್ರಾಣವನ್ನೇ ಅರ್ಪಿಸಿದರು. ಪಾಕಿಸ್ತಾನದಲ್ಲಿರುವ ಆತನ ಹಳ್ಳಿ ಮತ್ತು ಮನೆ ವಿಳಾಸವನ್ನು ನಾವು ಗುರುತಿಸಿದ್ದೇವು. ಆದರೆ ಅಂತಿಮವಾಗಿ ಇದ್ಯಾವುದರ ಲಾಭವೂ ನಮಗೆ ಆಗಲಿಲ್ಲ ಎಂದು ಪರೋಕ್ಷವಾಗಿ ಹಿಂದಿನ ಸರ್ಕಾರಗಳ ನೀತಿಯನ್ನು ತಿರುವನಂತಪುರಂ ಕಾಂಗ್ರೆಸ್ ಸಂಸದ ಟೀಕಿಸಿದರು.

ಆದರೆ ಈಗ ಭಯೋತ್ಪಾದನೆಯನ್ನು ಎದುರಿಸುವ ಭಾರತದ ನೀತಿಯಲ್ಲಿ ಭಾರೀ ಬದಲಾವಣೆಯಾಗಿದೆ. ಉರಿ, ಪುಲ್ವಾಮಾ ಮತ್ತು ಪಹಲ್ಗಾಮ್ ದಾಳಿಯ ನಂತರ ಭಯೋತ್ಪಾದಕರ ವಿರುದ್ಧ ಭಾರತ ಕೈಗೊಂಡ ಮಿಲಿಟರಿ ಕಾರ್ಯಾಚರಣೆಗಲು, ಭಾರತದ ಬದಲಾದ ನೀತಿಗೆ ಸಾಕ್ಷಿಯಾಗಿವೆ. ಉಗ್ರರನ್ನು ಸೆಬಡಿಯಲು ನಾವು ಈಗ ಗಡಿಯನ್ನು ದಾಟಿ ಮುನ್ನುಗ್ಗಲು ಹಿಂಜರಿಯುವುದಿಲ್ಲ ಎಂದು ಸರ್ವಪಕ್ಷ ನಿಯೋಗದ ಸದಸ್ಯ ಕೇಂದ್ರ ಸರ್ಕಾರವನ್ನು ಶ್ಲಾಘಿಸಿದರು. ಪ್ರಧಾನಿ ಮೋದಿ ಪರವಾಗಿ ಶಶಿ ತರೂರ್ ಹೇಳಿಕೆಗಳನ್ನು ನೀಡುತ್ತಿರುವುದು ಹಲವರ ಹುಬ್ಬೇರಿಸಿದೆ. ಭಯೋತ್ಪಾದಕರಿಗೆ ಅವರ ಭಾಷೆಯಲ್ಲೇ ಪ್ರತ್ಯುತ್ತರ ನೀಡುವುದಾಗಿ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ಪಷ್ಟಪಡಿಸಿದ್ದಾರೆ.




### ಕಾಂಗ್ರೆಸ್ ಕಿಡಿ

ಇನ್ನು ಭಯೋತ್ಪಾದನೆಗೆ ಸಂಬಂಧಿಸಿದಂತೆ ಶಶಿ ತರೂರ್ ನೀಡುತ್ತಿರುವ ಹೇಳಿಕೆಗಳನ್ನು ಪ್ರತಿಪಕ್ಷ ಕಾಂಗ್ರೆಸ್ ತೀವ್ರವಾಗಿ ಟೀಕಿಸಿದೆ. ಶಶಿ ತರೂರ್ ಉದ್ದೇಶಪೂರ್ವಕವಾಗಿ ಭಯೋತ್ಪಾದನೆಯನ್ನು ತಡೆಗಟ್ಟುವ ಹಿಂದಿನ ಸರ್ಕಾರಗಳ ಪ್ರಯತ್ನಗಳನ್ನು ಮರೆಮಾಚುತ್ತಿದ್ದಾರೆ ಎಂದು ಕಾಂಗ್ರೆಸ್ ಹರಿಹಾಯ್ದಿದೆ.

### ಹಣೆ ಮೇಲಿನ ಸಿಂಧೂರದ ಬಣ್ಣ

ಪಹಲ್ಗಾಮ್‌ನಲ್ಲಿ ನಮ್ಮ ಸಹೋದರಿಯ ಸಿಂಧೂರ ಅಳಿಸಿದ ಉಗ್ರರ ರಕ್ತಹರಿಸಿಯೇ ಭಾರತ ವಿರಮಿಸಲಿದೆ. ಸಿಂಧೂರದ ಬಣ್ಣ ಕೆಂಪು ಹಾಗೆಯೇ ರಕ್ತದ ಬಣ್ಣ ಕೂಡ ಕೆಂಪು ಎಂದು ಶಶಿ ತರೂರ್ ಮಾರ್ಮಿಕವಾಗಿ ಹೇಳಿದರು.


ಈ ಕುರಿತು ಮಾತನಾಡಿರುವ ಕಾಂಗ್ರೆಸ್ ನಾಯಕ ಉದಿತ್ ರಾಜ್, ಕಾಂಗ್ರೆಸ್ ಸಂಸದ ಶಶಿ ತರೂರ್ ಬಿಜೆಪಿಯ ಸೂಪರ್ ವಕ್ತಾರರಾಗಿ ಬದಲಾಗಿದ್ದಾರೆ.

ಅವರು ಬಿಜೆಪಿ ನಾಯಕರಿಗಿಂತ ಹೆಚ್ಚಾಗಿ ಪ್ರಧಾನಿ ಮೋದಿ ಅವರ ಚಮಚಾಗಿರಿ (ಹೊಗಳುಭಟ) ಮಾಡುತ್ತಿದ್ದಾರೆ. ಭಯೋತ್ಪಾದನೆಯನ್ನು ನಿಗ್ರಹಿಸಲು ಹಿಂದಿನ ಸರ್ಕಾರಗಳು ಏನು ಮಾಡುತ್ತಿದ್ದವು ಎಂದು ಅವರಿಗೆ ತಿಳಿದಿದೆಯೇ

ಕೇಂದ್ರ ಸರ್ಕಾರ ಭಾರತೀಯ ಸಶಸ್ತ್ರ ಪಡೆಗಳಿಗೆ ಆಪರೇಷನ್ ಸಿಂಧೂರದ ಕ್ರೆಡಿಟ್ ನೀಡುತ್ತಿದ್ದರೆ, ಶಶಿ ತರೂರ್ ಬಿಜೆಪಿಯ ಪ್ರಚಾರದ ವಕ್ತಾರರಂತೆ ವರ್ತಿಸುತ್ತಿದ್ದಾರೆ ಎಂದು ಉದಿತ್ ರಾಜ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.


> ಭಾರತ ಮಾತ್ರವಲ್ಲದೆ, ಪಾಶ್ಚಿಮಾತ್ಯ ಗುಪ್ತಚರ ಸಂಸ್ಥೆಗಳು ಕೂಡ, ಮುಂಬೈನಲ್ಲಿ ಹಂತಕರಿಗೆ ಪ್ರತಿದಿನ ನಿಮಿಷ ನಿಮಿಷ ಸೂಚನೆಗಳನ್ನು ನೀಡುತ್ತಿದ್ದ ಪಾಕಿಸ್ತಾನಿ ಉಗ್ರ ನಾಯಕರ ಧ್ವನಿಮುದ್ರಿಕೆಗಳನ್ನು ಹೊಂದಿದ್ದವು. ಆದರೆ ಇದ್ಯಾವುದರ ಪ್ರಯೋಜನವನ್ನೂ ಭಾರತ ಪಡೆಯಲಿಲ್ಲ. ಈ ದಾಳಿಯ ರೂವಾರಿಗಳನ್ನು ಶಿಕ್ಷೆಗೆ ಗುರಿಪಡಿಸುವುದು ಬಿಡಿ, ವಿಚಾರಣೆಗೆ ಒಳಪಡಿಸಲೂ ನಮ್ಮಿಂದ ಸಾಧ್ಯವಾಗಲಿಲ್ಲ ಎಂದು ಶಶಿ ತರೂರ್ ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಸಂಸದ ಉದಿತ್ ರಾಜ್ ಈ ಹಿಂದೆ ಬಿಜೆಪಿ ಪಕ್ಷದಲ್ಲಿದ್ದರು. ಭಯೋತ್ಪಾದನೆ ವಿರುದ್ಧ ಭಾರತದ ಸಂದೇಶವನ್ನು ವಿದೇಶಕ್ಕೆ ಕೊಂಡೊಯ್ಯುವ ಏಳು ಭಾರತೀಯ ನಿಯೋಗಗಳಲ್ಲಿ ಒಂದನ್ನು ಮುನ್ನಡೆಸಲು, ಕಾಂಗ್ರೆಸ್ ಸೂಚಿಸಿದ್ದ ನಾಲ್ವರು ಸಂಸದರಲ್ಲಿ ಶಶಿ ತರೂರ್ ಹೆಸರು ಇರಲಿಲ್ಲ. ಅಲ್ಲದೇ ಕೇಂದ್ರದ ಪರ ಮಾತನಾಡುತ್ತಿದ್ದ ಶಶಿ ತರೂರ್ ಅವರು ಪಕ್ಷದ ಲಕ್ಷ್ಮಣ ರೇಖೆ ದಾಟದಂತೆ ಎಚ್ಚರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.



# ನಿಧಿ ಜೊತೆ ಪವನ್ ಕಲ್ಯಾಣ್ ಮಸ್ತ್ ಡ್ಯಾನ್ಸ್

ಹರಿ ಹರ ವೀರ ಮಲ್ಲು ಚಿತ್ರದ ಸಾಂಗ್ ರಿಲೀಸ್ ತೆಲುಗು ನಟ ಪವನ್ ಕಲ್ಯಾಣ್ ನಟನೆಯ 'ಹರಿ ಹರ ವೀರ ಮಲ್ಲು' ಚಿತ್ರದ ಮೊದಲ ಸಾಂಗ್ ರಿಲೀಸ್ ಆಗಿದೆ. ಕನ್ನಡತಿ ನಿಧಿ ಅಗರ್ವಾಲ್ ಜೊತೆ ಪವನ್ ಮಸ್ತ್ ಆಗಿ ಹೆಜ್ಜೆ ಹಾಕಿದ್ದಾರೆ. ಕ್ರಿಶ್ ಮತ್ತು ಜ್ಯೋತಿ ಕೃಷ್ಣ ನಿರ್ದೇಶನದ ಈ ಸಿನಿಮಾದಲ್ಲಿ ಪವನ್ ಕಲ್ಯಾಣ್‌ಗೆ ನಾಯಕಿಯಾಗಿ ನಿಧಿ ನಟಿಸಿದ್ದಾರೆ. ಈ ಚಿತ್ರವು ಎರಡು ಭಾಗಗಳಲ್ಲಿ ರಿಲೀಸ್ ಆಗಲಿದೆ. 'ಹರಿ ಹರ ವೀರ ಮಲ್ಲು ಭಾಗ 1'ರ ಮೊದಲ ಹಾಡು ರಿಲೀಸ್ ಆಗಿದೆ. 'ತಾರಾ ತಾರಾ ನಾ ಕಲ್ಲು' ಸಾಂಗ್‌ನಲ್ಲಿ ನಿಧಿ ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಪವನ್ ಜೊತೆಗಿನ ನಿಧಿ ಜಬರ್‌ದಸ್ತ್ ಆಗಿ ಹೆಜ್ಜೆ ಹಾಕಿದ್ದಾರೆ. ಈ ಜೋಡಿ ಅಭಿಮಾನಿಗಳಿಗೂ ಇಷ್ಟ ವಾಗಿದೆ.



17ನೇ ಶತಮಾನದ ಕಥೆಯಲ್ಲಿ ಯೋಧನಾಗಿ ನಟ ಕಾಣಿಸಿಕೊಂಡಿದ್ದಾರೆ. ಪವನ್ ಕಲ್ಯಾಣ್ ಮತ್ತು ನಿಧಿ ಜೊತೆ ಬಾಬಿ ಡಿಯೋಲ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ರಾಜಕೀಯದಲ್ಲಿ ಪವನ್ ಕಲ್ಯಾಣ್ ಬ್ಯುಸಿಯಿದ್ದ ಹಿನ್ನೆಲೆ ಈ ಚಿತ್ರ ಅರ್ಧಕ್ಕೆ ನಿಂತಿತ್ತು. ಕೊನೆಗೂ ಬಿಡುವು ಮಾಡಿಕೊಂಡು 'ಹರಿ ಹರ ವೀರ ಮಲ್ಲು' ಚಿತ್ರವನ್ನು ನಟ ಮುಗಿಸಿಕೊಟ್ಟಿದ್ದಾರೆ. ಜೂನ್ 12ರಂದು ಕನ್ನಡ, ತೆಲುಗು ಸೇರಿದಂತೆ ಬಹುಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಲಿದೆ. ಈ ಚಿತ್ರದ ಜೊತೆ ಓಜಿ, ಶ್ರೀಲೀಲಾ ಜೊತೆಗಿನ ಉಸ್ತಾದ್ ಭಗತ್ ಸಿಂಗ್ ಚಿತ್ರಗಳು ಪವನ್ ಕಲ್ಯಾಣ್ ಕೈಯಲ್ಲಿದೆ.



# ಬಿಗ್ ಬಾಸ್ ಖ್ಯಾತಿಯ ದೀಪಿಕಾ ಕಕ್ಕರ್‌ಗೆ ಕ್ಯಾನ್ಸರ್

ಹಿಂದಿ ಕಿರುತೆರೆಯ ಜನಪ್ರಿಯ ನಟಿ ದೀಪಿಕಾ ಕಕ್ಕರ್‌ಗೆ 2ನೇ ಹಂತದ ಯಕೃತ್‌ಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ. ಈ ವಿಚಾರವನ್ನು ಸೋಷಿಯಲ್ ಮೀಡಿಯಾದಲ್ಲಿ ನಟಿ ತಿಳಿಸಿದ್ದಾರೆ. ಈ ಸುದ್ದಿ ಕೇಳಿ ಫ್ಯಾನ್ಸ್‌ಗೆ ಶಾಕ್ ಆಗಿದೆ. ನಟಿಯ ಇನ್ಸ್ಟಾಗ್ರಾಂ ಪೋಸ್ಟ್‌ನಲ್ಲಿ, ನಿಮಗೆಲ್ಲರಿಗೂ ತಿಳಿದಿರುವಂತೆ ಕಳೆದ ಕೆಲವು ವಾರಗಳು ನನಗೆ ತುಂಬಾ ಕಷ್ಟಕರವಾಗಿತ್ತು. ನನ್ನ ಹೊಟ್ಟೆಯ ಮೇಲ್ಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ಹೋದಾಗ ಲಿವರ್‌ನಲ್ಲಿ ಟೆನ್ನಿಸ್ ಚೆಂಡಿನ ಗಾತ್ರದ ಗೆಡ್ಡೆ ಇರುವುದು ತಿಳಿಯಿತು. ಆ ಗೆಡ್ಡೆ ಎರಡನೇ ಹಂತದ ಮಾರಕ ಕ್ಯಾನ್ಸರ್ ಎಂದು ಗೊತ್ತಾಯ್ತು. ನಾನು ನೋಡಿದ ಅತ್ಯಂತ ಕಷ್ಟಕರ ಸಮಯಗಳಲ್ಲಿ ಇದು ಒಂದು ಎಂದಿದ್ದಾರೆ. ಕ್ಯಾನ್ಸರ್ ವಿಚಾರ ತಿಳಿದ ಮೇಲೆ ನಾನು ಈಗ ಪಾಸಿಟಿವ್ ಆಗಿ ಇದ್ದೇನೆ. ಕ್ಯಾನ್ಸರ್ ಅನ್ನು ಎದುರಿಸಿ ಬಲಶಾಲಿಯಾಗಿ ಹೊರಬರಲು ದೃಢನಿಶ್ಚಯ ಮಾಡಿದ್ದೇನೆ. ನನ್ನ ಇಡೀ ಕುಟುಂಬ ನನ್ನೊಂದಿಗೆ ಇದೆ. ನಿಮ್ಮೆಲ್ಲರ ಪ್ರೀತಿ ಮತ್ತು ಪ್ರಾರ್ಥನೆಗಳು ನನ್ನೊಂದಿಗೆ ಇದೆ. ದಯವಿಟ್ಟು ನನಗಾಗಿ ಪ್ರಾರ್ಥಿಸಿ ಎಂದು ಬರೆದುಕೊಂಡಿದ್ದಾರೆ. ಕ್ಯಾನ್ಸರ್‌ನಿಂದ ಮುಕ್ತರಾಗಲು ನಟಿ ಸೂಕ್ತ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸದ್ಯ ದೀಪಿಕಾಗೆ ಕ್ಯಾನ್ಸರ್ ಎಂದು ಸುದ್ದಿ ಕೇಳಿ ಫ್ಯಾನ್ಸ್ ಕಂಗಾಲಾಗಿದ್ದಾರೆ. ಆದಷ್ಟು ಬೇಗ ಅವರು ಗುಣಮುಖರಾಗಲಿ ಎಂದು ಅಭಿಮಾನಿಗಳು ಪ್ರಾರ್ಥಿಸುತ್ತಿದ್ದಾರೆ. ಸಲ್ಮಾನ್ ಖಾನ್ ನಿರೂಪಣೆಯ 'ಬಿಗ್ ಬಾಸ್ ಹಿಂದಿ 12'ರಲ್ಲಿ ದೀಪಿಕಾ ವಿನ್ನರ್ ಆಗಿದ್ದರು. ಕಿರುತೆರೆ ಹಲವು ಸೀರಿಯಲ್‌ನಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಶೋಯೆಬ್ ಇಬ್ರಾಹಿಂ ಮದುವೆಯಾಗಿದ್ದಾರೆ. 2023ರಲ್ಲಿ ನಟಿ ಜನ್ಮ ನೀಡಿದರು.

ಎರಡನೇ ಹಂತದ ಮಾರಕ ಕ್ಯಾನ್ಸರ್

# ಸೂಪರ್ ಯೋಧನಾಗಿ ತೇಜ್ ಸಜ್ಜಾ ಎಂಟ್ರಿ


ಆಕ್ಷನ್ ಪ್ಯಾಕ್ಡ್ 'ಮಿರಾಯ್' ಚಿತ್ರದ ಟೀಸರ್ ಔಟ್ ಹನುಮಾನ್ ಖ್ಯಾತಿಯ ತೇಜ್ ಸಜ್ಜಾ ನಟನೆಯ 'ಮಿರಾಯ್' ಚಿತ್ರದ ಟೀಸರ್ ರಿಲೀಸ್ ಆಗಿದೆ. ಆಕ್ಷನ್ ಪ್ಯಾಕ್ಡ್ ಥ್ರಿಲ್ಲಿಂಗ್ ಟೀಸರ್ ಸಿನಿರಸಿಕರಿಗೆ ಕಿಕ್ ಕೊಟ್ಟಿದೆ. ಸೂಪರ್ ಯೋಧನಾಗಿ ತೇಜ್ ಅಭಿನಯಿಸಿದ್ದು, ಖಳನಾಯಕನಾಗಿ ಮನೋಜ್ ಮಂಚು ತೊಡೆ ತಟ್ಟಿದ್ದಾರೆ.

ಭಾರತದ ಶ್ರೀಮಂತ ಐತಿಹಾಸಿಕ ಪರಂಪರೆಗೆ ಆಧುನಿಕ ಸಾಹಸದ ಟಚ್ ಕೊಟ್ಟು 'ಮಿರಾಯ್' ಟೀಸರ್ ಕಟ್ ಮಾಡಲಾಗಿದೆ. 'ಮಿರಾಯ್' ಚಿತ್ರದಲ್ಲಿ ಭರ್ಜರಿ ಆಕ್ಷನ್‌ಗಳೇ ಇವೆ. ಆಕ್ಷನ್ ಚಿತ್ರವನ್ನ ಕಾರ್ತಿಕ್ ಘಟ್ಟಮನೇನಿ ಡೈರೆಕ್ಷನ್ ಮಾಡಿದ್ದಾರೆ. ವಿಶೇಷವಾಗಿ ಈ ಚಿತ್ರ 2ಡಿ ಮತ್ತು 3ಡಿ ರೂಪದಲ್ಲಿ ರಿಲೀಸ್ ಆಗುತ್ತಿದೆ. ಅತಿ ದೊಡ್ಡ ಮಟ್ಟದಲ್ಲಿಯೇ ಈ ಚಿತ್ರ ರಿಲೀಸ್ ಆಗುತ್ತಿದೆ. ಇದೇ ವರ್ಷ ಸೆ.5ರಂದು 'ಮಿರಾಯ್' ಸಿನಿಮಾ 8 ಭಾಷೆ ಯಲ್ಲಿಯೇ ತೆರೆಗೆ ಬರಲಿದೆ. ಈ ಮೂಲಕ ಸಿನಿಮಾದ ನಾಯಕ ತೇಜ್ ಸಜ್ಜಾ ಮತ್ತೊಮ್ಮೆ ತಮ್ಮ ಅಭಿಮಾನಿಗಳಿಗೆ ಹೊಸ ಅನುಭವ ಕೊಡಲು ಬರುತ್ತಿದ್ದಾರೆ. 'ಮಿರಾಯ್' ಸಿನಿಮಾದ ಮೂಲಕ ನಾಯಕ ನಟ ತೇಜ್ ಸಜ್ಜಾ ಮತ್ತೆ ಸೂಪರ್ ಹೀರೋ ಆಗಿಯೇ ಬರ್ತಿದ್ದಾರೆ. ಮಿರಾಯ್ ಎಂದರೆ ಭವಿಷ್ಯ ಎಂದರ್ಥ. ಅಶೋಕ ಚಕ್ರವರ್ತಿ ಹಾಗೂ ಆತನ 9 ರಹಸ್ಯದ ಕಥೆಯನ್ನು ಸಿನಿಮಾ ಹೇಳುತ್ತದೆ. ದಕ್ಷಿಣ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ 'ಪೀಪಲ್ ಮೀಡಿಯಾ ಫ್ಯಾಕ್ಟರಿ'ಯಡಿ ಟಿ.ಜಿ.ವಿಶ್ವಪ್ರಸಾದ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.




# ರೆಡ್ ಡ್ರೆಸ್‌ನಲ್ಲಿ ದೀಪಿಕಾ ಪಡುಕೋಣೆ

## ಗ್ಲ್ಯಾಮರಸ್ ಫೋಟೋಶೂಟ್



ಬಾಲಿವುಡ್ ಬೆಡಗಿ ದೀಪಿಕಾ ಪಡುಕೋಣೆ ಮುದ್ದು ಮಗಳ ಆರೈಕೆಯಲ್ಲಿ ತೊಡಗಿಸಿಕೊಂಡಿ ದ್ದಾರೆ. ಬ್ರೇಕ್‌ನ ಬಳಿಕ ಮತ್ತೆ ನಟಿ ಆಕ್ಟೀವ್ ಆಗಿದ್ದಾರೆ.

ಹೊಸ ಫೋಟೋಶೂಟ್‌ನಲ್ಲಿ ರೆಡ್ ಡ್ರೆಸ್‌ನಲ್ಲಿ ದೀಪಿಕಾ ಗ್ಲ್ಯಾಮರಸ್ ಆಗಿ ಕಾಣಿಸಿಕೊಂಡಿದ್ದಾರೆ.

ಮಗುವಿನ ತಾಯಿ ಆದ್ಮೇಲೆಯೂ ದೀಪಿಕಾ ಫಿಟ್‌ನೆಸ್ ಕಡೆ ಹೆಚ್ಚು ಗಮನ ವಹಸುತ್ತಿದ್ದಾರೆ. ಬ್ಯೂಟಿ, ಫಿಟ್‌ನೆಸ್, ವರ್ಕೌಟ್ ಅಂತ ಮಗುವಿನ ಪಾಲನೆಯೊಂದಿಗೆ ಮಾಡುತ್ತಿದ್ದಾರೆ. ಇದರ ನಡುವೆ ನಟಿಯ ಸ್ಟೈಲೀಶ್ ಫೋಟೋಶೂಟ್ ಪಡ್ಡೆಹುಡುಗರ ನಿದ್ದೆಗೆಡಿಸಿದೆ. ಕೆಂಪು ಬಣ್ಣದ ಗೌನ್‌ನಲ್ಲಿ ನಟಿ ಕಂಗೊಳಿಸಿದ್ದಾರೆ. ವಿವಿಧ ಭಂಗಿಯಲ್ಲಿ ಜವಾನ್ ಬೆಡಗಿ ಫೋಟೋಶೂಟ್ ಮಾಡಿಸಿದ್ದಾರೆ. ಗೌನ್ ಜೊತೆ ದುಬಾರಿ ಬೆಲೆ ಆಭರಣ ಧರಿಸಿ ಗ್ಲ್ಯಾಮರಸ್ ಅವತಾರ ತಾಳಿದ್ದಾರೆ. ಇದೀಗ ಮತ್ತೆ ಕ್ಯಾಮೆರಾ ಮುಂದೆ ನಿಲ್ಲಲು ನಟಿ ಸಜ್ಜಾಗಿದ್ದಾರೆ. ಶಾರುಖ್ ಖಾನ್ ನಟನೆಯ 'ಕಿಂಗ್' ಸಿನಿಮಾದಲ್ಲಿ ದೀಪಿಕಾ ಪಡುಕೋಣೆ ಪವರ್‌ಫುಲ್ ಪಾತ್ರದಲ್ಲಿ ನಟಿಸಲಿದ್ದಾರೆ. ಈ ಬಗ್ಗೆ ಶಾರುಖ್ ಸಂದರ್ಶನವೊಂದರಲ್ಲಿ ಖಚಿತಪಡಿಸಿದ್ದಾರೆ.

'ಸ್ಪಿರಿಟ್' ಸಿನಿಮಾ ದೀಪಿಕಾ ಕೈತಪ್ಪಿದ್ರೂ ಕೂಡ ಅವರಿಗೆ ಬೇಡಿಕೆಯೇನು ಕಮ್ಮಿಯಾಗಿಲ್ಲ. 'ಕಲ್ಕಿ 2878 ಎಡಿ' ಸಿನಿಮಾದ ಪಾರ್ಟ್ 2ನಲ್ಲಿ ನಟಿಸಲಿದ್ದಾರಂತೆ. ಈ ವರ್ಷದ ಅಂತ್ಯದಲ್ಲಿ ಸಿನಿಮಾ ಪ್ರಿ ಪ್ರೊಡಕ್ಷನ್ ಕೆಲಸ ಶುರುವಾಗಲಿದೆ ಎನ್ನಲಾಗಿದೆ. ಇದರೊಂದಿಗೆ ದಕ್ಷಿಣದ ಸಿನಿಮಾದಲ್ಲಿ ನಟಿಸಲು ಅವರಿಗೆ ಅವಕಾಶ ಅರಸಿ ಬರುತ್ತಿವೆ.

ವಿವಿಧ ಭಂಗಿಯಲ್ಲಿ ಜವಾನ್ ಬೆಡಗಿ



# ಟೈಗರ್ ಶ್ರಾಫ್ ಜೊತೆ ಜಾನ್ವಿ ಕಪೂರ್ ಡ್ಯುಯೆಟ್

ಬಾಲಿವುಡ್ ಬೆಡಗಿ ಜಾನ್ವಿ ಕಪೂರ್‌ಗೆ ಮತ್ತೊಂದು ಬಂಪರ್ ಅವಕಾಶ ಸಿಕ್ಕಿದೆ. ಟೈಗರ್ ಶ್ರಾಫ್ ನಟನೆಯ ಹೊಸ ಸಿನಿಮಾದಲ್ಲಿ ಜಾನ್ವಿ ನಾಯಕಿಯಾಗಿ ನಟಿಸುವ ಚಾನ್ಸ್ ಸಿಕ್ಕಿದೆ. ಜಾನ್ವಿ ನಟಿಸುವ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಗೆಲ್ಲದೇ ಇದ್ದರೂ ಅವರಿಗೆ ಬೇಡಿಕೆಯೂ ಕಮ್ಮಿಯಾಗಿಲ್ಲ. ಸದ್ಯ ಟೈಗರ್ ಶ್ರಾಫ್ ಜೊತೆ ಜೋಡಿಯಾಗಿ ನಟಿಸುವ ಅವಕಾಶ ಸಿಕ್ಕಿದೆ. ಇದೊಂದು ರಿವೆಂಜ್ ಲವ್ ಸ್ಟೋರಿಯಾಗಿದ್ದು, ಈ ವರ್ಷದ ಅಂತ್ಯದಲ್ಲಿ ಶೂಟಿಂಗ್ ಶುರುವಾಗಲಿದೆ. ಮುಂದಿನ ವರ್ಷ ಚಿತ್ರ ರಿಲೀಸ್ ಆಗಲಿದೆ. ಈ ಸಿನಿಮಾಗೆ ರಾಜ್ ಮೆಹ್ತಾ ನಿರ್ದೇಶನ ಮಾಡಲಿದ್ದಾರೆ. ಅಮ್ಮ ಶ್ರೀದೇವಿಯಂತೆ ತಾವು ಕೂಡ ಬಹುಭಾಷೆಗಳಲ್ಲಿ ನಟಿಸಬೇಕು ಎಂದು ದಕ್ಷಿಣದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹೊಸ ಬಗೆಯ ಕಥೆ ಮತ್ತು ಪಾತ್ರಕ್ಕೆ ನಟಿ ಹೆಚ್ಚು ಒತ್ತು ನೀಡುತ್ತಿದ್ದಾರೆ. ಸಿದ್ಧಾರ್ಥ್ ಮಲ್ಹೋತ್ರಾ ಜೊತೆ ಸಿನಿಮಾ, ದೇವರ 2, ರಾಮ್ ಚರಣ್ ಜೊತೆ 'ಪೆಡ್ಡಿ' ಚಿತ್ರ ಸೇರಿದಂತೆ ಹಲವು ಪ್ರಾಜೆಕ್ಟ್‌ಗಳು ನಟಿಯ ಕೈಯಲ್ಲಿವೆ.

# ಸೈನಿಕನಾಗಲು ಹೊರಟಿದ್ದವ

## ಆರ್‌ಸಿಬಿಗೆ ಬಂದ ಕಥೆ..!

ಜಿತೇಶ್ ಮೋಹನ್ ಶರ್ಮಾ ಈ ಒಂದು ಹೆಸರು ನಿನ್ನೆಯಿಂದ ಮನೆಮಾತಾಗಿದೆ. ಅಂತಹದೊಂದು ಸ್ಮರಣೀಯ ಇನಿಂಗ್ಸ್ ಆಡಿದ ಜಿತೇಶ್ ಶರ್ಮಾ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಅದು ಸಹ ಬರೋಬ್ಬರಿ 227 ರನ್‌ಗಳ ಗುರಿಯನ್ನು ಬೆನ್ನತ್ತುವ ಮೂಲಕ ಎಂಬುದು ವಿಶೇಷ. ಅಂದರೆ ಆರ್‌ಸಿಬಿ ತಂಡಕ್ಕೆ ಕಳೆದ 17 ವರ್ಷಗಳಲ್ಲಿ 210 ಕ್ಕಿಂತ ಹೆಚ್ಚಿನ ರನ್ ಚೇಸ್ ಮಾಡಿ ಗೆದ್ದ ಇತಿಹಾಸವಿರಲಿಲ್ಲ, ಆದರೆ ಈ ಬಾರಿ ಹೊಸ ಇತಿಹಾಸ ಬರೆಯುವಲ್ಲಿ ಜಿತೇಶ್ ಶರ್ಮಾ ಯಶಸ್ವಿಯಾಗಿದ್ದಾರೆ.

ಅಂದಹಾಗೆ ಜಿತೇಶ್ ಶರ್ಮಾ ಮಹಾರಾಷ್ಟ್ರದ ಅಮರಾವತಿ ಮೂಲದವರು. ಈ ಹಿಂದೆ ಪಂಜಾಬ್ ಕಿಂಗ್ಸ್ ಪರ ಆಡಿದ್ದ ಯುವ ವಿಕೆಟ್ ಕೀಪರ್‌ನನ್ನು ಈ ಬಾರಿ ಆರ್‌ಸಿಬಿ ಆಯ್ಕೆ ಮಾಡಿಕೊಂಡಿತ್ತು. ಅದು ಕೂಡ ಬಿಗ್ ಹಿಟ್ಟರ್ ಎಂಬ ಟ್ಯಾಗ್ ಲೈನ್‌ನೊಂದಿಗೆ. ಅಂದರೆ ಮೆಗಾ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ಜಿತೇಶ್ ಶರ್ಮಾ ಅವರನ್ನು ಆಯ್ಕೆ ಮಾಡಲು ಮುಖ್ಯ ಕಾರಣ, ಅವರ ಸಿಕ್ಸ್ ಬಾರಿಸುವ ಸಾಮರ್ಥ್ಯ. ಯಾವುದೇ ಸಂದರ್ಭದಲ್ಲೂ ಸಿಕ್ಸ್ ಸಿಡಿಸುವ ಕಲೆ ಜಿತೇಶ್ ಶರ್ಮಾಗೆ ಕರಗತವಾಗಿತ್ತು. ಇತ್ತ ಆರ್‌ಸಿಬಿ ಕೂಡ ವಿಕೆಟ್ ಕೀಪರ್ ಬ್ಯಾಟರ್‌ನ ಹುಡುಕಾಟದಲ್ಲಿತ್ತು. ಈ ವೇಳೆ ದಿನೇಶ್ ಕಾರ್ತಿಕ್ ಕಣ್ಣಿಗೆ ಬಿದ್ದವನೇ ಜಿತೇಶ್ ಶರ್ಮಾ. ಜಿತೇಶ್ ಶರ್ಮಾ ಬಿಗ್ ಹಿಟ್‌ಗಳ ಮೂಲಕ ಪಂದ್ಯ ಗೆಲ್ಲಿಸಿಕೊಡಬಲ್ಲ ಆಟಗಾರ. ಹಾಗಾಗಿ ನಾವು ಆತನಿಗಾಗಿ ಬಿಡ್ ಮಾಡಿದ್ದೇವೆ ಎಂದು ಈ ಹಿಂದೊಮ್ಮೆ ಡಿಕೆ ಹೇಳಿದ್ದರು. ಇದೀಗ ದಿನೇಶ್ ಕಾರ್ತಿಕ್ ಅವರ ಈ ಹೇಳಿಕೆಯನ್ನು ಜಿತೇಶ್ ನಿಜವಾಗಿ ಸಿದ್ದಾರೆ. ಅದು ಕೂಡ ಕೇವಲ 33 ಎಸೆತಗಳಲ್ಲಿ ಅಜೇಯ 85 ರನ್‌ಗಳನ್ನು ಬಾರಿಸುವ ಮೂಲಕ ಎಂಬುದು ವಿಶೇಷ.

**ಸೈನಿಕನಾಗುವ ಕನಸು ಕಂಡಿದ್ದ ಜಿತೇಶ್:** ಜಿತೇಶ್ ಶರ್ಮಾ ಬಾಲ್ಯದಲ್ಲಿ ಯಾವತ್ತೂ ಕ್ರಿಕೆಟಿಗನಾಗಬೇಕೆಂದು ಕನಸು ಕಂಡಿರಲಿಲ್ಲ. ಬದಲಾಗಿ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದ. ಇದರ ನಡುವೆ ಮೋಜಿಗಾಗಿ ಕ್ರಿಕೆಟ್ ಆಡುತ್ತಿದ್ದರು ಅಷ್ಟೇ. ಅಲ್ಲದೆ 12ನೇ ತರಗತಿಯಲ್ಲಿ ಉತ್ತೀರ್ಣರಾದ ನಂತರ ಭಾರತೀಯ ಸೇನೆಗೆ ಸೇರಲು ಎನ್‌ಡಿಎ ಸೇರುವುದು ಅವರ ಗುರಿಯಾಗಿತ್ತು.

ಆದರೆ ಮಹಾರಾಷ್ಟ್ರ ರಾಜ್ಯ ಮಂಡಳಿಯು ರಾಜ್ಯ ಮಟ್ಟದಲ್ಲಿ ಕ್ರೀಡೆಗಳನ್ನು ಆಡುವ ವಿದ್ಯಾರ್ಥಿಗಳಿಗೆ 4% ಹೆಚ್ಚಿನ ಅಂಕಗಳನ್ನು ನೀಡುತ್ತಿದ್ದರು. ಅದರಂತೆ ಶೇ.4 ರಷ್ಟು ಹೆಚ್ಚುವರಿ ಅಂಕ ಪಡೆಯಲೆಂದು ಮೈದಾನಕ್ಕೆ ಇಳಿಯಲಾರಂಭಿಸಿದ. ಕ್ರಿಕೆಟ್ ಅಂಗಳಕ್ಕೆ ಇಳಿದ ಬಳಿಕ ಜಿತೇಶ್‌ಗೆ ಎದುರಾಗಿದ್ದೇ ಮುಂದಿನ ಗುರಿಯೇನು ಎಂಬ ಪ್ರಶ್ನೆ.

ಶಾಲೆಯಲ್ಲಿ ಸ್ಪೋರ್ಟ್ಸ್ ಫಾರ್ಮ್‌ನಲ್ಲಿ ಜಿತೇಶ್ ಶರ್ಮಾ ಬ್ಯಾಟರ್/ಬೌಲರ್ ಅಥವಾ ವಿಕೆಟ್ ಕೀಪರ್ ಎಂಬುದನ್ನು ಭರ್ತಿ ಮಾಡಲೇಬೇಕಿತ್ತು.

ಈ ವೇಳೆ ವಿಕೆಟ್ ಕೀಪರ್ ಪಟ್ಟಿಯಲ್ಲಿ ಕೇವಲ ಮೂವರ ಹೆಸರುಗಳು ಮಾತ್ರ ಕಾಣಿಸಿದ್ದವು. ಹೀಗಾಗಿ ಜಿತೇಶ್ ಶರ್ಮಾ ಕೂಡ ವಿಕೆಟ್ ಕೀಪರ್ ಎಂದು ಹೆಸರು ನೋಂದಾಯಿಸಿಕೊಂಡರು. ಅಲ್ಲಿಂದ ಜಿತೇಶ್ ಶರ್ಮಾ ಜೀವನವೇ ಬದಲಾಯಿತು. ಸೈನ್ಯಕ್ಕೆ ಸೇರಲು ಹೊರಟಿದ್ದ ಹುಡುಗನಿಗೆ ಕ್ರಿಕೆಟ್ ರುಚಿಸಲರಾಂಭಿಸಿತು. ಹಿರಿಯ ಆಟಗಾರರಿಂದ ಹಾಗೂ ಯೂಟ್ಯೂಬ್ ನೋಡಿ ಕ್ರಿಕೆಟ್ ಅನ್ನು ಕರಗತ ಮಾಡಲಾರಂಭಿಸಿದ. ಆ ಬಳಿಕ ಜಿತೇಶ್ ಶರ್ಮಾ ಹಿಂತಿರುಗಿ ನೋಡಿಲ್ಲ ಎನ್ನಬಹುದು.

ಕಮಲ್ ಹಾಸನ್ ಹೇಳಿಕೆಗೆ ಆಕ್ರೋಶ



# ಗೆಲುವಿನ ಬೆನ್ನಲ್ಲೇ ಅಭಿಮಾನಿಗಳಿಗೆ ಗುಡ್ ನ್ಯೂಸ್ ನೀಡಿದ ಡಿಕೆ



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಭರ್ಜರಿ ಪ್ರದರ್ಶನ ಮುಂದುವರೆಸಿದೆ. ಮಂಗಳವಾರ ನಡೆದ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಅಮೋಘ ಜಯ ಸಾಧಿಸುವ ಮೂಲಕ ಆರ್‌ಸಿಬಿ ತಂಡವು ಮೊದಲ ಕ್ವಾಲಿಫೈಯರ್ ಪಂದ್ಯಕ್ಕೆ ಅರ್ಹತೆ ಪಡೆದುಕೊಂಡಿದೆ. ಅದರಂತೆ ಮೇ 29 ರಂದು ನಡೆಯಲಿರುವ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿದೆ. ಈ ಪಂದ್ಯದಲ್ಲಿ ಆರ್‌ಸಿಬಿ ಪರ ಜೋಶ್ ಹೇಝಲ್‌ವುಡ್ ಕಣಕ್ಕಿಳಿಯಲಿರುವುದನ್ನು ಎಂದು ದಿನೇಶ್ ಕಾರ್ತಿಕ್ ಖಚಿತಪಡಿಸಿದ್ದಾರೆ.

ಎಲ್‌ಎಸ್‌ಜಿ ವಿರುದ್ಧದ ಪಂದ್ಯದ ಬಳಿಕ ಮಾತನಾಡಿದ ಡಿಕೆ, ಜೋಶ್ ಹೇಝಲ್‌ವುಡ್ ಸಂಪೂರ್ಣ ಫಿಟ್ ಆಗಿದ್ದು, ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಯಲು ಸಜ್ಜಾಗುತ್ತಿದ್ದಾರೆ. ಅದರಂತೆ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದ ಮೂಲಕ ಹೇಝಲ್‌ವುಡ್ ಮತ್ತೆ ಆರ್‌ಸಿಬಿ ಪರ ಕಾಣಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಇತ್ತ ಜೋಶ್ ಹೇಝಲ್‌ವುಡ್ ಅಲಭ್ಯತೆಯ ನಡುವೆ ಆರ್‌ಸಿಬಿ ತಂಡವು ಬೌಲಿಂಗ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ್ದರು. ಅದರಲ್ಲೂ ಕಳೆದ ಎರಡು ಪಂದ್ಯಗಳಲ್ಲಿ ಆರ್‌ಸಿಬಿ ವೇಗಿಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿರಲಿಲ್ಲ. ಇದೀಗ ಹೇಝಲ್‌ವುಡ್ ಪ್ಲೇಆಫ್‌ನಲ್ಲಿ ಕಣಕ್ಕಿಳಿಯುತ್ತಿರುವುದು ಆರ್‌ಸಿಬಿ ಪಾಲಿಗೆ ಪ್ಲಸ್ ಪಾಯಿಂಟ್. ಏಕೆಂದರೆ ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಅತ್ಯಧಿಕ ವಿಕೆಟ್ ಪಡೆದಿರುವುದು ಜೋಶ್ ಹೇಝಲ್‌ವುಡ್. ಕಳೆದ 10 ಪಂದ್ಯಗಳಲ್ಲಿ 36.5 ಓವರ್ ಮಾಡಿದ್ದ ಹೇಝಲ್‌ವುಡ್ ಒಟ್ಟು 18 ವಿಕೆಟ್ ಕಬಳಿಸಿದ್ದಾರೆ.

ಬೌಲಿಂಗ್‌ನಲ್ಲಿ ಕಳಪೆ ಪ್ರದರ್ಶನ

# ನಿಜಕ್ಕೂ ಇದು ನೋ ಬಾಲಾ

ಆರ್‌ಸಿಬಿ ಪರ ಜಿತೇಶ್ ಶರ್ಮಾ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಆದರೆ ಕೊನೆಯ ಹಂತದಲ್ಲಿ ರಿವರ್ಸ್ ಸ್ವೀಪ್ ಶಾಟ್ ಬಾರಿಸಲು ಹೋಗಿ ಜಿತೇಶ್ ಕ್ಯಾಚ್ ನೀಡಿದ್ದರು. ಅದೃಷ್ಟವಶಾತ್ ಅದು ನೋ ಬಾಲ್ ಆಗಿತ್ತು. ದಿಗ್ವೇಶ್ ರಾಥಿ ಬ್ಯಾಕ್ ಫೂಟ್ ನೋ ಬಾಲ್ ಮಾಡಿದ್ದರಿಂದ ಜಿತೇಶ್ ಶರ್ಮಾಗೆ ಜೀವದಾನ ಲಭಿಸಿತು.

ಇದರ ಬೆನ್ನಲ್ಲೇ ದಿಗ್ವೇಶ್ ರಾಥಿ ಅವರ ಕಾಲು ಸೈಡ್‌ಲೈನ್‌ಗೆ ತಾಗಿಲ್ಲ ಎಂಬ ವಾದ ಕೂಡ ಸೋಷಿಯಲ್ ಮೀಡಿಯಾದಲ್ಲಿ ಕೇಳಿ ಬಂದಿದೆ. ಹಾಗಿದ್ರೆ, ನಿಜಕ್ಕೂ ಅದು ನೋ ಬಾಲ್ ಆಗಿತ್ತಾ ಎಂದು ನೋಡುವುದಾದರೆ ಇಲ್ಲಿ ದಿಗ್ವೇಶ್ ರಾಥಿ ಅವರ ಶೂಸ್‌ನ ಸಣ್ಣ ಭಾಗ ರಿಟರ್ನ್ ಕ್ರೀಸ್‌ಗೆ (ಸೈಡ್ ಲೈನ್) ತಾಗಿದೆ. ಸೈಡ್ ನೋಬಾಲ್ ಎಂದು ಪರಿಗಣಿಸಲು ಲೈನ್ ದಾಟಬೇಕಿಲ್ಲ. ಅಂದರೆ ಸಾಮಾನ್ಯವಾಗಿ ಲೈನ್ ನೋ ಬಾಲ್ ನೀಡಬೇಕಿದ್ದರೆ ಬೌಲರ್‌ನ ಕಾಲು ಕ್ರೀಸ್ ದಾಟಿರಬೇಕು. ಆದರೆ ಸೈಡ್ ನೋಬಾಲ್ ವಿಷಯದಲ್ಲಿ ರಿಟರ್ನ್ ಕ್ರೀಸ್‌ಗೆ ಶೂಸ್‌ನ ಭಾಗ ತಾಗಿದರೆ ಸಾಕು. ಬದಲಾಗಿ ಕಾಲಿನ ಭಾಗ ಲೈನ್ ಅನ್ನು ದಾಟಬೇಕಾಗಿಲ್ಲ. ಅದರಂತೆ 17ನೇ ಓವರ್‌ನ ಮೊದಲ ಎಸೆತದ ವೇಳೆ ದಿಗ್ವೇಶ್ ರಾಥಿ ಅವರ ಹಿಂಗಾಲಿನ ಕೆಲ ಭಾಗ ರಿಟರ್ನ್ ಕ್ರೀಸ್‌ಗೆ ತಾಗಿದೆ. ಹೀಗಾಗಿಯೇ ಮೂರನೇ ಅಂಪೈರ್ ಅದನ್ನು ನೋ ಬಾಲ್ ಎಂದು ಪರಿಗಣಿಸಿದ್ದಾರೆ. ಹಾಗಾಗಿ ಸೋಷಿಯಲ್ ಮೀಡಿಯಾದಲ್ಲಿ ಮಾಡುತ್ತಿರುವ ನೋ ಬಾಲ್ ಅಲ್ಲ ಎಂಬ ವಾದಕ್ಕೆ ಯಾವುದೇ ಹುರುಳಿಲ್ಲ.



# ರನೌಟ್‌ಗೆ ಅಪೀಲ್ ಮಾಡುತ್ತಿದ್ದಂತೆ ಕೋಪಗೊಂಡ ಕೊಹ್ಲಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಲಕ್ನೋ ಸೂಪರ್ ಜೈಂಟ್ಸ್ ನಡುವಣ ಪಂದ್ಯವು ರಣರೋಚಕ ಹೋರಾಟಕ್ಕೆ ಸಾಕ್ಷಿಯಾಗಿತ್ತು. ಏಕಾನ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಲ್‌ಎಸ್‌ಜಿ 20 ಓವರ್‌ಗಳಲ್ಲಿ 227 ರನ್ ಕಲೆಹಾಕಿತು.



ಈ ಗುರಿಯನ್ನು ಬೆನ್ನತ್ತಿದ ಆರ್‌ಸಿಬಿ ಪರ ವಿರಾಟ್ ಕೊಹ್ಲಿ (54) ಅರ್ಧಶತಕ ಬಾರಿಸಿದ್ದರು. ಆ ಬಳಿಕ ಬಂದ ಜಿತೇಶ್ ಶರ್ಮಾ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಇದಾಗ್ಯೂ ಕೊನೆಯ 3 ಓವರ್‌ಗಳಲ್ಲಿ ಆರ್‌ಸಿಬಿ ತಂಡಕ್ಕೆ 28 ರನ್‌ಗಳ ಅವಶ್ಯಕತೆಯಿತ್ತು. ಇದರ ನಡುವೆ ದಿಗ್ವೇಶ್ ರಾಥಿ 17ನೇ ಓವರ್‌ನ ಕೊನೆಯ ಎಸೆತದಲ್ಲಿ ಜಿತೇಶ್ ಶರ್ಮಾ ಅವರನ್ನು ಮಂಕಡ್ ರನೌಟ್ ಮಾಡಿದ್ದರು. ಚೆಂಡೆಸೆಯುವ ಮುನ್ನ ಜಿತೇಶ್ ಕ್ರೀಸ್ ಬಿಟ್ಟಿದ್ದರಿಂದ ದಿಗ್ವೇಶ್ ಬೌಲಿಂಗ್ ಮಾಡದೇ ವಿಕೆಟ್‌ನ ಬೇಲ್ಸ್ ಎಗರಿಸಿದ್ದರು.

ಅಲ್ಲದೆ ರನೌಟ್‌ಗಾಗಿ ಫೀಲ್ಡ್ ಅಂಪೈರ್‌ನಲ್ಲಿ ಮನವಿ ಮಾಡಿದ್ದರು. ಇತ್ತ ದಿಗ್ವೇಶ್ ರನೌಟ್‌ಗಾಗಿ ಮನವಿ ಮಾಡುತ್ತಿದ್ದಂತೆ, ಅತ್ತ ಡ್ರೆಸ್ಸಿಂಗ್ ರೂಮ್‌ನಲ್ಲಿದ್ದ ವಿರಾಟ್ ಕೊಹ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಆಕ್ರೋಶದ ಸನ್ನಿವೇಶ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ದಿಗ್ವೇಶ್ ಅವರ ಮನವಿಯನ್ನು ಪರಿಶೀಲಿಸಿದ ಮೂರನೇ ಅಂಪೈರ್ ನಾಟೌಟ್ ನೀಡಿದ್ದರು. ಇದಕ್ಕೆ ಮುಖ್ಯ ಕಾರಣ ಅವರು ಬೌಲಿಂಗ್ ಆಯಕ್ಷನ್‌ನತ್ತ ದಾಪುಗಾಲಿಟ್ಟಿರುವುದು. ಅಂದರೆ ಮುಂಗಾಲನ್ನು ಕ್ರೀಸ್ ಮೇಲಿಟ್ಟು ಬೌಲಿಂಗ್ ಆಯಕ್ಷನ್ ತೋರಿಸಿ ಮಂಕಂಡಿಂಗ್ ರನೌಟ್ ಮಾಡುವಂತಿಲ್ಲ. ಇತ್ತ ದಿಗ್ವೇಶ್ ರಾಥಿ ಬೌಲಿಂಗ್‌ಗೆ ದಾಪುಗಾಲಿಟ್ಟಿದ್ದರಿಂದ ಮೂರನೇ ಅಂಪೈರ್ ಅದನ್ನು ನಾಟೌಟ್ ಎಂದು ಪರಿಣಿಸಿದರು. ಅದರಂತೆ ಕೊನೆಯ ಹಂತದಲ್ಲಿ ಸಿಕ್ಕ ಜೀವದಾನವನ್ನು ಬಳಸಿಕೊಂಡ ಜಿತೇಶ್ ಶರ್ಮಾ ಅಜೇಯ 85 ರನ್ ಬಾರಿಸಿ ಆರ್‌ಸಿಬಿ ತಂಡಕ್ಕೆ 6 ವಿಕೆಟ್‌ಗಳ ಜಯ ತಂದುಕೊಟ್ಟರು.

ಆಕ್ರೋಶದ ಸನ್ನಿವೇಶ ಕ್ಯಾಮೆರಾದಲ್ಲಿ ಸೆರೆ

# ಕ್ರೀಡಾ ಸ್ಫೂರ್ತಿ ರಿಷಭ್ ಪಂತ್ ಮಾದರಿ ನಡೆ

ಮನವಿ ಹಿಂಪಡೆದ ಪಂತ್

ಇಂಡಿಯನ್ ಪ್ರೀಮಿಯರ್ ಲೀಗ್‌ನ 70ನೇ ಪಂದ್ಯದಲ್ಲಿ ಹಲವು ನಾಟಕೀಯ ಸನ್ನಿವೇಶಗಳಿಗೆ ಸಾಕ್ಷಿಯಾಗಿತ್ತು. ಈ ನಾಟಕೀಯತೆ ನಡುವೆ ಕ್ರೀಡಾ ಸ್ಫೂರ್ತಿಯ ನಾಟಕ ಮಾಡಿದ್ದು ರಿಷಭ್ ಪಂತ್. ಲಕ್ನೋನ ಏಕಾನ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 227 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಆರ್‌ಸಿಬಿ ತಂಡವು 16.5 ಓವರ್‌ಗಳಲ್ಲಿ 199 ರನ್ ಕಲೆಹಾಕಿತು. ಆದರೆ 17ನೇ ಓವರ್‌ನ ಕೊನೆಯ ಎಸೆತದಲ್ಲಿ ದಿಗ್ವೇಶ್ ರಾಥಿ ನಾನ್ ಸ್ಟ್ರೈಕ್‌ನಲ್ಲಿದ್ದ ಜಿತೇಶ್ ಶರ್ಮಾ ಅವರನ್ನು ಮಂಕಡಿಂಗ್ ರನೌಟ್ ಮಾಡಿದ್ದರು. ಚೆಂಡೆಸೆಯುವ ಮುನ್ನ ಕ್ರೀಸ್ ತೊರೆದಿದ್ದ ಜಿತೇಶ್ ಅವರನ್ನು ಗಮನಿಸಿದ ದಿಗ್ವೇಶ್ ಬೌಲಿಂಗ್ ಮಾಡದೇ ಬೇಲ್ಸ್ ಎಗರಿಸಿದರು. ಅಲ್ಲದೆ ರನೌಟ್‌ಗಾಗಿ ಅಂಪೈರ್‌ಗೆ ಮನವಿ ಸಲ್ಲಿಸಿದರು.

ಇತ್ತ ಮೂರನೇ ಅಂಪೈರ್‌ಗೆ ಮನವಿ ಸಲ್ಲಿಸಿದ ಬಳಿಕ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಈ ಮನವಿಯನ್ನು ಹಿಂಪಡೆದಿರಲಿಲ್ಲ ಎಂಬುದು ವಿಶೇಷ.

ಬದಲಾಗಿ ಟಿವಿ ಅಂಪೈರ್ ತೀರ್ಪಿಗಾಗಿ ಕಾದು ನಿಂತಿದ್ದರು.

ಅತ್ತ ಬಿಗ್ ಸ್ಕ್ರೀನ್‌ನಲ್ಲಿ ಮೂರನೇ ಅಂಪೈರ್ ನಾಟೌಟ್ ನೀಡುತ್ತಿ ದ್ದಂತೆ, ಇತ್ತ ಕಡೆಯಿಂದ ರಿಷಭ್ ಪಂತ್ ಮನವಿಯನ್ನು ಹಿಂಪಡೆದರು ಎಂಬುದು ಇಲ್ಲಿ ಉಲ್ಲೇಖಾರ್ಹ. ಈ ಹಿಂದೆ ಕ್ರಿಕೆಟ್ ಅಂಗಳದಲ್ಲಿ ಮಂಕಡಿಂಗ್ ನಡೆದಾಗ, ಮೂರನೇ ಅಂಪೈರ್ ತೀರ್ಪಿಗೂ ಮುನ್ನ ಹಲವು ನಾಯಕರುಗಳು ಮನವಿಯನ್ನು ಹಿಂಪಡೆದು ಕ್ರೀಡಾ ಸ್ಫೂರ್ತಿ ಮೆರೆದಿದ್ದರು.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news


ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966